ದುಡಿವ ಜನರ ಪ್ರಾಣ ಮಿತ್ರ

ಐಕ್ಯರಂಗ

ಸಂಪುಟ 27 ಸಂಚಿಕೆ 11 ಮಾರ್ಚ್ 13, 2005 ಬೆಲೆ ರೂ. 3.00



ಗ್ರಾಮೀಣದತ್ತ ಇಣುಕು
ಉದಾರೀಕರಣದ ತುಣುಕು
ಈ ಬಜೆಟ್



ಮಾರ್ಚ್ 8 ಮಹಿಳಾ ದಿನ

ಮೂಡುತ್ತಿದೆ ಎಚ್ಚರ
ಸಾಗಿದೆ ಸಮರ

ಗ್ರಾಮ ಪಂಚಾಯ್ತಿ ಚುನಾವಣೆ
ಬಿಜೆಪಿ ಕೂಟಕ್ಕೆ ಮತ್ತೊಂದು ಏಟು

ಪೇಟೆಂಟ್ ಕಾಯಿದೆ
ಅನಾಹುತಕಾರಿ ತಿದ್ದುಪಡಿಗಳು

ವ್ಯವಸ್ಥೆ ಬೆತ್ತಲೆಗೊಳಿಸಿದ "ಕುರಿ"

- ಬಿಹಾರ್-ಜಾರ್ಖಂಡ್ ಮುರಿದ ತೀರ್ಪು
- ವೃತ್ತಿ ಶಿಕ್ಷಣ ಕೋರ್ಸ್ : ಬೇಡ ಶುಲ್ಕ ಏರಿಕೆ
- ರೈಲ್ವೆ ಬಜೆಟ್ ರಾಜ್ಯಕ್ಕೇನು?

ಜಾತೀಯತೆ, ಜಾತೀವಾದ, ಅಸ್ಪೃಶ್ಯತೆ

ಆರ್ಥಿಕ ಸಾಮಾಜಿಕ ಅಂಶಗಳನ್ನು ವಿಶ್ಲೇಷಿಸಿದ ಸಿಪಿಐ(ಎಂ) ಸಮ್ಮೇಳನದ ವಿಶ್ಲೇಷಣೆ ಇಲ್ಲಿ

ಸಮ್ಮೇಳನದ ವರದಿಯಿಂದ

ಕರ್ನಾಟಕದಲ್ಲಿ ಜಾತೀಯತೆ ಅನೇಕ ರಂಗಗಳಲ್ಲಿ ಮೆರೆಯುತ್ತಿದೆ. ಚುನಾವಣೆಗಳಲ್ಲಿ ಎಲ್ಲಾ ಬಂಡವಾಳಶಾಹಿ ಪಕ್ಷಗಳೂ ಜಾತೀವಾದವನ್ನು ಬಳಸುತ್ತವೆ. ಆಯಾ ಪ್ರದೇಶದ ಜಾತಿಗಳ ಸಂರಚನೆಯನ್ನಾಧರಿಸಿಯೇ ಅಭ್ಯರ್ಥಿಗಳನ್ನು ನಿಲ್ಲಿಸುತ್ತವೆ. ಜಯಿಸ ಲೆಕ್ಕಾಚಾರ, ರಾಜಕೀಯ ಪಕ್ಷಗಳ ನೇತೃತ್ವವನ್ನು ಜನರ ಮುಂದಿರಿಸುವುದೂ ಜಾತಿಗಳ ಲೆಕ್ಕಾಚಾರದಲ್ಲಿಯೇ. ಮಂತ್ರಿ ಮಂಡಲ ರಚನೆಯಿಂದ ಆರಂಭವಾಗಿ ಇದು ಇಂದು ಸರ್ವ ವ್ಯಾಪಕವಾಗಿ ವಿವಿಗಳ ಕುಲಪತಿ, ಅಕಾಡೆಮಿಗಳ ಅಧ್ಯಕ್ಷ ಸ್ಥಾನ, ವಿ.ವಿ.ಗಳ ಸಿಂಡಿಕೇಟ್, ರಾಜ್ಯ ಸರ್ಕಾರದ ನಿಗಮ, ಮಂಡಳಿಗಳ ಅಧ್ಯಕ್ಷ ಸ್ಥಾನ, ಪ್ರಶಸ್ತಿಗಳ ವಿತರಣೆಗಳಲ್ಲಿ-ಹೀಗೆ ಜಾತಿಯ ಲೆಕ್ಕಾಚಾರಗಳು ಪ್ರಧಾನವಾಗುವುದು ಈ ಸಂಸ್ಥೆಗಳಲ್ಲಿ ಜಾತೀಯತೆ ಹಬ್ಬುವುದಕ್ಕೆ ಕಾರಣವಾಗಿದೆ. ಸರ್ಕಾರಿ ಕಚೇರಿಗಳಲ್ಲಿ, ಶಿಕ್ಷಣ ರಂಗದಲ್ಲಿ, ಅದರಲ್ಲಿಯೂ ಕಾಲೇಜುಗಳು ಮತ್ತು ವಿವಿಗಳಲ್ಲಿ ಅಂಕಗಳ ನೀಡಿಕೆ, ಪರೀಕ್ಷೆಗಳ ತೇರ್ಗಡೆ, ರ್‍ಯಾಂಕ್‌ಗಳ ನೀಡಿಕೆಗಳಲ್ಲಿಯೂ ಜಾತಿಯ ಲೆಕ್ಕಾಚಾರ ತಾಂಡವವಾಡುತ್ತದೆ. ಹೀಗಾಗಿ ವಿ.ವಿ.ಗಳು ಜಾತಿ ಸಂಘರ್ಷದ ತಾಣಗಳಾಗಿವೆ. ಖಾಸಗಿ ಶಿಕ್ಷಣ ಸಂಸ್ಥೆಗಳು ಜಾತಿಯನ್ನನುಸರಿಸಿಯೇ ನೀಡಲ್ಪಟ್ಟವು. ಜಾತಿ ಆಧಾರಿತ ಮಠಗಳು-ಅವುಗಳು ನಡೆಸುವ ಶಿಕ್ಷಣ ಸಂಸ್ಥೆಗಳು, ವಿವಿಧ ಲಾಭಗಳನ್ನು ಪಡೆಯುವುದಕ್ಕಾಗಿ ರಚನೆಯಾದ ಜಾತಿ ಆಧಾರಿತ ಸಂಘಗಳು, ಅವು ನಡೆಸುವ ವಿದ್ಯಾರ್ಥಿ ನಿಲಯಗಳು ಜಾತೀಯತೆಗೆ ಪೋಷಕಗಳಾಗಿವೆ. ನೌಕರರು, ಅಧಿಕಾರಿಗಳು, ಉಪನ್ಯಾಸಕರು, ಪ್ರಾಧ್ಯಾಪಕರು, ಉಪಕುಲಪತಿಗಳ ಭ್ರಷ್ಟಾಚಾರಗಳಿಗೆ ಜಾತಿಯೇ ರಕ್ಷಾಕವಚವಾಗಿದೆ. ಹೀಗೆ ಹಳ್ಳಿಗಳ ಮಟ್ಟದಲ್ಲಿ, ರಾಜ್ಯ ಮಟ್ಟದವರೆಗೆ ವಿವಿಧ ಜಾತಿ, ಉಪಜಾತಿಗಳ ಸಂಘ ಸಂಸ್ಥೆಗಳು ರೂಪುಗೊಂಡಿವೆ. ವಿವಿಧ ಧಾರ್ಮಿಕ ಸಿದ್ಧಾಂತಗಳ ಮಠಮಾನ್ಯಗಳು ಇತ್ತೀಚಿನ ದಶಕಗಳಲ್ಲಿ ಜಾತಿಯತೆಯನ್ನು ಬೆಳೆಸಲು ದೊಡ್ಡ ಕಾಣಿಕೆ ನೀಡುತ್ತಿವೆ. ಈ ಮಠಗಳು ಹೆಚ್ಚು ಹೆಚ್ಚಾಗಿ ರಾಜಕೀಯದಲ್ಲಿ ಮಧ್ಯಪ್ರವೇಶಿಸುತ್ತಿರುವುದು ಜಾತೀವಾದ ಹಬ್ಬಲು ನೆರವಾಗಿದೆ. ಮಠಗಳಿಲ್ಲದ ಜಾತಿಗಳಿಗೂ ಮಠಗಳನ್ನು ಹುಟ್ಟುಹಾಕುವ ಪ್ರಕ್ರಿಯೆ ಆರಂಭವಾಗಿದೆ. ಬ್ಯಾಂಕ್, ಎಲ್.ಐ.ಸಿ., ಸಾರ್ವಜನಿಕ ವಲಯದ ಮತ್ತು ಇತರ ಕಾರ್ಖಾನೆಗಳಲ್ಲಿ ಜಾತಿ ಆಧಾರಿತ ಸಂಘಗಳು ಕೆಲಸ ಮಾಡುತ್ತಿವೆ. ಜಾತಿ ಸಂಘಗಳಲ್ಲಿ ಸಮಾವೇಶದಲ್ಲಿ ಭಾಗವಹಿಸದಿರುವುದು ಆಯಾ ಜಾತಿಯವರ ಅಸಮಾಧಾನಕ್ಕೆ ಕಾರಣವಾಗುತ್ತದೆ.

ಚುನಾವಣೆಯ ಮುನ್ನಾದಿನಗಳಲ್ಲಿಯಂತೂ ಜಾತಿ, ಉಪಜಾತಿಗಳ ಸಮಾವೇಶಗಳು-ಅದರಲ್ಲಿ ಆ ಜಾತಿಗೆ ಸೇರಿದ ಎಲ್ಲಾ ಪಕ್ಷದವರ ಮೆರವಣಿಗೆ, ಆಯಾ ಜಾತಿಗೆ ಸೇರಿದ ನಟ, ನಟಿಯರು, ಕ್ರೀಡಾಪಟುಗಳು, ಕೊನೆಗೆ ವಿಜ್ಞಾನಿಗಳು ಕೂಡ ಇವುಗಳಲ್ಲಿ ಭಾಗವಹಿಸುವುದು ಜಾತಿಯತೆಯ ಮನೋಭಾವವನ್ನು ಬಿತ್ತಿ ಬೆಳೆಸಲು ಕಾರಣವಾಗುತ್ತದೆ.

ಜಾತೀಯತೆ, ಜಾತೀವಾದಿ ರಾಜಕೀಯದ ಬೆಳವಣಿಗೆ ಜಾತಿಗಳ ನಡುವಣ, ಸಂಘರ್ಷಕ್ಕೆ ಕಾರಣವಾಗಿದೆ. ಇಂತಹ ಸನ್ನಿವೇಶದಲ್ಲಿ ಅಂತರ್ಜಾತಿಯ ವಿವಾಹಗಳು, ದಮನಕಾರಿ ಕೃತ್ಯಗಳ ವಿರುದ್ಧ ದಲಿತರ ಪ್ರತಿಭಟನೆಗಳು ಕೆಳಜಾತಿಗಳ ಹಾಗೂ ದಲಿತರ ಮೇಲಿನ ದೌರ್ಜನ್ಯಕ್ಕೆ ಕಾರಣವಾಗಿದೆ.

ಕರ್ನಾಟಕದ ಎಲ್ಲಾ ಹಳ್ಳಿಗಳಲ್ಲಿಯೂ ಪಟ್ಟಣ ನಗರಗಳಲ್ಲಿಯೂ ಅಸ್ಪೃಶ್ಯತೆ ವ್ಯಾಪಕವಾಗಿ ಆಚರಣೆಯಲ್ಲಿದೆ. ಹೋಟೆಲ್‌ಗಳಲ್ಲಿ ಎರಡು ಲೋಟ ಪದ್ಧತಿ, ಕುಡಿಯುವ ನೀರಿನ ಬಾವಿ, ನಲ್ಲಿಗಳಲ್ಲಿ ಅಸ್ಪೃಶ್ಯತೆ ರೂಢಿಯಲ್ಲಿದೆ. ದೇವಸ್ಥಾನಗಳು, ಮಠಗಳಲ್ಲಿ ಭೋಜನಾ ಮಂದಿರ ಇತ್ಯಾದಿ ಧರ್ಮದ ಲೇಪವಿರುವ ಯಾವುದೇ ಜಾಗದಲ್ಲಿ ಅಸ್ಪೃಶ್ಯತೆ ಆಚರಣೆಯಲ್ಲಿದೆ. ಅನೇಕ ಮಠಗಳಲ್ಲಿ ಬ್ರಾಹ್ಮಣ - ಬ್ರಾಹ್ಮಣೇತರ ನಡುವೆಯೂ ಪಂಕ್ತಿ ಬೇಧದ ಆಚರಣೆ ಚಾಲ್ತಿಯಲ್ಲಿದೆ. ರಾಜ್ಯದಲ್ಲಿ ಅರೆಪಾಳೆಯಗಾರಿ ಭೂ ಸಂಬಂಧಗಳನ್ನು ಹೊಂದಿರುವ ಪ್ರದೇಶಗಳಲ್ಲಿ ಅಸ್ಪೃಶ್ಯತೆ ದಲಿತರಮೇಲಿನ ನಿತ್ಯದೌರ್ಜನ್ಯವಾಗಿ ಚಾಲ್ತಿಯಲ್ಲಿದೆ. ಕೂಲಿಕಾರರು ಕೂಲಿ ಹೆಚ್ಚಿಸಲು ಕೇಳುವುದೇ ನೆಪವಾಗಿ ದಲಿತರ ಮೇಲೆ ಆಕ್ರೋಶ ಉಕ್ಕಿ ಹರಿಯುತ್ತದೆ ಮತ್ತು ದೌರ್ಜನ್ಯಗಳಿಗೆ ಕಾರಣವಾಗುತ್ತದೆ.


ನೆಲವಿಲ್ಲ ನೆಲೆಯಿಲ್ಲ

ದಲಿತರ ಎಚ್ಚರ, ಪ್ರಜಾಸತ್ತಾತ್ಮಕ ತುಡಿತ, ದಲಿತ Assertion ಗಳು ದಲಿತರ ಮೇಲಿನ ದೌರ್ಜನ್ಯಗಳ ಹೆಚ್ಚಳಕ್ಕೆ ಕಾರಣವಾಗಿವೆ. ಆದರೆ ಅದೇ ಸಮಯದಲ್ಲಿ ಕೆಲವು ಬಾರಿ ದಲಿತರ ರಕ್ಷಣೆಗಾಗಿರುವ ಕಾನೂನಿನ ದುರ್ಬಳಕೆ, ಕೆಲವು ದಲಿತರಿಂದ ಆಕ್ರಮಣಕಾರಿ ವರ್ತನೆಗಳೂ ಕೆಲವೊಮ್ಮೆ ಜಾತಿ ವೈಷಮ್ಯಗಳಿಗೆ ಕಾರಣವಾಗಿವೆ.

ನಮ್ಮ ಪಕ್ಷದಿಂದ ಜಾತಿವಾದದ ವಿರುದ್ಧ, ಅಸ್ಪೃಶ್ಯತೆ ವಿರುದ್ಧ ಪ್ರಚಾರಾಂದೋಲನ, ಶಿಕ್ಷಣ ಮತ್ತು ಚಳುವಳಿಗಳನ್ನು ರೂಪಿಸಿಲ್ಲ. ಅವು ನಮ್ಮ ದೈನಂದಿನ ಚಟುವಟಿಕೆಗಳ ಭಾಗವಾಗಿಲ್ಲ. ದಲಿತರ ಮೇಲೆ ದೌರ್ಜನ್ಯವಾದ ಪ್ರಕರಣಗಳಲ್ಲಿ ಕೆಲವು ಕಡೆ ಮಾತ್ರ ಮಧ್ಯಪ್ರವೇಶ ಮಾಡಲಾಗಿದೆ. ದಲಿತ ಸಂಘರ್ಷ ಸಮಿತಿ ವೈಯಕ್ತಿಕ ಹಿತಾಸಕ್ತಿಗಳಿಂದ ಒಡೆದು ದಲಿತ ಹಾಗೂ ಇತರ ಜನ ಸಮುದಾಯದಿಂದ ದೂರವಾಗುತ್ತಿರುವ ಸನ್ನಿವೇಶದಲ್ಲಿ ಅಸ್ಪೃಶ್ಯತೆ ವಿರುದ್ಧ ಪ್ರಬಲ ಆಂದೋಲನವನ್ನು ರೂಪಿಸಬೇಕು. ಜಾತಿಯತೆಯ ಆಚರಣೆ ಜಾತಿವಾದದ ವಿರುದ್ಧ ನಿರಂತರ ಪ್ರಚಾರಾಂದೋಲನವನ್ನು ಕೈಗೊಳ್ಳಬೇಕು. ಜೊತೆಜೊತೆಗೆ ಗ್ರಾಮೀಣ ಪ್ರದೇಶದಲ್ಲಿ ಕಾರ್ಮಿಕ ಆಂದೋಲನವನ್ನು ಬಡಿದೆಬ್ಬಿಸುವ ಮೂಲಕ ದಲಿತ ಹಿಂದುಳಿದ ಜಾತಿಗಳ ಜನರನ್ನು ವ್ಯಾಪಕವಾಗಿ ಸೆಳೆಯಬೇಕು. **ಎಲ್ಲ ದುಡಿಯುವ ಜನರ ಐಕ್ಯತೆ ಸಾಧಿಸುವ ಮೂಲಕ ಅಸ್ಪೃಶ್ಯತೆ, ಜಾತಿವಾದದ ವಿರುದ್ಧ ಸೆಣಸಬೇಕು.**

ಸಿಪಿಐ(ಎಂ) ಸಂವಿಧಾನದ ಕಲಮು 25ರ ಪ್ರಕಾರ

ಪಕ್ಷದ ಸಂವಿಧಾನ ತಿದ್ದುಪಡಿಗೆ ನೀಡಲಾದ ನೋಟೀಸ್

2005 ಜನವರಿ 8ರಿಂದ 10ರವರೆಗೆ ಜರುಗಿದ ಪಕ್ಷದ ಕೇಂದ್ರ ಸಮಿತಿಯು ಪಕ್ಷದ ಸಂವಿಧಾನದ ಕಲಮು 18ರ ವಿಭಾಗ 3ಕ್ಕೆ ತಿದ್ದುಪಡಿ ಮಾಡುವ ಪ್ರಸ್ತಾಪವೊಂದನ್ನು ಮುಂಬರುವ ಪಕ್ಷದ 18ನೇ ಮಹಾಧಿವೇಶನದಲ್ಲಿ ಮಂಡಿಸಲು ನಿರ್ಧರಿಸಿತು.

ಉದ್ದೇಶಿತ ತಿದ್ದುಪಡಿ ಪ್ರಸ್ತಾಪವು ಈ ಕೆಳಗಿನಂತಿದೆ:

ಕಲಮು 18, ವಿಭಾಗ 3 :

"ಕೇಂದ್ರ ನಿಯಂತ್ರಣಾ ಆಯೋಗದ ನಿರ್ಣಯವು ಅಂತಿಮವೂ ಹಾಗೂ ಬದ್ಧಕ (binding)ವೂ ಆಗಿರುತ್ತದೆ" ಎಂಬ ಈ ಸಾಲಿನ ಮುಂದೆ ಈ ಕೆಳಗಿನ ವಾಕ್ಯಗಳನ್ನು ಸೇರಿಸುವುದು.

"ಆದರೆ, ಅಸಾಧಾರಣ ಸಂದರ್ಭಗಳಲ್ಲಿ, ಕೇಂದ್ರ ಸಮಿತಿಯು ಕೇಂದ್ರ ನಿಯಂತ್ರಣಾ ಆಯೋಗದ ನಿರ್ಣಯಗಳನ್ನು ತಡೆಹಿಡಿಯಬಹುದು, ಮಾರ್ಪಡಿಸಬಹುದು. ಅಥವಾ ಬದಲಾಯಿಸಬಹುದು. ಅಂತಹ ಯಾವುದೇ ನಿರ್ಣಯವು ಹಾಜರಿದ್ದು ಮತ ಹಾಕಿದವರ ಪೈಕಿ ಮೂರರಲ್ಲಿ ಎರಡರಷ್ಟು ಬಹುಮತಕ್ಕೆ ಕಡಿಮೆಯಾಗದ ಬೆಂಬಲವನ್ನು ಪಡೆಯಬೇಕು. ಅಂತಹ ಎಲ್ಲಾ ನಿರ್ಣಯಗಳನ್ನು ಪಕ್ಷದ ಮುಂದಿನ ಅಖಿಲ ಭಾರತ ಅಧಿವೇಶನದಲ್ಲಿ ವರದಿ ಮಾಡತಕ್ಕದ್ದು."

ಪ್ರಸಕ್ತ ತಿದ್ದುಪಡಿ ಪ್ರಸ್ತಾಪದ ಕುರಿತು ವಿವರಣೆ : ಕೇಂದ್ರ ನಿಯಂತ್ರಣ ಆಯೋಗದ ನ್ಯಾಯ ವ್ಯಾಪ್ತಿ ಮತ್ತು ಅಧಿಕಾರದ ಕುರಿತಾದ ಇಡೀ ಪ್ರಶ್ನೆಯನ್ನು ಪರಿಶೀಲಿಸಿ ಯಾವುದಾದರೂ ಪ್ರಸ್ತಾವಗಳಿದ್ದರೆ ಅವುಗಳನ್ನು ಪಕ್ಷದ ಮುಂದಿನ ಮಹಾಧಿವೇಶನದ ಮುಂದೆ ತರುವಂತೆ ಪಕ್ಷದ 17ನೇ ಮಹಾಧಿವೇಶನವು ಪಕ್ಷದ ನೂತನ ಕೇಂದ್ರ ಸಮಿತಿಗೆ ನಿರ್ದೇಶನ ನೀಡಿತ್ತು. ಈ ನಿರ್ದೇಶನಕ್ಕೆ ಅನುಗುಣವಾಗಿ ಪಕ್ಷದ ಕೇಂದ್ರ ಸಮಿತಿಯು ಮೇಲಿನ ತಿದ್ದುಪಡಿ ಪ್ರಸ್ತಾಪವನ್ನು ತಂದಿದೆ. ಸಂವಿಧಾನದಲ್ಲಿ ಪಕ್ಷದ ಕೇಂದ್ರ ಸಮಿತಿಗೆ ಮತ್ತು ಕೇಂದ್ರ ನಿಯಂತ್ರಣಾ ಆಯೋಗಕ್ಕೆ ನೀಡಲಾದ ಅಧಿಕಾರಗಳ ಬಗ್ಗೆ ಇದ್ದಂತೆ ಕಾಣುವ ವಿರೋಧಾಭಾಸಗಳನ್ನು ಸರಿಪಡಿಸುವುದೇ ಈ ತಿದ್ದುಪಡಿ ಪ್ರಸ್ತಾವದ ಉದ್ದೇಶವಾಗಿದೆ.

ಪಕ್ಷದ ಸಂವಿಧಾನದ ಕಲಮು 15ರ ಪ್ರಕಾರ ಪಕ್ಷದ ಎರಡು ಅಖಿಲ ಭಾರತ ಮಹಾಧಿವೇಶನಗಳ ನಡುವೆ ಪಕ್ಷದ ಕೇಂದ್ರ ಸಮಿತಿಯೇ ಪಕ್ಷದ ಅತ್ಯುನ್ನತ ಅಧಿಕಾರವನ್ನು ಹೊಂದಿರುತ್ತದೆ ಮತ್ತು ಪಕ್ಷದ ಸಂವಿಧಾನದ ಅನುಷ್ಠಾನದ ಹೊಣೆಗಾರಿಕೆಯನ್ನು ಹೊಂದಿರುತ್ತದೆ. ಪಕ್ಷದ ಎದುರು ಬರುವ ಯಾವುದೇ ಪ್ರಶ್ನೆಯ ಕುರಿತು ಸಂಪೂರ್ಣ ಅಧಿಕಾರದೊಂದಿಗೆ ನಿರ್ಣಯಗಳನ್ನು ಕೈಗೊಳ್ಳುವ ಹಕ್ಕು ಕೇಂದ್ರ ಸಮಿತಿಯದ್ದಾಗಿರುತ್ತದೆ ಎಂದು ಸಹ ಸಂವಿಧಾನದಲ್ಲಿ ಸ್ಪಷ್ಟಪಡಿಸಲಾಗಿದೆ. ಆದರೆ ಪಕ್ಷದ ಸಂವಿಧಾನದ ಕಲಮು 18 ಕೇಂದ್ರ ನಿಯಂತ್ರಣಾ ಸಮಿತಿಯ ನಿರ್ಣಯವು ಅಂತಿಮವೂ ಬದ್ಧಕವೂ ಆಗಿದೆ ಎಂದು ಹೇಳುತ್ತದೆ.

ಕೇಂದ್ರ ನಿಯಂತ್ರಣಾ ಆಯೋಗದ ನಿರ್ಣಯಗಳಲ್ಲಿ ಕೇಂದ್ರ ಸಮಿತಿಗೆ ಮಧ್ಯಪ್ರವೇಶ ಮಾಡಲು ಸ್ಪಷ್ಟ ಅವಕಾಶದ ಕೊರತೆಯು ಗೊಂದಲಕ್ಕೆ ಕಾರಣವಾಗಿದೆ. ಕೇಂದ್ರ ನಿಯಂತ್ರಣಾ ಆಯೋಗದ ಅಧಿಕಾರವನ್ನು ಮತ್ತು ಋಜುತ್ವವನ್ನು (integrity) ಕಾಪಾಡಬೇಕು ಅದೇ ಸಮಯದಲ್ಲಿ, ಯಾವುದಾದರೂ ವಿಶೇಷ ಪರಿಸ್ಥಿತಿಯಲ್ಲಿ, ಕೇಂದ್ರ ಸಮಿತಿಗೆ ಮಧ್ಯಪ್ರವೇಶ ಮಾಡುವ ಅಧಿಕಾರವಿರಬೇಕು.

ಪಕ್ಷದ ಕೇಂದ್ರ ಸಮಿತಿಯು ಪಕ್ಷದ ಸಂವಿಧಾನವನ್ನು ಅನುಷ್ಠಾನಗೊಳಿಸುವ ಮತ್ತು ಪಕ್ಷದ ಎದುರು ಬರುವ ಯಾವುದೇ ಪ್ರಶ್ನೆಯ ಕುತು ನಿರ್ಣಯಗಳನ್ನು ಕೈಗೊಳ್ಳುವ ಸಂಪೂರ್ಣ ಅಧಿಕಾರವನ್ನು ಹೊಂದಿದ್ದು ಅದು, ಅಸಾಧಾರಣ ಸಂದರ್ಭಗಳಲ್ಲಿ, ಕೇಂದ್ರ ನಿಯಂತ್ರಣಾ ಆಯೋಗದ ನಿರ್ಣಯಗಳ ಮೇಲೂ ಮಧ್ಯಪ್ರವೇಶ ಮಾಡಬಹುದು ಎಂಬುದನ್ನು ಸ್ಪಷ್ಟಪಡಿಸುವುದೇ ಈ ತಿದ್ದುಪಡಿಯ ಉದ್ದೇಶವಾಗಿದೆ.

ಕೇಂದ್ರ ನಿಯಂತ್ರಣಾ ಆಯೋಗದ ನಿರ್ಣಯದ ಮೇಲೆ ಕೇಂದ್ರಸಮಿತಿ ಮಧ್ಯಪ್ರವೇಶ ಮಾಡಲು ಈ ತಿದ್ದುಪಡಿ ಪ್ರಸ್ತಾಪವು ಮೂರು ಷರತ್ತುಗಳನ್ನು ವಿಧಿಸುತ್ತದೆ:

1. ಕೇಂದ್ರ ಸಮಿತಿಯು ಅಸಾಧಾರಣ ಸಂದರ್ಭಗಳಲ್ಲಿ ಮಾತ್ರ ಮಧ್ಯಪ್ರವೇಶ ಮಾಡಬಹುದು.
2. ಕೇಂದ್ರ ಸಮಿತಿಯ ನಿರ್ಣಯವು ಹಾಜರಿದ್ದು ಮತ ಚಲಾಯಿಸಿದವರ ಪೈಕಿ ಮೂರರಲ್ಲಿ ಎರಡರಷ್ಟು ಬಹುಮತಕ್ಕೆ ಕಮ್ಮಿ ಯಾಗದಷ್ಟು ಬೆಂಬಲವನ್ನು ದೊರಕಿಸಿಕೊಳ್ಳಬೇಕು.
3. ಕೇಂದ್ರ ಸಮಿತಿಯ ನಿರ್ಣಯಗಳನ್ನು ಪಕ್ಷದ ಮುಂದಿನ ಅಖಿಲ ಭಾರತ ಮಹಾಧಿವೇಶನದಲ್ಲಿ ವರದಿ ಮಾಡಬೇಕು.

ಇಂದಿಗಾಗಿ ನಾಳಿನ ಕಾರ್ಯಕ್ರಮಗಳು

- **ಮಾರ್ಚ್ 6-12, 2005** ಸಾಮಾನ್ಯ ಕನಿಷ್ಠ ಕಾರ್ಯಕ್ರಮ ಜಾರಿಗೆ ಒತ್ತಾಯಿಸಿ ಪ್ರತಿಭಟನಾ ಸಪ್ತಾಹ - ಕೇಂದ್ರ ಕಾರ್ಮಿಕ ಸಂಘಟನೆಗಳ ಕರೆ
- **ಮಾರ್ಚ್ 8, 2005** ಅಂತರ್ರಾಷ್ಟ್ರೀಯ ಮಹಿಳಾ ದಿನಾಚರಣೆ
- **ಮಾರ್ಚ್ 10, 2005** ಅಂತರ್ರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ರಾಜ್ಯದಾದ್ಯಂತ ಮಹಿಳೆಯರ ಬೇಡಿಕೆ ದಿನ - ಜನವಾದಿ ಮಹಿಳಾ ಸಂಘಟನೆ ಕರೆ
- **ಮಾರ್ಚ್ 12-13, 2005** ಕೆಲಸದ ಹಕ್ಕು ಮೂಲಭೂತ ಹಕ್ಕಿಗಾಗಿ ಅಖಿಲ ಭಾರತ ಸಮಾವೇಶ - ಕಲ್ಕತ್ತ (ಸಾಲ್ಟ್‌ಲೇಕ್ ಸ್ಟೇಡಿಯಂ) ಸಿಐಟಿಯು ಆಶ್ರಯದಲ್ಲಿ
- **ಮಾರ್ಚ್ 20, 2005** ಇರಾಕ್ ನೆಲದಿಂದ ಅಮೆರಿಕಾ ತೊಲಗಲಿ - 2 ವರ್ಷಗಳ ಅಮೆರಿಕಾ ಆಕ್ರಮಣ ವಿರೋಧಿಸಿ ಯುದ್ಧ ವಿರೋಧಿ ರ್‍ಯಾಲಿಗಳು

ಪಂಚಾಯತ್ ಚುನಾವಣೆ ಬಿಜೆಪಿ ಕೂಟಕ್ಕೆ ಮತದಾರ ಕೊಟ್ಟ ಮತ್ತೊಂದು ಏಟು

ಗ್ರಾಮಪಂಚಾಯತ್ ಚುನಾವಣೆಯಲ್ಲಿ ಜನರ ಭಾಗವಹಿಸುವಿಕೆ ಪ್ರಜಾಸತ್ತಾತ್ಮಕ ಆಕಾಂಕ್ಷೆಗಳ ಪ್ರತೀಕವಾಗಿತ್ತು. ಈ ಬಾರಿ ಮತ್ತೊಮ್ಮೆ ಕೋಮುವಾದಿಗಳನ್ನು ತಿರಸ್ಕಾರಿಸಿದ್ದಾರೆ ಜನತೆ

ಫೆಬ್ರವರಿ 25 ಮತ್ತು 27 ರಂದು ಎರಡು ಹಂತಗಳಲ್ಲಿ ಗ್ರಾಮ ಪಂಚಾಯತ್‌ಗೆ ಚುನಾವಣೆಗಳು ನಡೆದು ಫಲಿತಾಂಶವೂ ಪ್ರಕಟವಾಗಿದೆ. ಒಟ್ಟು 5450 ಪಂಚಾಯತ್‌ಗಳ 82935 ಸ್ಥಾನಗಳಿಗೆ ಚುನಾವಣೆ ನಡೆಯಿತು.

ಅಧಿಕಾರ ವಿಕೇಂದ್ರೀಕರಣದ ನಿಟ್ಟಿನಲ್ಲಿ ನಡೆದ ಈ ಪ್ರಜಾಪ್ರಭುತ್ವೀಯ ಪ್ರಕ್ರಿಯೆ ಮಹತ್ತರವಾದುದು. ಸಾಮಾಜಿಕವಾಗಿ - ಆರ್ಥಿಕವಾಗಿ ತುಳಿತಕ್ಕೊಳಗಾದ ವಿವಿಧ ಜಾತಿ-ಜನವಿಭಾಗಗಳಿಂದ, ಮಹಿಳೆಯರನ್ನೂ ಒಳಗೊಂಡು ಸಾವಿರಾರು ಅಭ್ಯರ್ಥಿಗಳು ಸ್ಪರ್ಧೆಗೆ ಮುಂದಾದದ್ದು ಲಭ್ಯ ಅವಕಾಶವನ್ನು ಬಳಸುವ, ಪ್ರಜಾಸತ್ತಾತ್ಮಕ ಆಕಾಂಕ್ಷೆಯ ಪ್ರತೀಕವಾಗಿದೆ.

ರಾಜ್ಯದ ಅನೇಕ ಕಡೆಗಳಲ್ಲಿ ಲೆಕ್ಕಾಚಾರಗಳು ತಲೆ ಕೆಳಗಾಗಿವೆ. ಅನಿರೀಕ್ಷಿತ ಫಲಿತಾಂಶಗಳು ಬಂದಿವೆ. ಇದು ಯಾವುದೇ ಪಕ್ಷದ ಹಾಗೂ ಆ ಪಕ್ಷಗಳ ಚಿಹ್ನೆಯ ಆಧಾರದಲ್ಲಿ ಸ್ಪರ್ಧೆ ಇಲ್ಲವಾದರೂ ಸಾಮಾನ್ಯವಾಗಿ ಸ್ಪರ್ಧಿಗಳು ಒಂದಿಲ್ಲೊಂದು ಪಕ್ಷದ ಬೆಂಬಲಿಗರು ಅಥವಾ ಕಾರ್ಯಕರ್ತರೇ ಆಗಿದ್ದಾರೆ. ನಿಖರವಾಗಿ ಪಕ್ಷದ ಚಿಹ್ನೆಗಳಿಲ್ಲದಿರುವುದರಿಂದ ಗೆದ್ದವರೆಲ್ಲಾ ನಮ್ಮವರೇ ಎಂದು ಹೇಳಿಕೊಂಡರೂ ರಾಜ್ಯದಲ್ಲಿ ಈ ಚುನಾವಣೆಯಲ್ಲಿ ಕೋಮುವಾದಿ ಬಿಜೆಪಿ ಮತ್ತು ಅದರ ಮಿತ್ರ ಪಕ್ಷ ಜೆಡಿ(ಯು) ಪಕ್ಷಗಳು ಗಳಿಸಿರುವ ಸಂಸತ್, ಶಾಸಕರ ಸ್ಥಾನಮಾನಗಳಿಗೆ ಹೋಲಿಸಿದರೆ ಗ್ರಾಮ ಪಂಚಾಯತ್ ಚುನಾವಣೆಯಲ್ಲಿ ಮತದಾರರು ಇವರನ್ನು ಪರಿಗಣಿಸಿಲ್ಲ ಮತ್ತು ಬಹುತೇಕ ಕಡೆ ಸೋಲು ಕಂಡಿದ್ದಾರೆ ಎಂಬುದನ್ನು ಕಾಣಬಹುದು. ಈಗಲೂ ರಾಜ್ಯದಲ್ಲಿ ಜನತೆಯ ಒಲವು ಸೆಕ್ಯುಲರ್ ಶಕ್ತಿಗಳ ಕಡೆಗೆ ಎಂಬುದು ಧರ್ಮನಿರಪೇಕ್ಷತೆಯ ರಾಜಕಾರಣಕ್ಕೆ ಜನಬೆಂಬಲವನ್ನು ತೋರಿಸುತ್ತದೆ. ಆ ಮಟ್ಟಿನಲ್ಲಿ ಕೋಮುವಾದಿಗಳಿಗೆ ನೆಲೆಯೊದಗಿಸದೇ ಇರುವ ದೃಢ ಸಂಕಲ್ಪ ಕಾಣುತ್ತದೆ.

ಬಹಳಷ್ಟು ಜಿಲ್ಲೆಗಳಲ್ಲಿ ಕಾಂಗ್ರೆಸ್ ಮೇಲುಗೈ ಪಡೆದಿದೆ. ಹಲವೆಡೆ ಜೆಡಿ(ಎಸ್) ಪಡೆದಿದೆ. ಈ ಸ್ಥಿತಿಯನ್ನು ಫಲಿತಾಂಶಗಳ ಪೂರ್ಣ ವಿವರ ಜಿಲ್ಲಾವಾರಾಗಿ ಲಭಿಸಿದ ಬಳಿಕ ನಿಖರವಾಗಿ ವಿಶ್ಲೇಷಿಸಬಹುದು.

ಈ ಚುನಾವಣೆ ಸಂದರ್ಭದಲ್ಲಿಯೇ ಪ್ರಜಾಸತ್ತಾತ್ಮಕ ಮೌಲ್ಯ - ಪ್ರಕ್ರಿಯೆಗೆ ಅಪಾಯಕಾರಿಯಾದ ಅನಾರೋಗ್ಯದ ಪ್ರವೃತ್ತಿ ಹಾಗೂ ಕೃತ್ಯಗಳು ಜರುಗಿವೆ. ಚುನಾವಣೆಯಲ್ಲಿ ಸ್ಪರ್ಧೆ ಪೈಪೋಟಿ ಸಹಜ. ಆದರೆ ಮೇಲುಗೈ ಸಾಧಿಸಲು ಮತದಾರರಿಗೆ ಹಣ, ಹೆಂಡ

ಈವಾರ ಕರ್ನಾಟಕ ಒಂದು ನೋಟ

— ಎಸ್.ವೈ.ಗುರುಶಾಂತ್

ಆಮಿಷಗಳ ಹಂಚಿಕೆ ವಿಪರೀತವಾಗಿ ನಡೆದಿರುವುದು. ಒಂದೊಂದು ಸ್ಥಾನಕ್ಕೂ ಲಕ್ಷಾಂತರ ರೂಪಾಯಿಗಳನ್ನು ಅಭ್ಯರ್ಥಿಗಳು ಖರ್ಚು ಮಾಡಿರುವುದು ಹಣವುಳ್ಳ ಗ್ರಾಮೀಣ ಶ್ರೀಮಂತರು, ಜಮೀನ್ದಾರರು, ಕಂಟ್ರಾಕ್ಟ್‌ದಾರರು ಮುಂತಾದವರೇ ಮೇಲುಗೈ ಸಾಧಿಸುವ ಸ್ಥಿತಿಯನ್ನು ನಿರ್ಮಿಸಿತಲ್ಲದೇ, ಸಾಮಾನ್ಯ, ದುರ್ಬಲ ವರ್ಗದ ವಿಭಾಗಗಳು ಇಲ್ಲೂ ಸೆಣಸಲಾಗದೆ, ಮೂಲೆ ಗುಂಪಾಗುವ ಇಲ್ಲವೇ ಉಳ್ಳವರ ಬಾಲಂಗೋಚಿಗಳಾಗುವ ಒತ್ತಡವನ್ನು ನಿರ್ಮಿಸಿತು. ಹೀಗೆ ಹಣ ಹರಿಸಿ ಗೆದ್ದ ಮೇಲೆ ಪಂಚಾಯಿತಿಯಲ್ಲಿ ಅಧಿಕಾರ ಗಿಟ್ಟಿಸುವ ಸಂದರ್ಭ ಸಾಧಕ



ರಾಜಕಾರಣಕ್ಕೆ ಎಡೆ ಮಾಡುವುದಲ್ಲದೇ ಆ ಸ್ಥಾನ-ಮಾನ ಬಳಸಿ ಅಕ್ರಮ ಆಸ್ತಿ ಮಾಡುವ, ಅಭಿವೃದ್ಧಿಗೆಂದು ಬರುವ ಹಣದಲ್ಲಿ ಭ್ರಷ್ಟಾಚಾರಕ್ಕಿಳಿದು ಹಣ ಮಾಡುವ ಜನದ್ರೋಹಿ ಲೆಕ್ಕಾಚಾರವೂ ಇದೆ. ಹೀಗೆ ಭ್ರಷ್ಟಾಚಾರ ಎಂಬುದು ಗ್ರಾಮೀಣ ಶ್ರೀಮಂತ ಸ್ಥಾಪಿತ ಹಿತಾಸಕ್ತಿ ವರ್ಗಗಳಿಂದ ಅದು ತಮ್ಮ ಹಕ್ಕು ಎಂಬಂತೆ ಬಳಸುತ್ತವೆ. ಹೀಗಾಗಿ ಗ್ರಾಮೀಣ ಅಭಿವೃದ್ಧಿಗೆ ಸಿಗುವ ಸೀಮಿತ ಸಂಪನ್ಮೂಲಗಳು ಜನದತ್ತ ಹರಿಯದೇ ಇಂತಹವರ ಹೊಟ್ಟೆ ಸೇರುತ್ತವೆ.

ಈ ಚುನಾವಣೆಯಲ್ಲಿ ಜಾತೀಯ ಅಂಶವೂ ಬಹಳಷ್ಟು ಬಳಕೆಯಾಗಿದೆ. ಚುನಾವಣೆಯಲ್ಲಿ ನಿಜವಾದ ಜನತೆಯ ಪ್ರಶ್ನೆಗಳ-ರಾಜಕೀಯ ವಿಷಯಗಳನ್ನು ಈ ಜಾತಿಯ ಅಂಶವು ಮಸಕಾಗಿಸುವ, ಮೂಲೆಗೊತ್ತುವ ಅಪಾಯಕಾರಿ ಪಾತ್ರ ವಹಿಸಿದೆ. ಪಶ್ಚಿಮ ಬಂಗಾಳದಂತಹ ಕಡೆಗಳಲ್ಲಿ ಈ ಅನಾಹುತಕಾರಿ ಪ್ರವೃತ್ತಿಗಳಿಗೆ ತಡೆಯೊಡ್ಡಲಾಗಿದೆಯಲ್ಲದೇ ಕೆಳಸ್ತರದ, ದುಡಿವವರ್ಗದ ಪ್ರತಿನಿಧಿಗಳೇ ಮೇಲುಗೈ ಸಾಧಿಸಿ ಗೆಲ್ಲುತ್ತಿದ್ದಾರೆ. ಈ ಸನ್ನಿವೇಶದಲ್ಲಿಯೂ ಇಂತಹ ಜನವಿರೋಧಿ ರಾಜಕಾರಣವನ್ನು ಗ್ರಾಮೀಣ ಪ್ರದೇಶದ ಭೂಮಾಲೀಕ-ಸ್ಥಾಪಿತ ಹಿತಾಸಕ್ತಿಗಳನ್ನು ಎದುರಿಸಿ ದುಡಿಯುವ ವರ್ಗದ ಅಭ್ಯರ್ಥಿಗಳು ಸ್ಪರ್ಧಿಸಿ ಹೋರಾಡಿದ್ದು, ಮತ್ತು ಗೆದ್ದಿರುವುದು ಅತ್ಯಂತ ಆಶಾದಾಯಕ, ಅಭಿನಂದನೀಯವಾಗಿದೆ.

ಗ್ರಾಮ ಪಂಚಾಯ್ತಿಗಳ ಮೂಲಕ ಅಲ್ಲಿನ ಅಧಿಕಾರ ಬಳಸಿ ಜನಪರವಾದ ಆಡಳಿತ ನೀಡಲು, ಇರುವ ಅಧಿಕಾರ ಜನತೆಗಾಗಿ ಬಳಸಲು ಅದನ್ನೊಂದು ಹೋರಾಟದ ವೇದಿಕೆಯನ್ನಾಗಿ ಪರಿವರ್ತಿಸಿ ಬಳಸಲು, ನಿರ್ಧರಿಸಿದ ಸಿಪಿಐಎ(ಎಂ) ಪಕ್ಷವು ರಾಜ್ಯದಲ್ಲಿ ಕೋಮುವಾದಿಗಳನ್ನು ಹಾಗೂ ಅದರ ಕೂಟಕ್ಕೆ ನೆಲೆಯಾಗದಂತೆ ತಡೆಯೊಡ್ಡುವ ನಿರ್ಧಾರದಿಂದ ಚುನಾವಹಣೆ ಹೋರಾಟದ ಗುರಿ ಇರಿಸಿಕೊಂಡು ಮುನ್ನಡೆಯಲು ತೀರ್ಮಾನಿಸಿತ್ತು.

ಜನತೆಯ ಪ್ರಜಾಸತ್ತಾತ್ಮಕ ಶಕ್ತಿಯ ಪ್ರಾತಿನಿಧ್ಯವನ್ನು ದುಡಿವ ವರ್ಗದ ಸ್ವತಂತ್ರ ಶಕ್ತಿಯನ್ನು ಹೆಚ್ಚಿಸಿಕೊಳ್ಳಲು ಈ ಸಂದರ್ಭದಲ್ಲಿ ಪರಿಣಾಮಕಾರಿಯಾಗಿ ಹೋರಾಡಲು ನಿರ್ಧರಿಸಿತ್ತು. ಈಗ ದೊರೆತ ಮಾಹಿತಿಗಳಂತೆ ಸಿಪಿಐ(ಎಂ) ಮತ್ತು ಸಿಪಿಐ(ಎಂ) ಬೆಂಬಲಿತ ಅಭ್ಯರ್ಥಿಗಳು ಸುಮಾರು ಸ್ಥಾನಗಳಲ್ಲಿ ಗೆದ್ದಿದ್ದು ಉತ್ತಮ ಮುನ್ನಡೆ ಸಾಧಿಸಿದೆ. ಈ ಗೆಲುವು ಎಲ್ಲೆಲ್ಲಿ ಜನತೆಯ ಚಳುವಳಿ, ರೈತರ-ಕೂಲಿಕಾರರ, ಯುವಜನ-ಮಹಿಳೆಯರ ಶೋಷಿತರ ಹೋರಾಟಗಳು ನಡೆದು, ಸ್ಥಾಪಿತ ಹಿತಾಸಕ್ತಿಗಳನ್ನೆದುರಿಸಲಾಗಿದೆಯೋ ಅಲ್ಲಿನ ವಿಭಾಗಗಳಿಂದಲೇ ಅಭ್ಯರ್ಥಿಗಳು ಹೊರಹೊಮ್ಮಿದ್ದಾರೆ, ಗೆದ್ದಿದ್ದಾರೆ ಎಂಬುದು ಗಮನಾರ್ಹವಾಗಿದೆ.

ಪಂಚಾಯ್ತಿ ಆಯ್ಕೆಯಾದ ಸದಸ್ಯರು ಗ್ರಾಮ ಪಂಚಾಯ್ತಿಗಳ ಅಧ್ಯಕ್ಷರು, ಉಪಾಧ್ಯಕ್ಷರುಗಳನ್ನು ಆರಿಸಬೇಕಿದ್ದು, ಅಲ್ಲಿಯು ದುಡಿಯುವರ್ಗದ ಪ್ರತಿನಿಧಿಗಳು ಮೇಲುಗೈ ಸಾಧಿಸಲಿ.

ರೈಲ್ವೆ ಬಜೆಟ್ : ಕರ್ನಾಟಕಕ್ಕೆ ಕೊಟ್ಟಿದ್ದೇನು?

ಲಾಲೂ ಪ್ರಸಾದ್ ಯಾದವ್‌ರವರು ಮಂಡಿಸಿದ ರೈಲ್ವೆ ಬಜೆಟ್ ಕರ್ನಾಟಕದ ನಿರೀಕ್ಷೆಗೆ ಸ್ಪಂದಿಸಿದೆಯೇ?

ಯುಪಿಎ ಸರ್ಕಾರದ ರೈಲ್ವೆ ಬಜೆಟ್ ಜನಸಾಮಾನ್ಯರ ಮೇಲೆ ಅತೀ ಹೆಚ್ಚಿನ ಹೊರೆಯನ್ನು ಹೊರಿಸಿಲ್ಲ. ಆದರೆ ರಾಜ್ಯಗಳಲ್ಲಿ ಆಗಬೇಕಾದ ರೈಲ್ವೆ ಯೋಜನೆಗಳ ಅಭಿವೃದ್ಧಿಗೆ ಅಗತ್ಯವಾದ ಗಮನವಿಲ್ಲ.

ಕರ್ನಾಟಕವನ್ನೇ ತೆಗೆದುಕೊಳ್ಳೋಣ. ರಾಜ್ಯದ ರೈಲ್ವೆ ಮಾರ್ಗಗಳ ಅಭಿವೃದ್ಧಿ ಯೋಜನೆ ಹಲವಾರು ದಶಕಗಳಿಂದಲೂ ನೆನೆಗುದಿಗೆ ಬಿದ್ದಿದೆ. ರಾಜ್ಯದಲ್ಲಿ ಅಭಿವೃದ್ಧಿ ಸಾಧಿಸುವಲ್ಲಿ ರೈಲ್ವೆ ಮಾರ್ಗಗಳ ಅಭಿವೃದ್ಧಿ ಅತೀ ಅಗತ್ಯವಿದೆ. ಏನಿಲ್ಲವೆಂದರೂ ಸುಮಾರು ಎಂಟು ಯೋಜನೆಗಳು ಪೂರ್ಣಗೊಳ್ಳದೇ ಹಾಗೇ ಉಳಿದಿವೆ. ಮಂಗಳೂರು-ಹಾಸನ-ಬೆಂಗಳೂರು ಬ್ರಾಡ್‌ಗೇಜ್ ಪರಿವರ್ತನೆ ಹಾಸನದ ಬಳಿಕ ಮುಂದಕ್ಕೆ ಹೋಗುತ್ತಲೇ ಇಲ್ಲ. ಪ್ರತಿನಿತ್ಯ ಕನಿಷ್ಠ 8000 ಪ್ರಯಾಣಿಕರು ಬೆಂಗಳೂರಿನಿಂದ ಮಂಗಳೂರಿಗೆ ಸಂಚರಿಸುತ್ತಾರೆ. 500 ಬಸ್‌ಗಳು ಇದಕ್ಕಾಗಿ ತಿರುಗುತ್ತವೆ. ಇನ್ನೂ ತೈಲ, ಸಾಮಾನು-ಸರಂಜಾಮು ಸಾಗಾಣಿಕೆಗೆ ಲಾರಿ ಸಾರಿಗೆಯನ್ನೇ ಅವಲಂಬಿಸಬೇಕಾಗಿದೆ. ಇದು ಕಣಿವೆ ಪ್ರದೇಶಗಳಲ್ಲಿ ಹೇಗಿದೆ ಎಂದು ಊಹಿಸಿಕೊಳ್ಳುವುದು ಕಷ್ಟವೇನಲ್ಲ. ಅಫಘಾತಗಳಿಗೆ ಲೆಕ್ಕವಿಲ್ಲ. ಸಮಸ್ಯೆಯ ಅರಿವಿದ್ದರೂ ಖಾಸಗೀ ವಾಹನ ಮಾಲೀಕರ ಕೈಗಳು ರೈಲ್ವೆ ಹಳಿಗಳು ವಿಸ್ತರಿಸದಂತೆ ತಡೆದುಬಿಟ್ಟಿವೆ. ಹಾಗೇ ಚಾಮರಾಜನಗರ- ಮೆಟ್ಟುಪಾಳ್ಯಂ, ವಿಜಾಪುರ-ಗದಗ್ ಬ್ರಾಡ್‌ಗೇಜ್, ಕಾಮಗಾರಿ ವರ್ಷಕ್ಕೆ ಒಂದು ಕಿ.ಮೀ ನಡೆಯುತ್ತಿಲ್ಲ. ಹತ್ತಾರು ವರುಷಗಳೇ ಸರಿದುಹೋದವು. ಹುಬ್ಬಳ್ಳಿ-ಅಂಕೋಲಾ ಮಾರ್ಗಕ್ಕೆ ವಾಜಪೇಯಿ ಅಡಿಗಲ್ಲು ಇಟ್ಟರು. ಅದು ಒಂದಿಂಚೂ ಅವರ ಕಾಲದಲ್ಲಿಯೂ ಕದಲಲಿಲ್ಲ. ಬೀದರ್ ಗುಲಬರ್ಗಾ- ಹೈದರಾಬಾದ್-ಬೀದರ್, ಗುಲಬರ್ಗಾ- ಕೊಪ್ಪಳ, ಅಥವಾ ರಾಯಚೂರು-ಕೊಪ್ಪಳ, ಶಿಡ್ಲಘಟ್ಟ-ಚಿಂತಾಮಣಿ-ಬಂಗಾರಪೇಟೆ, ಚಿಕ್ಕಮಗಳೂರು-ಕದಿರಿ-ಪೆನುಗೊಂಡ, ಹೀಗೆ ಇವೆಲ್ಲಾ ಕಮರಿಹೋದ ಜನರ ನಿರೀಕ್ಷೆಗಳ ಬಜೆಟ್ ಕಾಲಕ್ಕೆ ಹಾಕುವ ಒಂದೆರಡು ಹನಿ ನೀರು ... ನಿರೀಕ್ಷೆಗಳ ವೃಕ್ಷವನ್ನು ಬೆಳಸುವುದಿರಲಿ, ಉಳಿಸುತ್ತಿಲ್ಲ.

ಇವುಗಳು ಪೂರ್ಣವಾಗಬೇಕಾದರೆ ಹಣಕಾಸಿನ ನೀಡಿಕೆಬೇಕು. ಹಲವು ದಶಕಗಳಲ್ಲಿ ಬಹಳಷ್ಟು ರೈಲ್ವೆ ಮಂತ್ರಿಗಳು ಕರ್ನಾಟಕದವರೇ ಆದರೂ ಯೋಜನೆಗಳಿಗೆ ಅಗತ್ಯ ಹಣ ನೀಡಿಕೆ ಆಗಿರಲಿಲ್ಲ. ಇಂತಹುದೇ ಕಥೆ ಹಲವು ರಾಜ್ಯಗಳದ್ದು. ರೈಲ್ವೆ ಸಚಿವ ಲಾಲೂ ಪ್ರಸಾದ್ ಯಾದವರು ಮಂಡಿಸಿದ ಬಜೆಟ್‌ನಲ್ಲಿ ರಾಜ್ಯದಲ್ಲಿ ಹಲವು ಹೊಸ ರೈಲುಗಳನ್ನು ಓಡಿಸುವ ಪ್ರಸ್ತಾಪ ಇಡಲಾಗಿದೆ. ಆದರೆ ವಿಚಿತ್ರವೆಂದರೆ ಈ ರೈಲು ಓಡಲು ಹಳಿಗಳು ಇಲ್ಲ. ಅವು ಪೂರ್ಣವಾದ ನಂತರವೇ ಈ ರೈಲುಗಳು ಓಡಬೇಕು, ರೈಲ್ವೆ ಹಳಿಗಳ ನಿರ್ಮಾಣಕ್ಕೆ ಹಣ ಬಿಡುಗಡೆ ಮಾತ್ರ ಆಗಿಲ್ಲ. ಅಂದರೆ ಹೇಗೆ ರೈಲು ಓಡೋದು, ಎಂತಹ ವಿಪರ್ಯಾಸ!

ಇದರಲ್ಲಿ ಬಹಳ ಮುಖ್ಯವಾಗಿ ರೈಲ್ವೆ ಬಜೆಟ್‌ಗೆ - ಯೋಜನೆಗಳಿಗೆ ಕೇಂದ್ರವು ತನ್ನ ಆಯ-ವ್ಯಯದ ಬೆಂಬಲ ನೀಡಿಕೆಯಲ್ಲಿ ಕಡಿತ ಮಾಡುತ್ತಿರುವುದು.ಸುಮಾರು 723 ಕೋಟಿ ರೂಪಾಯಿಗಳ (4544 ರಿಂದ 3821 ಕೋಟಿ)ನ್ನು ಈ ಸಲ ಕಡಿತ ಮಾಡಿದೆ. ಇಂತಹ ಕಡಿತವನ್ನು ಭರಿಸಿ, ರೈಲ್ವೆ ಯೋಜನೆ ಪೂರ್ಣಗೊಳಿಸುವ ಶಕ್ತಿ ಸದ್ಯ ರೈಲ್ವೆ ಮಂಡಳಿಗೆ ಇಲ್ಲ. ಆದ್ದರಿಂದ **ಕೇಂದ್ರ ಸರ್ಕಾರ ರೈಲ್ವೆ ಬಜೆಟ್‌ಗೆ ಬಜೆಟ್ ಬೆಂಬಲ ಘೋಷಿಸಿ ಹೆಚ್ಚಿಸಬೇಕು. ಇದಕ್ಕಾಗಿ ರಾಜ್ಯ ಸರ್ಕಾರಗಳ ಒತ್ತಡ ಹೇರಬೇಕು.**

ಇದರೊಂದಿಗೆ ಹೆಚ್ಚಿನ ಸೌಲಭ್ಯ ನೀಡಲು, ಅಪಘಾತ ತಪ್ಪಿಸಲು ಸುರಕ್ಷತೆಗೆ ಹೆಚ್ಚಿನ ಗಮನ ಅಗತ್ಯವಿದೆ. ಲಾಲೂ ಪ್ರಸಾದರ ಬಜೆಟ್ ಜಾರಿಗೆ ದರಗಳ ಹೆಚ್ಚಳದಿಂದ ಅದರ ಹೊರೆ ಜನಸಾಮಾನ್ಯ ಮೇಲೆ ಬೀಳುವುದು ಖಂಡಿತ. ಇಷ್ಟೆಲ್ಲಾ ನಡುವೆ ಸಾರಿಗೆ ದರದಲ್ಲಿ ಹೆಚ್ಚಳ ಆಗದಿರುವುದು ಸ್ವಾಗತಾರ್ಹವಾದರೂ ಉಳಿದಂತೆ ಈ ಬಜೆಟ್ ಹಲವು ಮಾರ್ಪಾಡುಗಳಿಗೆ ಒಳಗಾಗಬೇಕು. ರಾಜ್ಯದ ಅಪೂರ್ಣ ಯೋಜನೆಗಳು ಪೂರ್ಣಗೊಳ್ಳಬೇಕು.

ಈ ಕದನ ಯಡಿಯೂರಪ್ಪ - ಅನಂತರದ್ದಲ್ಲ: ಸಂಘ ನಿಯಂತ್ರಣದ್ದು

ಈಗ ನಡೆದ ಕದನ ಇಬ್ಬರದ್ದಲ್ಲ. ಅದು ಬಿಜೆಪಿ ಮೇಲೆ ಆರ್.ಎಸ್.ಎಸ್‌ನ ನಿಯಂತ್ರಣಕ್ಕೆ ಸಂಬಂದಿಸಿದ್ದು

ಬಿಜೆಪಿಯ ಅಂತರ್ ಕಲಹಾ ಈಗ ಮುಗಿದಿದೆಯಂತೆ! ಸೆಡ್ಡು ಹೊಡೆದು ಕುಸ್ತಿ ಹಿಡಿದಿದ್ದ ಬಣಗಳೆರಡರ ಅಂಬೋಣದಂತೆ ಸದ್ಯ ಮುಗಿದಿದೆ. ಆದರೆ ಯಡಿಯೂರಪ್ಪನವರ ಅಂಬೋಣದಲ್ಲಿ ಅದನ್ನು ಮುಂದೂಡಲಾಗಿದೆಯಂತೆ. ಅಂದರೆ ಕದನ ಮುಂದುವರಿದಿದೆಯೇ ಎಂದರೆ ನಾವೆಲ್ಲಾ ಒಂದೇ' ಎನ್ನುತ್ತಾರೆ ಯಡಿಯೂರಪ್ಪನವರು.

ಬಿಜೆಪಿಯೊಳಗೆ ಜಗಳ ತೀವ್ರಗೊಂಡಿದ್ದಾಗ ಯಡಿಯೂರಪ್ಪನವರ ಬಣದಪಟ್ಟಿಗೆ ಅನಂತಕುಮಾರ ಬಣ ಇನ್ನೊಂದು ಪಟ್ಟು ಹಾಕುತ್ತಿತ್ತು. ಈ ಧಾಳಿ ಎಷ್ಟು ತೀವ್ರವಾಯಿತೆಂದರೆ ಯಡಿಯೂರಪ್ಪನವರು ವಿರೋಧ ಪಕ್ಷದ ಸ್ಥಾನ ಖಾಲಿ ಮಾಡಬೇಕಾಗಿ ಬರುತ್ತದೆ ಎಂದಷ್ಟೇ ಮಾತ್ರವಲ್ಲ ವಿರೋಧಪಕ್ಷದ ನಾಯಕರಾಗಿ ಮುಖ್ಯಮಂತ್ರಿ ಧರಂಸಿಂಗರ ಜೊತೆ ಆತ್ಮೀಯರಾಗಿದ್ದಾರೆ ಎಂಬ ಆರೋಪ ಅಂತೂ ಪರಸ್ಪರ ವಾಗ್ಯುದ್ಧದಲ್ಲಿ ಹೊಸ ಸತ್ಯಗಳು ಗೋಚರವಾದವು.

ಮಾರ್ಚ್ 3 ರಂದು ಶಾಸಕಾಂಗ ಪಕ್ಷದ ಸಭೆ ಕರೆದ ಯಡಿಯೂರಪ್ಪ, ಶಾಸಕರ ಬೆಂಬಲ ತೋರಲಿ ಎಂದು ಅನಂತಕುಮಾರ ಬಣದ ಸವಾಲು ಸ್ವೀಕರಿಸಿದರಂತೆ. ಇದಕ್ಕೆ ಶಾಸಕರು ಹೋಗಬಾರದು ಎಂಬುದು ಅನಂತಕುಮಾರ್ ಬಣದ ತಾಕೀತು. ಪಕ್ಷದ ಅಧ್ಯಕ್ಷ ಜಗದೀಶ ಶೆಟ್ಟರ್ ಈ ಶಾಸಕಾಂಗ ಸಭೆಗೆ ಹೋಗಲಾರೆ ಎಂದರು. ಈ ಬಳಲಾಟದಲ್ಲಿ ಎರಡೂ ಬಣಗಳು ಒಂದು ಒಪ್ಪಂದಕ್ಕೆ ಬಂದಿವೆ. ಯುದ್ಧ ಸ್ಥಿತಿ ಕಾಯುವುದು ಎಂಬುದು. ಅಂದರೆ ಯಡಿಯೂರಪ್ಪ ಶಂಕರಮೂರ್ತಿ ವಿರೋಧ ಪಕ್ಷದ ನಾಯಕರ ಸ್ಥಾನದಲ್ಲಿ ಮುಂದುವರಿಯುತ್ತಾರೆ. ಅನಂತ ಕುಮಾರರ ಬಣದಿಂದ ನೇಮಿಸಿದ್ದ ಬಿಜೆಪಿ ಪದಾಧಿಕಾರಿಗಳ ಸ್ಥಾನ ಹಾಗೇ ಉಳಿಯುತ್ತದೆ! ವರಿಷ್ಟರ ಭರವಸೆಯಂತೆ ಜಗಳ ತೆರೆ ಕಂಡಿದೆ.

ಈ ಒಟ್ಟು ವಿದ್ಯಮಾನಗಳು ಅನಂತ್-ಯಡಿಯೂರಪ್ಪ ಬಣ ಎಂಬಂತೆ ಕಂಡರೂ ಮೂಲದಲ್ಲಿ ಬಿಜೆಪಿಯನ್ನು ಪೂರ್ಣವಾಗಿ ತನ್ನ ನಿಯಂತ್ರಣದಲ್ಲಿಯೇ ಇರಬೇಕು ಎಂಬ ಆರ್‌ಎಸ್‌ಎಸ್‌ನ ನಿರ್ಧಾರವೇ ಮುಖ್ಯವಾಗಿದೆ. ಚುನಾವಣೆ ಸಂದರ್ಭದಲ್ಲಿ ಅದು ತೋರಿಸಿದ್ದು ಉದಾರ ಮುಖ್ಯವಾದವನ್ನು. ಎಲ್ಲಾ ವ್ಯವಹಾರಗಳು. ಸಂಘದ ಕೇಂದ್ರದಿಂದಲೇ ನಿರ್ಧರಿತವಾಗಬೇಕು ಎಂಬ ನಿಲುಮೆಯಂತೆ ಅದರ ಕಟ್ಟಾಳು ಅನಂತಕುಮಾರ್ ಮತ್ತು ಇತರೆ ಸ್ವಯಂಸೇವಕರ ಮೂಲಕ ಹಿಡಿತ ಸಾಧಿಸಲು ಈ ಯತ್ನ ನಡೆದಿದೆ. ಬಿಜೆಪಿ ಬದಲಾಗಿದೆ ಎಂದು ಹೇಳುವವರು ಈ ಅಂಶ ಗಮನಿಸಬೇಕು.

ವೃತ್ತಿಶಿಕ್ಷಣ ಕೋರ್ಸುಗಳ (JOC) ಶುಲ್ಕ ಏರಿಕೆ ವಾಪಸ್ಸಾತಿಗಾಗಿ SFI ಹೋರಾಟ

ಆರ್ಥಿಕವಾಗಿ ಅಭದ್ರತೆಯಿಂದ ಕೂಡಿರುವ ಕುಟುಂಬಗಳಿಂದ ಜೀವನದ ಆಸರೆಗಾಗಿ ಉದ್ಯೋಗದ ದೃಷ್ಠಿಯಿಂದ ಅತ್ಯಂತ ಬಡ ಕುಟುಂಬದಿಂದ ಬರುವ ಗ್ರಾಮೀಣ ಬಡ ವಿದ್ಯಾರ್ಥಿಗಳು ವೃತ್ತಿಶಿಕ್ಷಣ (JOC) ಕೋರ್ಸುಗಳಿಗೆ ಪ್ರವೇಶ ಪಡೆಯುತ್ತಿದ್ದಾರೆ. ಇಂಥ ಬಡ ವಿದ್ಯಾರ್ಥಿಗಳ ಮೇಲೆ ರಾಜ್ಯ ಸರ್ಕಾರ ಮತ್ತೊಂದು ದಾಳಿ ಎಸಗಿದೆ. ಕನಿಷ್ಠ ಮೂಲಭೂತ ಸೌಲಭ್ಯಗಳಿಲ್ಲದೆ ಅವಸಾನದ ಅಂಚಿನಲ್ಲಿದ್ದ ವೃತ್ತಿ ಶಿಕ್ಷಣ (joc) ಕೋರ್ಸುಗಳ ಕಾಲೇಜುಗಳು ಸೊರಗುತ್ತಿವೆ. ಸುಮಾರು 18 ತಿಂಗಳಿನಿಂದ ಶಿಕ್ಷಕರಿಗೆ ವೇತನ ನೀಡದೆ ಶಿಕ್ಷಕರನ್ನು ಅತಂತ್ರ ಸ್ಥಿತಿಯಲ್ಲಿಟ್ಟಿರುವ ಸರ್ಕಾರ ಶಿಕ್ಷಕರನ್ನು ಕಡಿತಗೊಳಿಸುತ್ತಿದೆ. ಇಂಥ ದುಸ್ಥಿತಿಯಲ್ಲಿಯೂ ಕಷ್ಟಪಟ್ಟು ಓದುತ್ತಿದ್ದ ಬಡ ಐಕ್ಷ್ ವಿದ್ಯಾರ್ಥಿಗಳಿಗೆ ಏಕಾಏಕಿ ಪ್ರವೇಶ ಶುಲ್ಕ ರೂ.650 ರಿಂದ 1200ಕ್ಕೆ ಏರಿಸಿದೆ. ಪರೀಕ್ಷಾ ಶುಲ್ಕ ರೂ.65 ರಿಂದ 300 ಕ್ಕೇರಿಸಿದೆ. ಅದೇ ರೀತಿಯಲ್ಲಿ ಅಂಕಪಟ್ಟಿ ಪರಿಶೀಲನೆ, ಹೆಸರು ತಿದ್ದುಪಡಿ, ಅಂಕಪಟ್ಟಿ ಮರು ಎಣಿಕೆ ಶುಲ್ಕ ರೂ.25 ರಿಂದ 400 ಕ್ಕೆ ಏರಿಸಲಾಗಿದೆ. ಒಟ್ಟಾರೆ ವಿವಿಧ ಶುಲ್ಕಗಳು ಸೇರಿ ರೂ.875 ಇದ್ದ ಶುಲ್ಕವನ್ನು ರೂ.2280 ಕ್ಕೆ ಏರಿಸಲಾಗಿದೆ.

ಜನರ ಅಭಿವೃದ್ದಿಗಾಗಿ ಶಿಕ್ಷಣ ನೀಡಬೇಕಾದ ಸರ್ಕಾರ, ಸಮಾಜದ ಆರ್ಥಿಕ-ಸಾಮಾಜಿಕ ಪರಿಸ್ಥಿತಿಯನ್ನು ಆಧರಿಸಿ ಉದ್ಯೋಗದ ದೃಷ್ಠಿಯಿಂದ ವೃತ್ತಿಶಿಕ್ಷಣ (joc) ಕೋರ್ಸುಗಳ ಪ್ರಸಕ್ತ ಬೆಳವಣಿಗೆಗೆ ತಕ್ಕಂತೆ ಉದ್ಯೋಗ ದೊರಕುವಂತಹ



ಕೋರ್ಸುಗಳನ್ನು ಅಗತ್ಯವಾದಷ್ಟು ಹೆಚ್ಚಿಸುವುದರ ಬದಲು ಇರುವ ಕೋರ್ಸುಗಳನ್ನು ಮುಚ್ಚುವ ತವಕದಲ್ಲಿದೆ. ಜಾಗತೀಕರಣ ಅಮಲಿನಲ್ಲಿರುವ ರಾಜ್ಯ ಸರ್ಕಾರ ಶಿಕ್ಷಣಕ್ಕೆ ಹಣ ಕಡಿತ ಮಾಡುತ್ತಾ ಶಿಕ್ಷಣದ ಖಾಸಗೀಕರಣಕ್ಕೆ ಮಣೆ ಹಾಕುತ್ತಿರುವುದರಿಂದ ಸಾಮಾಜಿಕ ನ್ಯಾಯಕ್ಕೆ ಕೊಡಲಿ ಪೆಟ್ಟು ನೀಡುತ್ತಿದೆ. ಇಂಥಹ ಬಡವಿದ್ಯಾರ್ಥಿ- ಪೋಷಕರ ವಿರೋಧಿ ನೀತಿಯನ್ನು ಕೈಬಿಟ್ಟು ತಕ್ಷಣ ಏರಿಸಿರುವ ಶುಲ್ಕಗಳನ್ನು ಹಿಂತೆಗೆದುಕೊಳ್ಳಬೇಕೆಂದು ರಾಜ್ಯಾದ್ಯಂತ ಎಸ್.ಎಫ್.ಐ ಸಂಘಟನೆ ಪ್ರತಿಭಟನೆ ನಡೆಸುತ್ತಿದೆ. ರಾಜ್ಯಾದ್ಯಂತ ಹೋರಾಟ ಮಾಡುತ್ತಿರುವ ಶಿಕ್ಷಕರ ಬೇಡಿಕೆಗಳ ಹೋರಾಟಕ್ಕೆ ಎಸ್ಎಫ್ಐ ಬೆಂಬಲಿಸಿದೆ. ಸರ್ಕಾರ ತಕ್ಷಣ ಮಧ್ಯಪ್ರವೇಶಿಸಿ ವಿದ್ಯಾರ್ಥಿಗಳ ಭವಿಷ್ಯ ಉಳಿಸಬೇಕೆಂದು ಆಗ್ರಹಿಸುತ್ತದೆ.

ಮುಖ್ಯಮಂತ್ರಿ ಮನೆ ಮುಂದೆ ಪ್ರತಿಭಟನೆ

ಮುಂಬರುವ ಬಜೆಟ್‌ನಲ್ಲಿ ಶಿಕ್ಷಣಕ್ಕೆ ಶೇ.30 ರಷ್ಟು ನೀಡುವ ಮುಖಾಂತರ ಜೆಓಸಿ ಕೋರ್ಸುಗಳ ಸಮಸ್ಯೆಗಳನ್ನು ಬಗೆಹರಿಸಬೇಕೆಂದು ಒತ್ತಾಯಿಸಿ, ಜೆಓಸಿ ವಿದ್ಯಾರ್ಥಿಗಳಿಗೆ ಏರಿಸಿರುವ ಶುಲ್ಕಗಳನ್ನು ಸಂಪೂರ್ಣ ಹಿಂತೆಗೆದುಕೊಳ್ಳಬೇಕು. 18 ತಿಂಗಳಿಂದ ಬಾಕಿ ಇರುವ ವೇತನವನ್ನು ಕೂಡಲೇ ಬಿಡುಗಡೆ ಮಾಡಬೇಕು. ಖಾಲಿ ಇರುವ ಉಪನ್ಯಾಸಕರ ಹುದ್ದೆಗಳನ್ನು ಭರ್ತಿ ಮಾಡಬೇಕು. ಎಲ್ಲಾ ರೀತಿಯಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕು. ವೃತ್ತಿಶಿಕ್ಷಣ (ಜೆಓಸಿ) ಕೋರ್ಸುಗಳನ್ನು ಮುಗಿಸಿದ ವಿದ್ಯಾರ್ಥಿಗಳಿಗೆ ಮುಂದಿನ ಅಧ್ಯಯನಕ್ಕೆ ಅವಕಾಶ ಖಾತರಿಪಡಿಸಬೇಕು. ಪ್ರಸಕ್ತ ಉದ್ಯೋಗಾವಕಾಶಕ್ಕೆ ತಕ್ಕಂತೆ ವೃತ್ತಿಶಿಕ್ಷಣ (ಜೆಓಸಿ) ಕೋರ್ಸುಗಳ ಕಾಲೇಜುಗಳನ್ನು ಹೆಚ್ಚು ಆರಂಭಿಸಬೇಕೆಂದು ಒತ್ತಾಯಿಸಿ ಮಾರ್ಚ್ 10,2005 ಗುರುವಾರ ಮುಖ್ಯ ಮಂತ್ರಿ ಮನೆ ಮುಂದೆ ಪ್ರತಿಭಟನೆ ನಡೆಸಲು ಭಾರತ ವಿದ್ಯಾರ್ಥಿ ಫೆಡರೇಷನ್(ಎಸ್ಎಫ್ಐ) ಕರ್ನಾಟಕ ರಾಜ್ಯಸಮಿತಿ ನಿರ್ಧರಿಸಿದೆ.

ಬಿ.ರಾಜಶೇಖರಮೂರ್ತಿ

ದಲಿತರ ಮೇಲೆ ಹಲ್ಲೆ ಖಂಡಿಸಿ ಧರಣಿ

ರಾಯಚೂರು ಜಿಲ್ಲೆಯ ಸಿಂಧನೂರು ತಾಲೂಕಿನ ತಿಡಿಗೋಳ ಗ್ರಾಮದ ತಾಲೂಕಾ ಮಾದಿಗ ಮೀಸಲಾತಿ ಹೋರಾಟ ಸಮಿತಿಯ ಅಧ್ಯಕ್ಷರಾದ ಪಂಪಾಪತಿ ಗುಡದೂರು ಇವರ ಮೇಲೆ ಗ್ರಾಮದ 30 ಕ್ಕೂ ಹೆಚ್ಚು ದುಷ್ಕರ್ಮಿಗಳು ನಡೆಸಿದ ಮಾರಣಾಂತಿಕ ಹಲ್ಲೆಯನ್ನು ಸಿಪಿಐ(ಎಂ) ಸ್ಥಳೀಯ ಸಮಿತಿ ತೀವ್ರವಾಗಿ ಖಂಡಿಸಿ, ಹಲ್ಲೆ ನಡಸಿದವರನ್ನು ಬಂಧಿಸಿ, ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿ, ಫೆಬ್ರುವರಿ 21 ಜಿಲ್ಲಾಧಿಕಾರಿ ಕಛೇರಿ ಎದುರು ಪ್ರತಿಭಟನೆ ನಡೆಸಿತು.

ತಿಡಿಗೋಳ ಗ್ರಾಮದ ಮೂಲ ಸೌಕರ್ಯಗಳಿಗಾಗಿ ದಲಿತರನ್ನು ಸಂಘಟಿಸಿ ಹೋರಾಟ ಮಾಡುತ್ತಿದ್ದ ಮುಖಂಡನ ಮೇಲೆ ಪ್ರತಿಕಾರದ ರೂಪವಾಗಿ ಗ್ರಾಮದ ಸವರ್ಣೀಯರ ಪ್ರಬಲ ಗುಂಪೊಂದು ಹಲ್ಲೆ ಮಾಡಿರುವುದು ಪ್ರಜಾಸತ್ತೆಯಲ್ಲಿ ತಮ್ಮ ಹಕ್ಕುಗಳಿಗಾಗಿ ಹೋರಾಟ ಮಾಡುವುದು ಅಪರಾಧವೆಂಬಂತೆ ಪಾಳೆಗಾರಿ ಪ್ರವೃತ್ತಿಯನ್ನು ಪ್ರದರ್ಶಿಸಿರುವುದು, ಪಾಳೆಗಾರಿ ಮೌಲ್ಯಗಳು ಜಿಲ್ಲೆಯಲ್ಲಿ ಜೀವಂತ ಇರುವುದಕ್ಕೆ ಸಾಕ್ಷಿಯಾಗಿದೆ.

ಈಗಾಗಲೇ ಪ್ರಥಮ ಮಾಹಿತಿಯನ್ನು ದಾಖಲಾತಿಸಿಕೊಂಡ ಪೋಲೀಸರು ಅಪರಾಧಿಗಳನ್ನು ಬಂಧಿಸುವಲ್ಲಿ ಹಿಂದೇಟು ಹಾಕುತ್ತಿದ್ದಾರೆ. ಈ ಪ್ರವೃತ್ತಿಯನ್ನು ಸಿಪಿಐಎಂ ಖಂಡಿಸಿದೆ.

ಈ ಹಲ್ಲೆ ಘಟನೆಯಲ್ಲಿ ಬಾಗಿಯಾಗಿರುವ ತಪ್ಪಿತಸ್ಥರನ್ನು ಕೂಡಲೇ ಬಂಧಿಸಬೇಕು. ಇಡೀ ಪ್ರಕರಣವನ್ನು ನ್ಯಾಯಾಂಗ ತನಿಖೆಗೆ ಒಳಪಡಿಸಬೇಕು. ಆತಂಕದಲ್ಲಿ ಬದುಕುತ್ತಿರುವ ಗ್ರಾಮದ ದಲಿತರಿಗೆ ಸೂಕ್ತ ರಕ್ಷಣೆ ನೀಡುವಂತೆ ಸಿಪಿಐ(ಎಂ) ಸ್ಥಳೀಯ ಸಮಿತಿ ಆಗ್ರಹಪಡಿಸಿದೆ.

ಮಧ್ಯಾಹ್ನದವರೆಗೆ ಧರಣಿ ನಡೆಸಿದ ಪ್ರತಿಭಟನಾಕಾರರು ಡಿ.ಸಿ ಯವರಿಗೆ ಮನವಿ ಸಲ್ಲಿಸಿ ಇದುವರೆಗೂ ಪ್ರಥಮ ಮಾಹಿತಿಯನ್ನು ದಾಖಲಿಸಿಕೊಂಡ ಪೊಲೀಸರು ಆರೋಪಿಗಳನ್ನು ಬಂಧಿಸುವಲ್ಲಿ ವಿಫಲವಾಗಿರುವುದನ್ನು ಖಂಡಿಸಿದರು. ಕೂಡಲೇ ಆರೋಪಿಗಳನ್ನು ಬಂಧಿಸಲು ಆಗ್ರಹಪಡಿಸಿದರು.

ಪ್ರತಿಭಟನೆಯ ನೇತೃತ್ವವನ್ನು ಪಕ್ಷದ ಸ್ಥಳೀಯ ಸಮಿತಿ ಕಾರ್ಯದರ್ಶಿ ಡಿ.ಎಸ್.ಶರಣಬಸವ, ವೈ.ಈರಣ್ಣ, ಖಾಜಾಹುಸೇನ್ದ ರಸೂಲ್ ಅಹ್ಮಾರ, ಗೋಪಾಲನಾಯಕ, ಎನ್.ಶ್ಯಾಮಸುಂದರ, ಕೆ.ನಾರಾಯಣ, ಕೆ.ಲಕ್ಷ್ಮಣ, ಎಂ.ಸಿ.ಶಿವಕುಮಾರ್, ಕೆ.ಮಲ್ಲೇಶ, ವಿ.ನಾಗೇಂದ್ರ, ಲಕ್ಷ್ಮಿರೆಡ್ಡಿ ಹೊಸೂರು, ಸಿರಾಜ್, ಮೆಹಬೂಬ್ ಇವರು ವಹಿಸಿದ್ದರು. ಈ ಕಾರ್ಯಕ್ರಮದಲ್ಲಿ ವರಲಕ್ಷ್ಮಿ, ಆದಿಲಕ್ಷ್ಮಿ, ಪದ್ಮಾ ಸೇರಿದಂತೆ ಹೆಚ್ಚಿನ ಸಂಖ್ಯೆಯಲ್ಲಿ ಅಂಗನವಾಡಿ ನೌಕರರು ಭಾಗವಹಿಸಿದ್ದರು. ಈ ಕಾರ್ಯಕ್ರಮಕ್ಕೆ ಬೆಂಬಲಿಸಿ ಪರಪ್ಪ ಅರೋಲಿ, ಅಂಬಣ್ಣ ಅರೋಲಿ, ವಿಜಯಲಕ್ಷ್ಮಿ, ಸೀತಾ ಮುಂತಾದವರು ಭಾಗವಹಿಸಿದರು.



ಸಾಮಾಜಿಕ ನ್ಯಾಯದ ಪರಿಕಲ್ಪನೆಯ ಮೇಲೆ ಹೆಚ್ಚಿದ ಜಾಗತೀಕರಣದ ದಾಳಿ

ಹೆಚ್ಚಿದ ದಲಿತ ಹಿಂದುಳಿದ ವಿಭಾಗದ ವಿದ್ಯಾರ್ಥಿಗಳ ಸಂಕಟಗಳು : ಜಾಗತೀಕರಣ, ಖಾಸಗೀಕರಣದ ಯುಗದಲ್ಲಿ ಅತ್ಯಂತ ದೊಡ್ಡ ದಾಳಿಗೆ ತುತ್ತಾದ ವಿಭಾಗಗಳು ದಲಿತ- ಹಿಂದುಳಿದ ವಿಭಾಗಗಳಿಗೆ ಸೇರಿದ ಜನತೆ ಮತ್ತು ವಿದ್ಯಾರ್ಥಿಗಳು. ಶಿಕ್ಷಣ ರಂಗದಲ್ಲಿಯೂ ಪರಿಸ್ಥಿತಿ ಭಿನ್ನವಾಗೇನಿಲ್ಲ. ಸಮಾಜ ಕಲ್ಯಾಣ ಇಲಾಖೆ ಮತ್ತು ಹಿಂದುಳಿದ ಮತ್ತು ಅಲ್ಪಸಂಖ್ಯಾತ ವರ್ಗಗಳ ಇಲಾಖೆಯ ಹಾಸ್ಟೆಲ್ ವಿದ್ಯಾರ್ಥಿಗಳ ತೊಂದರೆಗಳು ಎಷ್ಟು ಹೇಳಿದರೂ ಕಡಿಮೆಯೇ.

ಈ ನಡುವಿನ ಅವಧಿಯಲ್ಲಿ ಕೇಂದ್ರ ಎನ್‌ಡಿಎ ಸರ್ಕಾರದಿಂದ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಬಿಡುಗಡೆಯಾಗಬೇಕಾದ ವಿದ್ಯಾರ್ಥಿ ವೇತನ ಬಿಡುಗಡೆಯಾಗದೇ ವಿದ್ಯಾರ್ಥಿಗಳು ತೀವ್ರ ತೊಂದರೆ ಅನುಭವಿಸಿದರು. ರಾಜ್ಯ ಸರ್ಕಾರವೂ ಪರಿಶಿಷ್ಟ ಜಾತಿ - ಪಂಗಡದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಬಿಡುಗಡೆಯನ್ನು ವಿಳಂಬ ಮಾಡಿತು. ಕಳಪೆ ಆಹಾರ, ಹಾಸ್ಟೆಲ್‌ಗಳ ಅತ್ಯಂತ ಕಳಪೆ ನಿರ್ವಹಣೆ ಒಂದು ನಿರಂತರ ಸಮಸ್ಯೆಯಾಗಿ ಮುಂದುವರೆಯುತ್ತಿದೆ. ಸರ್ಕಾರದ ಈ ಜೋಣಿಗೇಡಿತನದಿಂದಾಗಿ ಅದು ಮತ್ತಷ್ಟು ಹೆಚ್ಚಿತು. ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಹಾಸ್ಟೆಲ್‌ಗಳಲ್ಲಿ ಹಲವು ಕಡೆ ಯಾವುದೇ ಹೊಸ ವಿದ್ಯಾರ್ಥಿಗಳಿಗೆ ಪ್ರವೇಶ ನೀಡದೆ ನಿರಾಕರಿಸಲಾಗಿದೆ. ಕೆಲವು ಹಾಸ್ಟೆಲ್‌ಗಳಲ್ಲಿ ವಿದ್ಯಾರ್ಥಿಗಳಿಗೆ ಊಟ ಕೊಡುವುದನ್ನು ನಿಲ್ಲಿಸಲಾಗಿದೆ. ಹಾಸ್ಟೆಲ್ ಅಗತ್ಯವಿರುವ ವಿದ್ಯಾರ್ಥಿಗಳ ಪ್ರಮಾಣಕ್ಕೂ ಹಾಸ್ಟೆಲ್ ಸೌಕರ್ಯ ಸಿಗುತ್ತಿರುವ ವಿದ್ಯಾರ್ಥಿಗಳ ಪ್ರಮಾಣಕ್ಕೂ ಅಜಗಜಾಂತರವಿದೆ.

ಪ್ರತಿ ಪ್ರದೇಶದಲ್ಲಿಯೂ ಹಾಸ್ಟೆಲ್ ಪ್ರವೇಶ ಬಯಸಿ ಸಲ್ಲಿಸಲಾಗುವ ಅರ್ಜಿಗಳ ಆಧಾರದಲ್ಲಿ ರಾಜ್ಯವ್ಯಾಪಿ ಸೂಕ್ತ ಸಮೀಕ್ಷೆ ನಡೆಸಿ ಪರಿಸ್ಥಿತಿಯ ಗಂಭೀರತೆಗೆ ತಕ್ಕಂತೆ ಅವಕಾಶ ವಂಚಿತರಾದ ಈ ವಿದ್ಯಾರ್ಥಿ ಸಮುದಾಯವನ್ನು ಸಂಘಟಿಸಿ ಚಳುವಳಿ ರೂಪಿಸಬೇಕಿದೆ. ಹಿಂದುಳಿದ ವಿಭಾಗದ ವಿದ್ಯಾರ್ಥಿಗಳಿಗೆ ನೀಡುವ ಬೋಧನ ಶುಲ್ಕ ರಿಯಾಯಿತಿಯನ್ನು ರಾಜ್ಯ ಸರ್ಕಾರವು ಬಿಡುಗಡೆ ಮಾಡದೇ ದೊಡ್ಡ ಬಾಕಿಯಾಗಿತ್ತು. ರಾಜ್ಯದ ಹಲವು ಜಿಲ್ಲೆಗಳಲ್ಲಿ ಖಾಸಗಿ ಕಾಲೇಜು ಆಡಳಿತಮಂಡಳಿಗಳು ವಿದ್ಯಾರ್ಥಿಗಳಿಂದ ಶುಲ್ಕ ವಸೂಲಿ ಮಾಡಲು ಆರಂಭಿಸಿದವು. ಈಗ ಬಾಕಿಯ ಒಂದು ನೂರು ಕೋಟಿ ರೂಗಳಿಗೂ ಹೆಚ್ಚಾಗಿದೆ.

ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ರಾಜ್ಯದ ಬಜೆಟ್‌ನಲ್ಲಿ ಪರಿಶಿಷ್ಟ ಜಾತಿ - ಪಂಗಡಗಳ ಕಲ್ಯಾಣ ಯೋಜನೆಗಳಿಗೆ ರಾಜ್ಯ ಸರ್ಕಾರವು 30 ಕೋಟಿ ರೂಪಾಯಿಗಳ ಹಣವನ್ನು ಕಡಿತಗೊಳಿಸಿದೆ. ಇದರ ಪರಿಣಾಮ ಮುಂದಿನ ದಿನಗಳಲ್ಲಿ ನೇರವಾಗಿ ವಿದ್ಯಾರ್ಥಿ ಸಮುದಾಯ ಮೇಲೆ ಆಗಲಿದೆ. ಹಾಸ್ಟೆಲ್ ವಿದ್ಯಾರ್ಥಿಗಳ ಅಗಣಿತ ಸಮಸ್ಯೆಗಳ ಆಧಾರದಲ್ಲಿ ಮುಂದಿನ ದಿನಗಳಲ್ಲಿ ಚಳುವಳಿ ತೀವ್ರಗೊಳ್ಳಬೇಕಿದೆ.

ಅಕ್ಷರದಾಸೋಹ ಕೆಲಸಗಾರರ ಪ್ರತಿಭಟನಾ ಪ್ರದರ್ಶನ

ಅಕ್ಷರದಾಸೋಹ ಕೆಲಸಗಾರರ ಬೇಡಿಕೆಗಳನ್ನು ಜ್ಯಾರಿಗೊಳಿಸುವಂತೆ ರಾಜ್ಯ ಸರಕಾರವನ್ನು ಒತ್ತಾಯಿಸಿ ಕರ್ನಾಟಕ ರಾಜ್ಯ ಅಕ್ಷರದಾಸೋಹ ಕೆಲಸಗಾರರ ಸಂಘ (ಸಿ.ಐ.ಟಿ.ಯು) ಉಡುಪಿ ತಾಲೂಕು ಸಮಿತಿ ನೇತೃತ್ವದಲ್ಲಿ ಅಕ್ಷರದಾಸೋಹ ಕೆಲಸಗಾರರು ಉಡುಪಿ ಬಸ್ ನಿಲ್ದಾಣ ವಠಾರದಿಂದ ತಾಲೂಕು ಕಛೇರಿವರೆಗೆ ಮೆರವಣಿಗೆಯಲ್ಲಿ ಹೋಗಿ ಪ್ರತಿಭಟನೆ ನಡೆಸಿದರು.

ಅಕ್ಷರದಾಸೋಹ ಯೋಜನೆಯ ಉದ್ದೇಶ ಮಹತ್ವದ್ದಾಗಿದ್ದರೂ ಈ ಯೋಜನೆಯನ್ನು ಪ್ರಾಯೋಗಿಕವಾಗಿ ಜ್ಯಾರಿ ಮಾಡುವ ಸರಕಾರಕ್ಕೆ ನೌಕರರ ಬಗ್ಗೆ ಯಾವುದೇ ಕಾಳಜಿ ಇಲ್ಲದಿರುವುದು ವಿಷಾದನೀಯ. ಅಕ್ಷರದಾಸೋಹ ನೌಕರರಿಗೆ 10 ತಿಂಗಳು ಮಾತ್ರವೇ ಕೆಲಸವೆಂಬ ನಿಬಂಧನೆಯನ್ನು ತೆಗೆಯಬೇಕು. ಈ ನೌಕರರನ್ನು ಶಿಕ್ಷಣ ಇಲಾಖೆಯ ಆಡಳಿತ ವ್ಯವಸ್ಥೆಗೆ ಒಳಪಡಿಸಬೇಕು, ನೌಕರರಿಗೆ ಕೆಲಸದ ಭದ್ರತೆ ಒದಗಿಸಬೇಕು. ಇತ್ಯಾದಿ ಬೇಡಿಕೆಗಳ ಮನವಿಯನ್ನು ಮುಖ್ಯಮಂತ್ರಿಯವರಿಗೆ ತಹಶೀಲ್ದಾರರ ಮೂಲಕ ಸಲ್ಲಿಸಲಾಯಿತು.

ಸುಮಾರು 300 ಕ್ಕಿಂತಲೂ ಅಧಿಕ ನೌಕರರರು ಭಾಗವಹಿಸಿದ್ದರು. ಈ ಪ್ರದರ್ಶನದ ನೇತೃತ್ವವನ್ನು ಅಕ್ಷರದಾಸೋಹ ಕೆಲಸಗಾರರ ಸಂಘದ ಅಧ್ಯಕ್ಷೆ ಕೃಷ್ಣಮ್ಮ ಪಡುಬಿದ್ರಿ, ಉಪಾಧ್ಯಕ್ಷೆ ಗೀತ ಚಿತ್ರಪಾಡಿ, ಕಾರ್ಯದರ್ಶಿ ಭಾರತಿ ಒಳಕಾಡು, ಜತೆಕಾರ್ಯದರ್ಶಿ ಸುಪ್ರಭ ಎಸ್.ಕಿಣಿ, ವೇದಾವತಿ ಹೆಜಮಾಡಿದ ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪಿ.ವಿಶ್ವನಾಥ್ ರೈ, ಡೇವಿಡ್ ಎ.ಕರ್ಕಡ, ರಮೇಶ್ ಮೆಂಡನ್, ಎಚ್.ವಿಠ್ಠಲ ಪೂಜಾರಿ, ದೋಗು ಸುವರ್ಣ, ಸಾಧು ಎನ್.ಅಮೀನ್ ಕೃಷ್ಣ ಎಸ್. ಅಮೀನ್ ಮೊದಲಾದವರು ವಹಿಸಿದ್ದರು.

ಕೇಂದ್ರದ ಯು.ಪಿ.ಎ ಸರ್ಕಾರವು ಸುಗ್ರೀವಾಜ್ಞೆಯ ಮೂಲಕ 1970ರ ಪೇಟೆಂಟ್ ಕಾಯ್ದೆಗೆ ತಂದಿರುವ ತಿದ್ದುಪಡಿಗಳ ಸಾಧಕಬಾಧಕಗಳ ಬಗ್ಗೆ ವ್ಯಾಪಕ ಚರ್ಚೆ ನಡೆಸುತ್ತಿದೆ. ಕಾಯ್ದೆಯ ತಿದ್ದುಪಡಿಯ ಬಗ್ಗೆ ವ್ಯಕ್ತವಾಗುತ್ತಿರುವ ಆತಂಕಕ್ಕೆ ನೈಜ ಆಧಾರವಿದೆಯೇ? ಮುಂದೆ ಓದಿ.

ಎಸ್.ಪ್ರಸನ್ನಕುಮಾರ್

ಪೇಟೆಂಟ್ ಕಾಯಿದೆ ಕುರಿತು

1970ರ ಪೇಟೆಂಟ್ ಕಾಯಿದೆಗೆ ಕೇಂದ್ರ ಸರಕಾರ ತರಾತುರಿಯಲ್ಲಿ 26.12.2004 ರಂದು ಸುಗ್ರೀವಾಜ್ಞೆಯ ಮೂಲಕ ವಿಸ್ತಾರವಾದ ಮೂಲಭೂತ ತಿದ್ದುಪಡಿಗಳನ್ನು ಜಾರಿಗೆ ತಂದಿದೆ. ಈ ತಿದ್ದುಪಡಿಯು ಭಾರತದ ಜನತೆಯ ಹಿತಾಸಕ್ತಿಗಳಿಗೆ ತೀವ್ರವಾದ ಆತಂಕಕಾರಿ ಅಂಶಗಳನ್ನು ಒಳಗೊಂಡಿದೆ. ಈ ಕಾರಣಕ್ಕಾಗಿಯೇ ಫೆಬ್ರುವರಿ 26 ರಂದು ದೇಶವ್ಯಾಪಿಯಾಗಿ ಪೇಟೆಂಟ್ ಕಾಯಿದೆಗೆ ಜನವಿರೋಧಿ ತಿದ್ದುಪಡಿಗಳನ್ನು ಹಿಂತೆಗೆದುಕೊಳ್ಳಲು ಒತ್ತಾಯಿಸಿ ಎಲ್ಲಾ ಸಾಮೂಹಿಕ ಸಂಘಟನೆಗಳು ಪ್ರತಿಭಟನೆ ನಡೆಸಿ ಒತ್ತಾಯ ಮಾಡಲಾಗಿದೆ. ಪೇಟೆಂಟ್ ಕಾಯಿದೆ ತಿದ್ದುಪಡಿಯ ನೇರ ಪರಿಣಾಮವಾಗಿ ಔಷಧಿಗಳ ಬೆಲೆಗಳು ಗಗನಕ್ಕೇರುತ್ತವೆ. ಬಹುರಾಷ್ಟ್ರೀಯ ಬಂಡವಾಳಗಾರರ ಲಾಭ ನೂರಾರು ಪಟ್ಟು ಹೆಚ್ಚಾಗುತ್ತದೆ. ಕೃಷಿರಂಗದ ಮೇಲೆ ಭಾರಿ ದುಷ್ಪರಿಣಾಮಗಳು ಉಂಟಾಗುತ್ತವೆ. ಬೀಜ, ರಾಸಾಯನಿಕ ಗೊಬ್ಬರ ಮುಂತಾಗಿ ಮತ್ತಷ್ಟು ದುಬಾರಿಯಾಗಿ, ರೈತರ ಆತ್ಮಹತ್ಯೆಗಳು ಮತ್ತಷ್ಟು ಉಲ್ಬಣಗೊಳ್ಳುವ ಅಪಾಯದ ಪರಿಸ್ಥಿತಿ ಉಂಟಾಗುತ್ತದೆ. ಕೈಗಾರಿಕಾ ರಂಗದಲ್ಲೂ ದೇಶೀಯ ಉತ್ಪಾದನೆ ಮೇಲೆ ವಿದೇಶಿ ಬಹುರಾಷ್ಟ್ರೀಯ ಬಂಡವಾಳಗಾರರ ತಂತ್ರ, ಕುತಂತ್ರ, ತಂತ್ರಜ್ಞಾನದ ತಿರುಚಿವೆಗಳ ಮೂಲಕ ಅಧಿಪತ್ಯಕ್ಕೆ ದಾರಿ ಸುಗಮವಾಗಲಿದೆ. ಆಹಾರ ಸಂಸ್ಕರಣೆ ರಂಗದಲ್ಲೂ ಭೀಕರವಾದ ಪರಿಣಾಮಗಳಾಗುತ್ತವೆ. ಅಷ್ಟೇ ಅಲ್ಲ ಕಂಪ್ಯೂಟರ್ ತಂತ್ರಾಂಶ (ಸಾಫ್ಟ್‌ವೇರ್)ಗಳ ವ್ಯಾಪಾರದಲ್ಲೂ ಗುತ್ತೇದಾರಿತನವನ್ನು ಬಲಪಡಿಸಲಾಗುತ್ತದೆ.

ಪೇಟೆಂಟ್ ಪದ್ಧತಿ ಮುಂದೇನು?

ಇಷ್ಟೆಲ್ಲಾ ದುಷ್ಪರಿಣಾಮಗಳನ್ನು ಬೀರುವ ಈ ಪೇಟಂಟ್ ಪದ್ಧತಿ ಅಂದರೇನು? ಈಹಿನ ಕೇಂದ್ರದಲ್ಲಿ ಅಧಿಕಾರದಲ್ಲಿರುವ ಕಾಂಗ್ರೆಸ್ ನೇತೃತ್ವದ ಯುಪಿಎ ಸರಕಾರ ತರಾತುರಿಯಲ್ಲಿ ತಂದಿರುವ ಪೇಟೆಂಟ್ ಕಾಯಿದೆ ತಿದ್ದುಪಡಿಯ ಹಿನ್ನೆಲೆ ಏನು? ತಿದ್ದುಪಡಿ ಮೂಲಕ ತಂದಿರುವ ಮಹತ್ತರ ಬದಲಾವಣೆಗಳೇನು? ಎಂಬುದರ ಕುರಿತು ಸಂಕ್ಷಿಪ್ತವಾಗಿಯಾದರೂ ಪರಿಶೀಲನೆ ಮಾಡೋಣ.

'ಪೇಟೆಂಟ್' ಅಂದರೆ ಯಾವುದಾದರೂ ಹೊಸ ತಯಾರಿಕೆಯನ್ನು ಮಾಡಲು, ಉತ್ಪಾದಿಸಲು ಉಪಯೋಗಿಸಲು ಅಥವಾ ಮಾರಾಟ ಮಾಡಲು ನಿಗದಿತವಾದ ಕಾಲಾವಧಿಯವರೆಗೆ ಸರಕಾರ ನೀಡುವ ವಿಶೇಷ ಹಕ್ಕಿನ ಅನುಮತಿ ಪತ್ರ. ಸರಳವಾಗಿ ಹೇಳುವುದಾದರೆ ಹೊಸ ಸಂಶೋಧನೆ, ತಂತ್ರಜ್ಞಾನ ಕೈಗಾರಿಕಾ ಉತ್ಪಾದನೆಗೆ



ಅನ್ವಯವಾಗುವ ನೂತನ ಅಂಶಗಳ ಬಗ್ಗೆ "ಹಕ್ಕು ಏಕಸ್ವಾಮ್ಯತೆ" ಆಗಿದೆ. ಹೊಸ ಸಂಶೋಧನೆದ ಆವಿಷ್ಕಾರಗಳನ್ನು ಕಂಡುಹಿಡಿದ ವ್ಯಕ್ತಿಗಳಿಗೆ ಅವರ ಸಾಧನೆಗೆ ಪ್ರೋತ್ಸಾಹ, ಬೆಂಬಲ ಉತ್ತೇಜನ ನೀಡುವ ಉದ್ದೇಶದಿಂದ ಆರಂಭವಾದದ್ದು "ಲೆಟರ್ಸ್ ಪೇಟೆಂಟ್" ಪದ್ಧತಿ. ಮೊದಲು ಇಟಲಿ ದೇಶದಲ್ಲಿ ಆರಂಭವಾದ ಪೇಟೆಂಟ್ ಪದ್ಧತಿ ಕ್ರಮೇಣ ಫ್ರಾನ್ಸ್, ಇಂಗ್ಲೆಂಡ್ ಮತ್ತು ಇಡೀ ಯುರೋಪ್ ಪ್ರದೇಶಗಳಲ್ಲಿ ವಿಸ್ತರಿಸಿತು.

ಮೊಟ್ಟಮೊದಲ ಪೇಟೆಂಟ್ ಕಾಯಿದೆ 1474 ರಲ್ಲಿ ಜಾರಿಗೆ ಬಂದಿತು. ನೂತನವಾದ ಸಂಶೋಧನೆ, ಆವಿಷ್ಕಾರ ಮೂಲಕ ಸಾಮಾಜಿಕ ಉಪಯುಕ್ತವಾದ ಅಂಶ ಸಾಧನೆ ಮಾಡಿದವನ ಸಾಧನೆಯನ್ನು ಇತರೇ ವ್ಯಕ್ತಿಗಳ ನಕಲು ಮಾಡಿ ಲಾಭ ಪಡೆಯುವುದನ್ನು ತಡೆದು ಮೂಲ ಸಂಶೋಧನೆಗೆ ರಕ್ಷಣೆ ನೀಡುವ ಕ್ರಮವಾಗಿ ಪೇಟೆಂಟ್ ಪದ್ಧತಿ ಆರಂಭವಾಯಿತು. ಆದರೆ ಕಾಲಾನುಕ್ರಮವಾಗಿ ಲಾಭಕೋರತನ ರಕ್ಷಣೆಯ ವ್ಯವಸ್ಥೆಯಾಗಿ ಇಡೀ ಜಗತ್ತನ್ನೇ ಕಬಳಿಸುವ ವಿಕೃತ ರೂಪವನ್ನು ಪಡೆಯುತ್ತಿದೆ "ಪೇಟೆಂಟ್" ಪದ್ಧತಿ.

ಈದೀಗ ಪೇಟೆಂಟ್ ಕಾಯಿದೆಗೆ ತಿದ್ದುಪಡಿಯು 1994 ರ "ಡಂಕಲ್ ಕರಡು"ನ ಆಧಾರದಲ್ಲಿ ಉರುಗ್ವೆ ಸುತ್ತಿನ ಚರ್ಚೆಗಳ ಪರಿಣಾಮವಾಗಿ ರೂಪುಗೊಂಡ "ಗ್ಯಾಟ್"(GATT) ಒಪ್ಪಂದವೇ ಮೂಲ ಕಾರಣವಾಗಿದೆ. Gatt ಒಪ್ಪಂದಕ್ಕೆ ಸಹಿ ಮಾಡಿದ ದೇಶಗಳಲ್ಲಿ ಭಾರತ ದೇಶವೂ ಆರಂಭಿಕ ಸದಸ್ಯರಲ್ಲಿ ಒಂದಾಗಿದೆ. ಈ GATT ಒಪ್ಪಂದಗಳಲ್ಲಿ "ವ್ಯಾಪಾರ ಸಂಬಂಧ ಬೌದ್ಧಿಕ ಆಸ್ತಿ ಹಕ್ಕುಗಳು" (trips) ರಕ್ಷಣೆಯನ್ನು ಸದಸ್ಯ ರಾಷ್ಟ್ರಗಳು ನ್ಯಾಯವಾದ ಅವಕಾಶ ನೀಡಬೇಕು ಎಂಬ ಷರತ್ತುಗಳನ್ನು ವಿಧಿಸುತ್ತದೆ. ಅದರಂತೆ ಬೌದ್ಧಿಕ ಆಸ್ತಿ ಹಕ್ಕುಗಳ ಕುರಿತು ಅಂತರಾಷ್ಟ್ರೀಯವಾಗಿ ನಡೆದಿರುವ 1967ರ ಪ್ಯಾರಿಸ್ ಸಮಾವೇಶ 1971ರ ಬೆರ್ನ್ ಸಮಾವೇಶ, ರೋಮ್ ಸಮಾವೇಶದ ಒಪ್ಪಂದಗಳು ಹಾಗೂ 1977 ಬುಡಾಪೇಸ್ಟ್ ಒಪ್ಪಂದಗಳಲ್ಲಿರುವ ಷರತ್ತುಗಳನ್ನು ಆಧಾರವಾಗಿ ಸದಸ್ಯ ರಾಷ್ಟ್ರಗಳು ಅವರವರ ದೇಶಗಳ ಕಾನೂನುಗಳನ್ನು ಬದಲಾಯಿಸತಕ್ಕದ್ದು. ಈ ಕಾನೂನು ಬದಲಾವಣೆ 2005 ಜನವರಿ 1ರ ಒಳಗೆ ಜಾರಿಗೊಳ್ಳಬೇಕು.

ಇಷ್ಟೆಲ್ಲಾ ಸುದೀರ್ಘ ದಶಕದ ಹಿನ್ನೆಲೆ ಇದ್ದರೂ ಕಾಂಗ್ರೆಸ್ ನೇತೃತ್ವದ ಎನ್‌ಡಿಎ ಸರಕಾರ ಪಾರ್ಲಿಮೆಂಟ್‌ನ ಅಧಿವೇಶನ ಮುಗಿದ ಮೂರೇ ದಿನಗಳಲ್ಲಿ ಸುಗ್ರೀವಾಜ್ಞೆ ಹೊರಡಿಸಿ "ಪೇಟೆಂಟ್ ಕಾಯಿದೆ 26.12.2004 ರಂದು ತಿದ್ದುಪಡಿ ತಂದಿರುವ ಕ್ರಮ ಪ್ರಜಾಪ್ರಭುತ್ವ ವಿರೋಧಿ ಕ್ರಮವಾಗಿದೆ. 1995 ರಲ್ಲಿ "ಪೇಟೆಂಟ್ ಕಾಯಿದೆ ತಿದ್ದುಪಡಿ ಮಸೂದೆಯನ್ನು ಪಾರ್ಲಿಮೆಂಟ್‌ನಲ್ಲಿ ಮಂಡಿಸಿದಾಗ ಬಿಜೆಪಿ ಭಾರಿ ಪ್ರತಿಭಟನೆ ಮಾಡಿತ್ತು. ಆದರೆ ಅದೇ ಬಿಜೆಪಿ ಅಧಿಕಾರಕ್ಕೆ ಬಂದ ಕೂಡಲೇ 1999 ರಲ್ಲಿ ಹಾಗೂ 2002 ರಲ್ಲಿ ಎರಡು ಬಾರಿ ಪೇಟೆಂಟ್ ಕಾಯಿದೆ ತಿದ್ದುಪಡಿಗಳನ್ನು ಅತ್ಯುತ್ಸಾಹದಲ್ಲಿ ಮೂಡಿತು. "ಪೇಟೆಂಟ್" ವ್ಯಾಪ್ತಿಗೆ ಒಳಪಡಿಸಬಹುದಾದ ವಿಷಯಗಳ ವ್ಯಾಪ್ತಿಯನ್ನು ವಿಸ್ತಾರಗೊಳಿಸಿ ಬಹುರಾಷ್ಟ್ರೀಯ ಕಂಪನಿಗಳ ಲಾಭ ಹೆಚ್ಚಿಸಲು ನಾಂದಿ ಹಾಡಿತು.

ಹೀಗಾಗಿಯೇ ಬಿಜೆಪಿ ಅದರ ವರ್ಗ ಸ್ವಭಾವದ ಭಾಗವಾಗಿಯೇ ಬಂಡವಾಳಶಾಹಿಗಳ ಪ್ರತಿನಿಧಿಯಾಗಿ ದೇಶದ ವಿರೋಧ ಪಕ್ಷದ ಜನಾದೇಶವಿದ್ದರೂ ಜನತೆಯ ಹಿತಕ್ಕೆ ಕಂಟಕಪ್ರಾಯವಾಗಿರುವ ತಿದ್ದುಪಡಿಗಳು ಬಂದರೂ



ಮೌನವಾಗಿಯೇ ಬೆಂಬಲಿಸುತ್ತಿದೆ. ಬಿಜೆಪಿ ನೇತೃತ್ವದ ಎನ್‌ಡಿಎ ತಂದಿರುವ 2 ತಿದ್ದುಪಡಿಗಳ ನಂತರ ಈಗ ಯುಪಿಎ ಸರಕಾರ ತಂದಿರುವ ತಿದ್ದುಪಡಿಯು 3ನೇ ಪ್ರಧಾನ ಅಮೂಲಾಗ್ರ "ಪೇಟೆಂಟ್" ಕಾಯಿದೆ ತಿದ್ದುಪಡಿ ಸುಗ್ರೀವಾಜ್ಞೆ 2004 ಇದಾಗಿದೆ.

ಈ ಸುಗ್ರೀವಾಜ್ಞೆಯ ಮೂಲಕ 139 ಕಲಂಗಳಿರುವ ಮೂಲ ಪೇಟೆಂಟ್ ಕಾಯಿದೆಗೆ 77 ಕಲಂಗಳಿಗೆ ತಿದ್ದುಪಡಿಗಳನ್ನು ತರಲಾಗಿದೆ. ಅಂದರೆ ಇವು ಕೇವಲ ತಿದ್ದುಪಡಿಗಳಲ್ಲಿ ಬದಲಾಗಿ ಒಂದು ರೀತಿಯಲ್ಲಿ ಕಾನೂನಿನ ಪುನರ್ ರಚನೆಯೇ ಆಗಿದೆ. ಇದುವರೆಗೆ ಭಾರತದ ಪೇಟೆಂಟ್ ಕಾಯಿದೆ ಇಡೀ ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಗೆ ಮಾದರಿ ಕಾನೂನಾಗಿತ್ತು. ಆದರೆ ಮುಖ್ಯವಾಗಿ 1. ಇದುವರೆಗೆ ಉತ್ಪಾದನಾ ವಿಧಾನ(process)ಗೆ ಪೇಟೆಂಟ್ ಕೊಡುವ ಬದಲಾಯಿಸಿ 'ಉತ್ಪಾದಿತ ವಸ್ತು' (process)ಗೆ ಪೇಟೆಂಟ್ ನೀಡಲಾಗುವುದು. 2. ಇದುವರೆಗೆ ಪೇಟೆಂಟ್ ಹಕ್ಕುಗಳನ್ನು 5 ರಿಂದ 7 ವರ್ಷಗಳವರೆಗೆ ನೀಡಲಾಗುತ್ತಿತ್ತು. ಅದರ ಬದಲಾಗಿ 20 ವರ್ಷಗಳ ಏಕಸ್ವಾಮ್ಯದ "ಪ್ರತ್ಯೇಕ ಮಾರಾಟ ಹಕ್ಕುಗಳನ್ನು" ನೀಡಲಾಗುತ್ತಿದೆ. 3. ಪೇಟೆಂಟ್ ಹಕ್ಕು ಮಂಜೂರು ಮಾಡುವ ವಿಧಾನವನ್ನು ಅತೀ ಸರಳೀಕರಣ ಮಾಡಲಾಗಿದೆ. ಇದರಿಂದಾಗಿ ಪೇಟೆಂಟ್ ಮಂಜೂರು ಮಾಡುವ ಮೊದಲು ವಿರೋಧಿಸುವ ಹಕ್ಕುಗಳನ್ನು ಮೊಟಕುಗೊಳಿಸಿ ಪೇಟೆಂಟ್ ಮಂಜೂರಾದ ಮೇಲೆ ವಿರೋಧಿಸುವ ತಕರಾರು ಮಾಡುವ ವಿಧಾನ ಜಾರಿಗೊಳಿಸಲಾಗುತ್ತಿದೆ. ಇದರಿಂದಾಗಿ "ನಕಲಿ ಬೂಟಾಟಿಕೆಯ" ವ್ಯಕ್ತಿಗಳು ಕಂಪನಿಗಳು ಪೇಟೆಂಟ್ ಪಡೆಯಲು ಹಾತೊರೆಯಲು ಅನುಕೂಲ ಒದಗಿಸಿಕೊಡುತ್ತದೆ. 4. ವಿಶ್ವವ್ಯಾಪಾರ ಸಂಘಟನೆಯ ದೋಹಾ ಸಮಾವೇಶದ ಹಾಗೂ ವ್ಯಾಪಾರ ಸಂಬಂಧಿ ಬೌದ್ಧಿಕ ಆಸ್ತಿ ಹಕ್ಕುಗಳು (trips) ಅಡಿಯಲ್ಲಿ ಇರುವ ಸಡಿಲಿಕೆಗಳನ್ನು ದೇಶದ ಜನತೆಯ ಹಿತಕ್ಕೆ ಪೂರಕವಾಗಿ ಬಳಸದೇ ನಿರ್ಲಕ್ಷ್ಯ ಮಾಡಲಾಗಿದೆ.

ಉತ್ಪಾದಿತ ವಸ್ತು (product) ಪೇಟೆಂಟ್ ವಿಧಾನ ಜಾರಿಯಿಂದಾಗಿ ಔಷದಿಯ ಬೆಲೆಗಳು ಗಗನಕ್ಕೇರುತ್ತವೆ. ಅಷ್ಟೇ ಅಲ್ಲ ಈಗಾಗಲೇ ದೇಶದಲ್ಲಿ ಕಡಿಮೆ ಧರದಲ್ಲಿ ಉತ್ಪಾದಿಸಲಾಗುತ್ತಿರುವ ಔಷಧಿಗಳ ಉತ್ಪಾದನೆ ಪೇಟೆಂಟ್ ಹಕ್ಕು ಪಡೆದ ಕಂಪನಿಗಳ ಸ್ವಾರ್ಥಕ್ಕಾಗಿ ನಿಲ್ಲಿಸಬೇಕಾಗುತ್ತದೆ. ಈ ಹಿಂದೆ ಇತರ ದೇಶಗಳಲ್ಲಿ ಕಂಡುಹಿಡಿದ ಹೊಸ ಔಷಧಿ, ರಾಸಾಯನಿಕಗಳನ್ನು 4-5 ವರ್ಷಗಳಲ್ಲಿ ಸಾಮಾನ್ಯ ವಿಭಿನ್ನ ಪ್ರಕ್ರಿಯೆ ಬಳಸಿ ದೇಶೀಯವಾಗಿ ಉತ್ಪಾದಿಸಲಾಗುತ್ತಿತ್ತು. ಆದ್ದರಿಂದ ಕಡಿಮೆ ಬೆಲೆಯಲ್ಲಿ ಔಷದಿಗಳು ದೊರೆಯುವಂತಾಗುತ್ತಿತ್ತು. ಕ್ಯಾನ್ಸರ್‌ಗೆ ಭಾರತದಲ್ಲಿ ರೂ.1100ಗಳಿಗೆ ಲಭ್ಯವಾಗುವ ಔಷದಿಯ ಬೆಲೆ ಇನ್ನು ಮುಂದೆ ರೂ.22,000ಗಳಾಗುತ್ತದೆ. Aids ಔಷಧಿ ರೂ.7,000 ಒಂದು ವರ್ಷಕ್ಕೆ ಆದರೆ ಮುಂದೆ ರೂ.2 ಲಕ್ಷಗಳು ಕೊಡಬೇಕಾಗುತ್ತದೆ. ಹೃದಯ ಕಾಯಿದೆ ಸಂಬಂಧಿ ಔಷಧಿಗಳು ರೂ.7.50 ರಿಂದ ರೂ.753.94 ಪೈಸೆಗಳಾಗುತ್ತವೆ. ಇನ್‌ಫೆಕ್ಷನ್ ತಡೆಯುವ ಔಷದಿಗಳೂ ರೂ.29.00 ರಿಂದ 2352.35ಗಳಾಗುತ್ತಿವೆ. ಭಾರತದಲ್ಲಿ ಉತ್ಪಾದನೆ ಆಗುವ ಔಷದಿಗಳು ಕೇವಲ ಭಾರತದ ಜನತೆಗಷ್ಟೇ ಅಲ್ಲದೆ ಅಭಿವೃದ್ಧಿ ಹೊಂದುತ್ತಿರುವ ಹಾಗೂ ಬಡ ದೇಶಗಳ ಜನತೆಗೂ ಉಪಯೋಗವಾಗುತ್ತಿದೆ. ಆದಕಾರಣ ಭಾರತದ ಔಷದಿಗಳ ರಫ್ತು 25 ಪಟ್ಟು ಹೆಚ್ಚಾಗಿದೆ.

ಈ ಹಿನ್ನೆಲೆಯಲ್ಲಿ ಡಿಸೆಂಬರ್ 6 ರಂದು ಫ್ರಾನ್ಸ್ ರಾಜಧಾನಿ ಪ್ಯಾರಿಸ್ ನಗರದಲ್ಲಿರುವ ಭಾರತ ರಾಯಭಾರಿ ಕಛೇರಿ ಮುಂದೆ ಪ್ರತಿಭಟನೆ ಮಾಡಿ ಭಾರತ ಪೇಟೆಂಟ್ ಕಾಯಿದೆ ತಿದ್ದುಪಡಿ ಆಗಬಾರದೆಂದು ಒತ್ತಾಯಿಸಿದ್ದಾರೆ. ಅಷ್ಟೇ ಅಲ್ಲ. ವಿಶ್ವ ಸಂಸ್ಥೆಯ ಭಾಗವಾಗಿರುವ ಜಿನೇವಾದಲ್ಲಿರುವ ವಿಶ್ವ ಆರೋಗ್ಯ ಸಂಘಟನೆ (WHO) 2004 ಡಿಸೆಂಬರ್ 17 ರಂದು ಭಾರತ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಿಗೆ ಪತ್ರ ಬರೆದು trips ಅಡಿಯಲ್ಲಿರುವ ಸಡಲಿಕೆ ಬಳಸಿಕೊಂಡು ಜನಪರ ಅಂಶಗಳನ್ನು ಭಾರತದ ಪೇಟೆಂಟ್ ಕಾಯಿದೆಯಲ್ಲಿ ಉಳಿಸಿಕೊಳ್ಳಲು ಕೋರಿರುತ್ತಾರೆ. ಆದ್ದರಿಂದ ಭಾರತದ ಪೇಟೆಂಟ್ ಕಾಯಿದೆ ತಿದ್ದುಪಡಿ ದುಷ್ಪರಿಣಾಮಗಳು ಕೇವಲ ನಮ್ಮ ದೇಶದ ಬಡ, ದುಡಿಯುವ ಜನರ ಮೇಲಷ್ಟೇ ಅಲ್ಲ ಜಗತ್ತಿನ ಬಡವರಿಗೂ ನಷ್ಟವಾಗಲಿದೆ.

ಚೀನಾದ ಪೇಟೆಂಟ್‌ಕಾನೂನಿನಲ್ಲಿ ಪರಿಚ್ಛೇದ 51,57 ರ ಪ್ರಕಾರ ಯಾವುದೇ ಪೇಟೆಂಟ್ ಹೊಂದಿರುವವರಿಗೆ ನ್ಯಾಯವಾದ ಪರಿಹಾರ ಒದಗಿಸುತ್ತಾ ಅಂತಹ ವಸ್ತುಗಳನ್ನು ಉತ್ಪಾದಿಸಲು ಇತರರಿಗೆ ಖಡ್ಡಾಯ ಪರವಾನಿಗೆ ನೀಡಿ ಉತ್ಪಾದಿಸಲು ಅವಕಾಶವಿದೆ. ಆದರೆ ಅಂತಹ ಅಧಿಕಾರ ಪೇಟೆಂಟ್ ಕಾಯಿದೆಯಲ್ಲಿಲ್ಲ.

ಅಮೇರಿಕಾದಲ್ಲಿರುವಂತಹ ಪೇಟೆಂಟ್ ಕಾಯಿದೆ ಜಗತ್ತಿನೆಲ್ಲೆಡೆ ಜಾರಿಯಲ್ಲಿದ್ದರೆ ಅಮೇರಿಕಾದ ಔಷಧಿ ಮತ್ತು ಕಂಪ್ಯೂಟರ್ ವ್ಯಾಪಾರಸ್ಥರಿಗೆ 1987 ರಲ್ಲಿ ಅಂದಾಜು ಮಾಡಿದಂತೆ ವರ್ಷಕ್ಕೆ 6100 ಕೋಟಿ ಡಾಲರ್‌ಗಳ ಲಾಭ ಹೆಚ್ಚಾಗುತ್ತಿದ್ದು. ಆದ್ದರಿಂದಲೇ ಅಂತರ್ರಾಷ್ಟ್ರೀಯ ಬಂಡವಾಳಗಾರರ ಒತ್ತಡಕ್ಕೆ ಮಣಿದು ಯುಪಿಎ ಸರಕಾರ ಜನವಿರೋಧಿ ದೇಶವಿರೋಧಿ ತಿದ್ದುಪಡಿಗಳನ್ನು ಸುಗ್ರೀವಾಜ್ಞೆ ಮೂಲಕ ಪ್ರಕಟಿಸಲಾಗಿದೆ. ಇಂತಹ ಜನವಿರೋಧಿ ತಿದ್ದುಪಡಿಗಳನ್ನು ವಾಪಸ್ಸಾಗುವಂತೆ ಜನಾಂದೋಲನ ತೀವ್ರಗೊಳಿಸುವ ಅಗತ್ಯವಿದೆ. ಪಾರ್ಲಿಮೆಂಟ್ ಒಳಗೆ ಸಿಪಿಐ(ಎಂ) ಮತ್ತು ಎಡಪಕ್ಷಗಳು ಒತ್ತಡ ಮಾತ್ರ ಸಾಕಾಗುವುದಿಲ್ಲ. ಪಾರ್ಲಿಮೆಂಟ್ ಹೊರಗೆ ದೇಶಾದ್ಯಂತ ಚಳುವಳಿಯ ಭಾಗವಾಗಿ ಕರ್ನಾಟಕದಲ್ಲೂ ದೇಶಪ್ರೇಮಿ ಹೋರಾಟ ಮುನ್ನಡೆಸೋಣ.


ಈ ಬಜೆಟ್: ಗ್ರಾಮೀಣದತ್ತ ಇಣುಕು - ಉದಾರೀಕರಣದ ತಿಣುಕು

ಚಿದಂಬರಂ ಮಂಡಿಸಿದ ಸಾಮಾನ್ಯ ಬಜೆಟ್ ಹಲವು ಮಿಶ್ರಣಗಳ ಅಡುಗೆ. ಉದ್ಯೋಗಸೃಷ್ಟಿಗೆ ಒತ್ತು, ಗ್ರಾಮೀಣ ಪ್ರದೇಶಗಳಲ್ಲಿ ಮೂಲಸೌಕರ್ಯಗಳ ನಿರ್ಮಾಣ, ಸಾಮಾಜಿಕ ಕ್ಷೇತ್ರದಲ್ಲಿ ಹೂಡಿಕೆ, ಅಂಶಗಳು ಸ್ವಾಗತಾರ್ಹವಾದ ಬದಲಾವಣೆಗಳು. ಇಂತಹ ಕ್ರಮ ವಹಿಸುವಲ್ಲಿ ಎಡಪಕ್ಷಗಳು ಹೇರಿದ ಒತ್ತಡ ಎದ್ದು ಕಾಣುವಂತದ್ದು. ಅದೇ ಸಂದರ್ಭದಲ್ಲಿ ಆರ್ಥಿಕ ಉದಾರೀಕರಣದ ಅನಾಹುತಕಾರಿ ನೀತಿಗಳಿಗೆ ಅಂಟಿಕೊಂಡಿರುವುದು ಸ್ಪಷ್ಟ. ಯುಪಿಎ ಸರ್ಕಾರದ ಬಜೆಟ್‌ನ ಬಗ್ಗೆ ವಿಶ್ಲೇಷಣೆಯ ಲೇಖನಗಳು.

ಎಸ್.ಪ್ರಸನ್ನಕುಮಾರ್

ಸಾಮಾನ್ಯ ಕನಿಷ್ಠ ಕಾರ್ಯಕ್ರಮವನ್ನು ಒಪ್ಪಿಕೊಂಡು ಅಧಿಕಾರಕ್ಕೆ ಬಂದಿರುವ ಕೇಂದ್ರ ಕಾಂಗ್ರೆಸ್ ನೇತೃತ್ವದ ಯುಪಿಎ ಸರಕಾರದ 2005-06 ವರ್ಷಕ್ಕಾಗಿ ಎರಡನೇ ಬಡ್ಜೆಟನ್ನು ಆರ್ಥಿಕ ಮಂತ್ರಿ ಪಿ.ಚಿದಂಬರಂ ಮಂಡಿಸಿದ್ದಾರೆ. ಈ ಬಜೆಟ್ಟಿನಲ್ಲಿ ಸಿಪಿಐ(ಎಂ) ಮತ್ತು ಎಡಪಕ್ಷಗಳ ಮನವಿ ಪತ್ರದಲ್ಲಿ ಒತ್ತಾಯ ಮಾಡಿದ್ದ ಕೆಲವು ಅಂಶಗಳಿಗೂ ಗಮನ ನೀಡಲಾಗಿದೆ. ವಿಶ್ವ ಬ್ಯಾಂಕ್ ನಿರ್ದೇಶಿತ ಆರ್ಥಿಕ ನೀತಿಗಳ ಒಂದು ಮುಖ್ಯ ಒತ್ತಡವಾಗಿರುವಂತಹ 'ಜನಕಲ್ಯಾಣ' ವಿಚಾರಗಳಲ್ಲಿ ಸರಕಾರದ ಪಾತ್ರ ಪೂರ್ಣ ಹಿಂತೆಗೆದುಕೊಳ್ಳಬೇಕೆಂಬುದರ ವಿಚಾರ ಸ್ವಲ್ಪ ನೆಲೆ ಬದಲಾವಣೆ ಮಾಡಲಾಗಿರುವುದು ಸ್ವಾಗತಾರ್ಹ ಅಂಶವಾಗಿದೆ. ಈ ಬಜೆಟ್‌ನ ಒಟ್ಟು ಮೊತ್ತ ರೂ. 5,14,344 ಕೋಟಿಗಳಾಗಿದೆ. ಈ ಒಟ್ಟು ಮೊತ್ತದಲ್ಲಿ ಉದ್ಯೋಗ ಸೃಷ್ಟಿ, ಗ್ರಾಮೀಣ ಪ್ರದೇಶಗಳಲ್ಲಿ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಮತ್ತು ಸಾಮಾಜಿಕ ರಂಗಗಳಲ್ಲಿ ಹಣ ಹೂಡಿಕೆ ಅಂಶಗಳು ಒಳಗೊಂಡಿವೆ. ಕೃಷಿ, ಶಿಕ್ಷಣ, ಆರೋಗ್ಯ, ಉದ್ಯೋಗ ಭದ್ರತೆ ಯೋಜನೆಗಳಿಗೆ, ಗ್ರಾಮೀಣ ರಸ್ತೆ ನಿರ್ಮಾಣ, ನೀರಾವರಿ, ವಸತಿ, ಗ್ರಾಮೀಣ ವಿದ್ಯುದೀಕರಣ, ಗ್ರಾಮೀಣ ದೂರ ಸಂಪರ್ಕ ವಿಸ್ತರಣೆಗಳಿಗೆ ಹೆಚ್ಚಿನ ಮೊತ್ತಗಳನ್ನು ಪ್ರಸ್ತಾಪಿಸಲಾಗಿದೆ. ಅದೇ ಸಂದರ್ಭದಲ್ಲಿ ಬಜೆಟ್‌ಗೆ ಹಣ ಪಡೆಯಲು ಸಾರ್ವಜನಿಕ ಕ್ಷೇತ್ರದಿಂದ ಬಂಡವಾಳ ಹಿಂಪಡಿತ ಕ್ರಮವನ್ನು ಈ ಬಾರಿ ನೆಚ್ಚಿಕೊಂಡಿಲ್ಲ. ಮತ್ತೊಂದು ಗಮನಾರ್ಹ ಅಂಶ ಎಲ್ಲಾ ಇಲಾಖೆಗಳು ಖರ್ಚು ವೆಚ್ಚಗಳಿಗೆ 'ಲಿಂಗ ಆಧಾರಿತ' ಮಾಹಿತಿ ನೀಡುವಂತಹ ತತ್ವ ಸೇರಿಸಲಾಗಿದೆ. ಇದರಿಂದ ಮಹಿಳೆಯರಿಗಾಗಿ ಮಾಡಲಾದ ವೆಚ್ಚದ ನಿರ್ದಿಷ್ಟ ಮಾಹಿತಿ ನಿಖರವಾಗಿ ದೊರೆಯುವಂತಾಗುತ್ತದೆ. ನೇರ ತೆರಿಗೆ ಪರಿಷ್ಕರಣೆಯಲ್ಲಿ ಮಾಡಲಾದ ಕೆಲವು ಬದಲಾವಣೆಗಳು ಸ್ವಾಗತಾರ್ಹವಾಗಿವೆ. ಅಂಗನವಾಡಿಗಳನ್ನು ವಿಸ್ತರಣೆ ಮಾಡಿ 1,88,169 ಹೊಸ ಕೇಂದ್ರಗಳ ಆರಂಭ ಮಾಡುವ ಕ್ರಮ ಆದರೇ,

ಜನಕಲ್ಯಾಣ ಕಾರ್ಯಕ್ರಮಗಳಿಗೆ ಸಾಮಾಜಿಕ ರಂಗಗಳಿಗೆ ಗೊತ್ತುಮಾಡಿರುವ ಮೊತ್ತ ನಿಜವಾಗಿ ಕೊಡಲಾಗುತ್ತ ದೆಯೆ? ರಾಜಕೀಯ ಸಂಕೀರ್ಣತೆಯಲ್ಲಿ ವ್ಯಕ್ತಪಡಿಸಿದ ಕಾಳಜಿ ಮಾತ್ರವೇ ಆಗುತ್ತದೆಯೆ? ಈ ಪ್ರಶ್ನೆಗಳಿಗಿರುವ ಕಾರಣ ವೇನೆಂದರೆ ಬಜೆಟ್‌ನಲ್ಲಿ ಮಾಡಿರುವ ತೆರಿಗೆ ಸಂಗ್ರಹದ ಅಂದಾಜಗಳು ಬಹಳ ಮೇಲ್ಮಟ್ಟದಲ್ಲಿ ತೋರಿಸಿರುವುದೇ ಕಾರಣ. ಕಳೆದ ವರ್ಷ ತೆರಿಗೆ ಸ್ವರೂಪದ ನಿರೀಕ್ಷೆ ರೂ. 3,17,733 ಕೋಟಿ ಆದರೇ ಸಂಗ್ರಹವಾಗಿದ್ದು ರೂ. 3,06,021 ಕೋಟಿ ಅಂದರೇ ರೂ. 11,000 ಕೋಟಿ ಕಡಿಮೆ ಸಂಗ್ರಹ. ಇದರಿಂದಾಗಿ ನೇರವಾಗಿ ಅಷ್ಟರಮಟ್ಟಿಗೆ ಸಾಮಾಜಿಕ ರಂಗಗಳಿಗೆ ಹಣ ಕಡಿಮೆ ಮಾಡಲಾಯಿತು. ಗ್ರಾಮೀಣ ಉದ್ಯೋಗ ಭರವಸೆಗೆ ರೂ. 40,000 ಕೋಟಿ ಅಗತ್ಯವಿದ್ದರೇ ಬಜೆಟ್ ರೂ.11,000 ಕೋಟಿ ನಿಗದಿ ಮಾಡಿದೆ. ಕೃಷಿ ರಂಗದಲ್ಲಿ ಆಹಾರದಾನ್ಯಗಳ ಉತ್ಪಾದನೆಯಲ್ಲಿ ಸ್ವಯಂ ಸಮೃದ್ಧಿ ಗುರಿ ಸಾಧಿಸುವ ದಿಶೆಯಲ್ಲಿ ಗಮನ ನೀಡಲಾಗಿಲ್ಲ. ಬದಲಾಗಿ, ಬೆಳೆ ವಿಧಾನದಲ್ಲಿ ಬದಲಾವಣೆಗೆ ಒತ್ತು ನೀಡಲಾಗಿದೆ ಮತ್ತು ಕೃಷಿ ರಂಗಕ್ಕೆ ನಿಗದಿ ಗೊಳಿಸಿದ ಮೊತ್ತ ಸಾಕಷ್ಟಿಲ್ಲ ಕೃಷಿ ರಂಗದಲ್ಲಿ ನಮ್ಮ ದೇಶದ ಸಮಸ್ಯೆ ಉತ್ಪಾದಕತೆಯ ಪ್ರಶ್ನೆಯಾಗಿ ಮಾತ್ರ ಇಲ್ಲ ಬದಲಾಗಿ ಗ್ರಾಮೀಣ ದುಡಿಯುವ ಜನರ 'ಕೊಳ್ಳುವ ಶಕ್ತಿ' ಸಮಸ್ಯೆಯಿಂದಾಗಿ ಉತ್ಪಾದನೆ ಆಗುತ್ತಿರುವ ಆಹಾರ ಧಾನ್ಯಗಳನ್ನು ಕೊಂಡುಕೊಳ್ಳಲಾಗುತ್ತಿಲ್ಲ. ಅಷ್ಟೇ ಅಲ್ಲ ಆಹಾರ ದಾನ್ಯಗಳ ತಲಾ ಬಳಕೆಯ ಪ್ರಮಾಣ ವರ್ಷಕ್ಕೆ 175 ಕೆಜಿ ಗಳಿಂದ 155 ಕೆಜಿಗಳಿಗೆ ಕುಸಿಯುತ್ತಿದೆ.



ಮತ್ತೊಂದೆಡೆ ಶೇರು ಮಾರುಕಟ್ಟೆಯ ಸೂಚ್ಯಂಕ ಅತ್ಯುತ್ಸಾಹದಲ್ಲಿ ಹಾರಿ ಹಾರಿ ಏರಿಹೊಗುತ್ತಿದೆ. ಇದು ಬಂಡವಾಳಗಾರರಿಗೆ ಆಗಿರುವ ಸಂತೋಷದ ದ್ಯೋತಕವೂ ಹೌದು. ತೆರಿಗೆ ಕ್ರಮಗಳಲ್ಲಿ ಬಂಡವಾಳಗಾರರಿಗೆ ಬಹಳಷ್ಟು ರಿಯಾಯತಿಗಳನ್ನು ಕೂಡ ಮಾಡಲಾಗಿದೆ. ಕಳೆದ ಬಜೆಟ್ಟಿನಲ್ಲಿ ಒಂದು ಲಕ್ಷ ಶೇರು ವ್ಯವಹಾರಕ್ಕೆ ರೂ.150 ತೆರಿಗೆ ಹಾಕಿದಾಗ ಇಡೀ ಶೇರುದಲ್ಲಾಲಿಗಳು ಆಕಾಶವೇ ಕಳಚಿ ಬಿತ್ತೆಂಬ ಗುಲ್ಲೆಬ್ಬಿಸಿದರು. ಆಗ ಚಿದಂಬರಂ ಒಂದು ಲಕ್ಷಕ್ಕೆ ರೂ.15 ಕ್ಕೆ ತೆರಿಗೆ ಇಳಿಸಿದ್ದರು. ಈ ಬಾರಿ ಅದನ್ನು ರೂ.20ಗೆ ಏರಿಸಲಾಗಿದೆಯಷ್ಟೆ. ಆಮದು ಸುಂಕಗಳನ್ನು ಕಡಿತ, ಖಾಸಗೀ ಹೂಡಿಕೆಗಳ ಮೇಲಾಗುವ ಪರಿಣಾಮಗಳು ಪ್ರಶ್ನಾರ್ಹವಾಗಿದೆ. ಇದರಿಂದಾಗಿ ದೇಶೀಯ ಕೈಗಾರಿಕೆಗಳಿಗೂ ಆತಂಕ ಉಂಟಾಗುತ್ತದೆ. ಕಂಪನಿಗಳ ಮೇಲೆ ವಿಧಿಸುವ "ಕಾರ್ಪೋರೇಟ್ ತೆರಿಗೆ" ಗಣನೀಯ ಪ್ರಮಾಣದ ಕಡಿತವನ್ನು ವಯಕ್ತಿಕ ಆದಾಯ ತೆರಿಗೆಗಳ ಕಡಿತದೊಂದಿಗೆ ಹೋಲಿಸಿ ಕಡಿಮೆ ಮಾಡಿರುವುದು ಸಮಂಜಸವಲ್ಲ. ಒಬ್ಬ ನೌಕರ, ಕಾರ್ಮಿಕನಿಗೆ ನೀಡುವ ತೆರಿಗೆ ರಿಯಾಯತಿಗೂ ಕಂಪನಿಗೆ ತೆರಿಗೆಯಲ್ಲಿ ಕಡಿತವನ್ನು ಒಂದೆ ತಕಡಿಯಲ್ಲಿ ತೂಗುವ ಚಿದಂಬರಂ ಅವರ ವಾದ ಸಮರ್ಥನೀಯವಲ್ಲ. ಸೇವಾ ತೆರಿಗೆ ವ್ಯಾಪ್ತಿಯನ್ನು ವಿಸ್ತರಿಸುವ ಬದಲಾಗಿ ರೂ.4 ಲಕ್ಷ ಒಟ್ಟು ವ್ಯವಹಾರದವರೆಗೆ ವಿನಾಯತಿ ನೀಡಿರುವುದು ತೆರಿಗೆ ಸಂಗ್ರಹ ಕಡಿತಕ್ಕೆ ದಾರಿ ಮಾಡಿಕೊಡುತ್ತದೆ. ವಿದೇಶಿ ಹೂಡಿಕೆದಾರರ ಬಗ್ಗೆ ತೆರಿಗೆ ವಿಚಾರದಲ್ಲಿ ದಿಟ್ಟ ಮೌನವನ್ನೇ ವಹಿಸಲಾಗಿದೆ.

ನೇರ ವಿದೇಶಿ ಬಂಡವಾಳವನ್ನು ಗಣಿಗಾರಿಕೆ, ಚಿಲ್ಲರೆ ವ್ಯಾಪಾರ ಹಾಗೂ ಪಿಂಚಣಿ ನಿರ್ವಹಣೆ ರಂಗಗಳಲ್ಲಿ ಅವಕಾಶ ನೀಡುವ ಪ್ರಸ್ತಾಪಗಳು ಆತಂಕಕಾರಿಯಾಗಿದೆ. ಏಕೆಂದರೆ ದೇಶದ ಹಿತಕ್ಕೆ ಹಾಗೂ ಒಟ್ಟಾರೆ ಚಟುವಟಿಕೆಗಳಿಗೆ ಪೂರಕವಾಗುವ ರಂಗಗಳಲ್ಲದೆ ಎರ್ರಾಬಿರ್ರಿ ನೇರ ವಿದೇಶಿ ಬಂಡವಾಳ ಯಾರ ಹಿತಕ್ಕೆ ಎಂಬ ಪ್ರಶ್ನೆ ಉಂಟುಮಾಡುತ್ತದೆ. ಪಿಂಚಣಿ ನಿರ್ವಹಣೆ ವಿದೇಶ ಬಂಡವಾಳಗಾರರಿಗೆ ಮುಕ್ತವಾಗಿಸುವುದು ಅಥವಾ ಪಿಂಚಣಿಯನ್ನು ಸರಕಾರದ ಸಾಮಾಜಿಕ ಹೊಣೆಗಾರಿಕೆಯಿಂದ ತಪ್ಪಿಸಿ ಕಾರ್ಮಿಕರ, ನೌಕರರ ಇಳಿವಯಸ್ಸಿನ ಜೀವನ "ದಿನ ದಿನ ಗಂಡಾಂತರ ನೂರು ವರುಷ ಆಯಸ್ಸು" ಎಂಬಂತೆ ಮಾಡಲಾಗುತ್ತವೆ.

ಬ್ಯಾಂಕಿಂಗ್ ರಂಗದಲ್ಲಿ ಸೂಚಿಸಿದ ಬದಲಾವಣೆಗಳು ಬ್ಯಾಂಕಿಂಗ್ ಕ್ಷೇತ್ರವನ್ನು ಪಾರ್ಲಿಮೆಂಟ್‌ಗೆ ಉತ್ತರದಾಯಿತ್ವದಿಂದ ಹೊರಗಿಡುವ ಪರಿಣಾಮವಾಗುತ್ತದೆ. ಅಷ್ಟೇ ಅಲ್ಲ. ಇದು ಸರಕಾರ ಕೃಷಿ, ಶಿಕ್ಷಣ ಇತ್ಯಾದಿ ರಂಗಗಳಲ್ಲಿ ಹೂಡಿಕೆ ಮತ್ತು ಸಾಲ ವ್ಯವಸ್ಥೆಯನ್ನು ಉತ್ತಮಪಡಿಸಲು ಮಾಡಿದ ಸೂಚನೆಗಳಿಗೆ ಧಕ್ಕೆ ಉಂಟು ಮಾಡಬಲ್ಲಂತಹ ಸ್ವಾಯತತ್ತೆಯಾಗಿ ಪರಿಣಮಿಸಬಹುದಾಗಿದೆ. ಕಪ್ಪು ಹಣದ ನಿಯಂತ್ರದ ಬಗ್ಗೆ ಹೇಳಿದ ವಿಚಾರ ಸ್ವಾಗತಾರ್ಹವಾದರೂ ರೂ.10000ಗಳನ್ನು ಬ್ಯಾಂಕ್‌ನಿಂದ ತೆಗೆದರೆ ರೂ.10 ರಂತೆ ತೆರಿಗೆ ಹಾಕಿರುವುದು ಸಮಂಜಸವಾಗಿಲ್ಲ. ಒಟ್ಟಾರೆ ನೇರ ತೆರಿಗೆಯಲ್ಲಿ ಸೂಚಿಸಿದ ಬದಲಾವಣೆಗಳು ನೌಕರರು ಹಾಗೂ ಕಾರ್ಮಿಕರಿಗೆ ನೀಡಿದ್ದು ಗೇಣುದ್ದ ಬಂಡವಾಳಗಾರರಿಗೆ ನೀಡಿದ್ದು ಮಾರುದ್ದ ಎಂಬಂತಿದೆ.

ಸೀಮೆ ಎಣ್ಣೆ (ಕೆರೋಸಿನ್) ಅಡುಗೆ ಅನಿಲಗಳ ಮೇಲೆ ಅಬ್ಕಾರಿ ಸುಂಕ ಹಾಗೂ ಆಮದು ಸುಂಕ ಕಡಿತ ಸ್ವಾಗತಾರ್ಹವಾದರೂ ಪೆಟ್ರೋಲ್ ಮೇಲೆ ಲೀಟರ್‌ಗೆ 0.50 ಪೈ ತೆರಿಗೆ ಹಾಕಿರುವುದು ದೇಶದ ಎಲ್ಲಾ ಸಾರಿಗೆ ಮತ್ತು ಸರ್ವವ್ಯಾಪಿಯಾದ ಪರಿಣಾಮಗಳಾಗಿ ಬೆಲೆ ಹೆಚ್ಚಳಕ್ಕೆ ದಾರಿಯಾಗುತ್ತದೆ.

ಆರ್ಥಿಕ ಸರ್ವೆಯಲ್ಲಿ ಪ್ರಸ್ತಾಪಿಸಿದ "ಕಾರ್ಮಿಕರಿಗೆ ಸಂಬಂಧಿಸಿದ ಸುಧಾರಣೆ ಹೆಸರಿನ ಧಾಳಿ ಬಡ್ಜೆಟ್‌ನಲ್ಲಿ ಕಂಡಿಲ್ಲವಾದರೂ ಅದರ ಅಪಾಯ ಇಲ್ಲದಾಗಿದೆ ಎಂದು ಹೇಳಲಾಗದು.

ಬಡ್ಜೆಟ್ ಅಂತಿಮವಾಗಿ ಅಂಗೀಕರಿಸಲ್ಪಡುವಾಗ ಜನವಿರೋದಿ ಅಂಶಗಳ ಬದಲಾವಣೆಗೆ ಹಾಗೂ ಸಾಮಾಜಿಕ ರಂಗಗಳಿಗೆ ಗೊತ್ತು ಮಾಡಿದಷ್ಟಾದರೂ ಖಚಿತಪಡಿಸುವಂತೆ ಹೋರಾಟ ಅನಿವಾರ್ಯವಾಗಿದೆ.

ಆರ್ಥಿಕ ಸಮೀಕ್ಷೆ : ಅ

ಸರ್ಕಾರ ಆರ್ಥಿಕ ಸ್ಥಿತಿಯನ್ನು ಹೇಗೆ ಕಾಣುತ್ತದೆ ಮತ್ತು ಅದನ ಯಾವ ರೀತಿ ವಿಶ್ಲೇಷಿಸುತ್ತದೆ ಎಂಬುವುದರ ಮೇಲೆ ಸರ್ಕಾರದ ಆರ್ಥಿಕ ಕ್ರಮಗಳು ರೂಪಿತವಾಗುತ್ತವ ಬಜೆಟ್‌ಪೂರ್ವ ಆರ್ಥಿಕ ಸಮೀಕ್ಷೆಗಳ ಹೂರಣದ ವಿಶ್ಲೇಷಣೆ: ಕುರುಡು ಕಾಂಚಾಣದ ಅಂಕಣ ಬರಹಗಾ ಜಿ.ಎಸ್.ಮಣಿ ಯವರಿಂದ.

ಪ್ರಸಕ್ತ ಸಾಲಿನ ಅಂದರೆ 2004-05ನೇ ಸಾಲಿನ ಆರ್ಥಿಕ ಸಮೀಕ್ಷೆಯನ್ನು ಸಂಸತ್ತಿನಲ್ಲಿ ಫೆಬ್ರವರಿ 25ರಂದು ಕೇಂದ್ರದ ಹಣಕಾಸು ಸಚಿವ ಪಿ.ಚಿದಂಬರಂ ಅವರು ಮಂಡಿಸಿದರೂ ಆಳುವ ವರ್ಗದ ನೋಟವನ್ನು ಬಿಂಬಿಸುವ ಇದು ಬರುವ ಬಜೆಟ್ಟಿನಲ್ಲಿ ಮತ್ತು ನಂತರದ ದಿನಗಳಲ್ಲಿ ಬರುವ ಆರ್ಥಿಕ ನೀತಿಗಳ ಸೂಚಿಯೂ ಹೌದು.



ದೇಶದ ಆರ್ಥಿಕ ಪರಿಸ್ಥಿತಿಯನ್ನು ಈ ಸರ್ಕಾರ ಹೇಗೆ ಗ್ರಹಿಸುತ್ತದೆ ಎಂಬುದು ಆರ್ಥಿಕ ಸಮೀಕ್ಷೆಯಲ್ಲಿ ಬಿಂಬಿತವಾಗುತ್ತದೆ. ಸರ್ಕಾರ ಆರ್ಥಿಕ ಸ್ಥಿತಿಯನ್ನು ಹೇಗೆ ಕಾಣುತ್ತದೆ ಮತ್ತು ಅದನ್ನು ಯಾವ ರೀತಿ ವಿಶ್ಲೇಷಿಸುತ್ತದೆ ಎಂಬುದರ ಮೇಲೆ ಆ ಸರ್ಕಾರದ ಆರ್ಥಿಕ ಕ್ರಮಗಳು ರೂಪಿತವಾಗುತ್ತವೆ. ಒಂದೇ ಮಾತಿನಲ್ಲಿ ಹೇಳುವುದಾದರೆ ಇವು ಆಳುವ ವರ್ಗದ ಕಣ್ನೋಟ ಮತ್ತು ಹಿತಾಸಕ್ತಿಗಳನ್ನು ಬಿಂಬಿಸುತ್ತವೆ ಎಂದು ಹೇಳಬಹುದು.

ಯುಪಿಎ ಸರ್ಕಾರದ ಒತ್ತಡಗಳನ್ನು ಇದು ಸೂಚಿಸುತ್ತದೆ. ಉದಾರೀಕರಣದ ನೀತಿಗಳನ್ನು ಪೂರ್ತಿ ಜಾರಿ ತರಬಯಸುವ ಕಾಂಗ್ರೆಸ್ಸು ಎಡಪಕ್ಷಗಳ ಜನಪರ ದೋರಣೆಗಳನ್ನು ಅರೆ ಮನಸ್ಸಿನಿಂದ ಗತ್ಯಂತರವಿಲ್ಲದೆ ಜಾರಿ ಮಾಡುತ್ತಿರುವುದನ್ನು ಈ ಪ್ರಕ್ರಿಯೆಯನ್ನು ಸೂಕ್ಷ್ಮವಾಗಿ ನೋಡಿದರೆ ಗೊತ್ತಾಗುತ್ತದೆ. ಎಡ ಪಕ್ಷಗಳ ವಿಷಯದಲ್ಲಿ ಎಷ್ಟು ಕಣ್ಣು ಮುಚ್ಚಾಲೆಯಾಟ ಆಡಲು ಸಾಧ್ಯವೋ ಅಷ್ಟನ್ನು ಮಾಡುತ್ತಿರುವುದನ್ನು ಕಾಣಬಹುದು.

ಆರ್ಥಿಕ ಸಮೀಕ್ಷೆಯ ಮುಖ್ಯ ಅಂಶಗಳೇನು?

1 ಈ ಸಾಲಿನ್ನಲ್ಲಿ ಭಾರತದ ಒಟ್ಟು ಆಂತರಿಕ ಉತ್ಪಾದನಾ ಶೇ. 6.9ರ ಪ್ರಮಾಣದಲ್ಲಿ ಬೆಳೆಯಲಿದೆ.

2. ಹಣದುಬ್ಬರ ಹಿಡಿತಕ್ಕೆ ಬಂದಿದ್ದು ಶೇ. 6.4ರ ಆಸು ಪಾಸಿನಲ್ಲಿದೆ.

3. ತೆರಿಗೆ ಒಟ್ಟು ಆಂತರಿಕ ಉತ್ಪಾದನೆಯ ಅನುಪಾತವನ್ನು ಸುಧಾರಿಸಬೇಕೆಂದು ಹನ್ನೆರಡನೇ ಹಣಕಾಸು ಆಯೋಗದ ಶಿಫಾರಸ್ಸು ಜಾರಿಗೆ ಬರಬೇಕು.

4. ಚಿಲ್ಲರೆ ವ್ಯಾಪಾರ ಮತ್ತು ವಿಮೆ ಕ್ಷೇತ್ರಗಳಲ್ಲಿ ವಿದೇಶಿ ನೇರ ಹೂಡಿಕೆಯನ್ನು ಹೆಚ್ಚಿಸಬೇಕು.

5. ಆಹಾರ ಸಹಾಯಧನ ಪ್ರಮಾಣ ಕಡಿಮೆಯಾಗುತ್ತಿದೆ.

6. ಕೃಷಿ ಉತ್ಪನ್ನಗಳ ರಫ್ತು ಕಡಿಮೆಯಾಗುತ್ತಿದೆ.

7. ಈ ಸಾಲಿನಲ್ಲಿ ಆಹಾರ ಧಾನ್ಯಗಳ ಉತ್ಪಾದನೆ 206.4 ದಶಲಕ್ಷ ಟನ್ನುಗಳಷ್ಟಾಗಬಹುದು.

8. ದೊಡ್ಡ ಲಾಭದಾಯಕ ಸಾರ್ವಜನಿಕ ವಲಯದ ಘಟಕಗಳಿಗೆ ಸ್ವಾಯತ್ತತೆ ನೀಡಿ ರೋಗಗ್ರಸ್ತ ಉದ್ದಿಮೆಗಳನ್ನು ಮುಚ್ಚುವುದು.

9. ತೈಲದ ಖರ್ಚು ಶೇ.40ರಷ್ಟು ಹೆಚ್ಚಾಗಲಿದೆ.

10. ಜವಳಿ ಉದ್ಯಮದಲ್ಲಿ ಬದಲಾವಣೆಯ ಅಗತ್ಯ.

ಹೀಗೆ ವಿವಿಧ ವಿಷಯಗಳ ಬಗೆಗೆ ಈ ಆರ್ಥಿಕ ಸಮೀಕ್ಷೆ ಹೇಳುತ್ತಲೇ ಹೋಗುತ್ತದೆ.

ಕೆಳಗಿನ ಕೆಲವು ಮಂಡನೆಗಳನ್ನು ನೋಡಿ


- ವಿದ್ಯುತ್ ವಲಯ ಮತ್ತು ರಾಜ್ಯವಿದ್ಯುತ್ ನಿಗಮಗಳಲ್ಲಿ ಸುಧಾರಣೆ ಅಗತ್ಯ

ನಿವೃತ್ತಿ ವೇತನದ ಹೊರೆ ಭಾರವಾಗುತ್ತಿದೆ, ಇತ್ಯಾದಿ

...ವರ್ಗ ಸರ್ಕಾರದ ನೋಟ

ಈ ಸಮೀಕ್ಷೆಯಲ್ಲಿ ಓದಿದರೆ ದೇಶದ ಜನ ಸಾಮಾನ್ಯರ ...ಮಸ್ಯೆಗಳೇನು ಎಂಬ ಗ್ರಹಿಕೆ ಇರುವಂತಿಲ್ಲ. ಅಲ್ಲದೆ ದೇಶದ ...ನರ ಸಮಸ್ಯೆಗಳೆಲ್ಲ ಬಂಡವಾಳಶಾಹಿ ಬೆಳವಣಿಗೆಯಿಂದಲೇ ...ರಿಹಾರವಾಗುತ್ತವೆ ಎಂಬ ಗ್ರಹಿಕೆ ಇರುವಂತಿದೆ. ವಿದೇಶೀ ...ೀರ ಹೂಡಿಕೆ, ವಿದ್ಯುತ್ ವಲಯದ ಸುಧಾರಣೆ, ನಿವೃತ್ತಿ ...ೇತನ ಹೊರೆಯಾಗುವುದು, ಇತ್ಯಾದಿ ಮಂಡನೆ ನೋಡಿದರೆ ...ಿ ಸರ್ಕಾರ ನಿಜವಾದ ಜನಪರ ಕಾಳಜಿ ಹೊಂದಿರಲು ...ಾಧ್ಯವಿಲ್ಲ ಎಂಬುದು ಖಚಿತವಾಗುತ್ತದೆ.

ವಿದೇಶೀ ನೇರ ಹೂಡಿಕೆ ಖಂಡಿತವಾಗಿಯೂ ಬೇಕು. ...ದರೆ ಅದು ಪರಸ್ಪರ ಲಾಭದಾಯಕವಾಗಿದ್ದರೆ ಮಾತ್ರ. ನಮ್ಮ ...ನರಿಗೆ ಹಾನಿಕಾರಕವಾಗಿ ವಿದೇಶೀ ಹೂಡಿಕೆದಾರರಿಗೆ



ಲಾಭದಾಯಕವಾಗುವಂತಿದ್ದರೆ ಅದೇಕೆ ನಮಗೆ ಬೇಕು?

ವಿದ್ಯುತ್ ವಲಯದ ಸುಧಾರಣೆಯ ಮಾತನ್ನಾಡುವವರು ಎನ್ರಾನ್ ನಮಗೆ ನೀಡಿದ ಕಹಿ ಅನುಭವದ ಪಾಠಗಳನ್ನು ತಿಳಿದುಕೊಂಡಿರಬೇಕು. ದೇಶದ ದೊಡ್ಡ ಬಂಡವಾಳಿಗರು ಮಾಡುವ ವಿದ್ಯುತ್ ಕಳ್ಳತನ ದೇಶೋದ್ಧಾರಕ ಕೆಲಸ ಎಂದು ತಿಳಿದುಕೊಂಡರೆ ಬಡವರ ವಿರುದ್ಧವಾಗಿ ಸಹಾಯಧನಗಳನ್ನು ತೆಗೆದುಹಾಕಿ, ಖಾಸಗೀಕರಣದ ಸುಧಾರಣೆ ಮಾಡಬಹುದು.

ನಿವೃತ್ತಿ ದುಡಿವ ಜನರಿಗೆ ಸರ್ಕಾರ ನೀಡಬೇಕಾದ ರಕ್ಷಣೆ. ...ಂಡವಾಳಿಗರಿಗೆ ರಿಯಾಯಿತಿಗಳನ್ನು ಸದ್ದಿಲ್ಲದೆ ನೀಡುವ, ...ರ್ಕಾರ ನಿವೃತ್ತಿ ವೇತನ ಹೊರೆ ಎಂದರೆ 'ಜನ ಉಂಡರೆ ...ಡುಕು, ಮಳೆ ಹುಯ್ದರೆ ಕೆಡುಕು' ಎಂದು ಹೊಸ ಗಾದೆ ...ರೆದಂತೆ.

ದೇಶದ ಬೆನ್ನೆಲುಬಾದ ಕೃಷಿ ಕ್ಷೇತ್ರ ಬರೀ ಶೇ. 1.1ರಷ್ಟು ...ೆಳವಣಿಗೆ ಕಂಡಿದೆ ಎಂದರೆ ಈ ಕೃಷಿಯ ಮೇಲೆ ...ವಲಂಬಿಸಿರುವ ಶೇ.60.5ರಷ್ಟು ಜನ ಎಂತ ಬೆಳವಣಿಗೆ ...ಂಡಿರಬಹುದು. ಕೃಷಿಯ ಅಲ್ಪ ಬೆಳವಣಿಗೆಯ ಲಾಭವನ್ನು ...ಮೀನುದಾರರೇ ಕಬಳಿಸಿ ಬಿಟ್ಟಿರುತ್ತಾರೆ. ಹಾಗಿರುವಾಗ ...ಶದಲ್ಲಿ ಕೃಷಿಯ ಮೇಲೆ ಅವಲಂಬಿಸಿರುವ ಜನ ...ಮಾನ್ಯರು ಕಳೆದುಕೊಂಡಿರುವುದೇ ಹೆಚ್ಚು.

ಇಂತಹ ಪರಿಸ್ಥಿತಿಯನ್ನು ಆಳವಾಗಿ ಅಧ್ಯಯನ ಮಾಡಿ ...ರಿಹಾರ ಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸಬೇಕಾದ ...ರ್ಕಾರ ಬರೀ ಮೇಲ್ಮೈ ವಿಶ್ಲೇಷಣೆ ಮತ್ತು ತೇಪೆದಾರಿ ...ರಿಹಾರಗಳಿಗೆ ಜೋತುಬಿದ್ದಿದೆ.

ಉದಾರೀಕರಣದ ನೀತಿಗಳಿಂದಾಗಿ ಸಣ್ಣ ಕೈಗಾರಿಕೆಗಳು ...ಸವಳಿದು ಹೋಗಿ ಲಕ್ಷ ಲಕ್ಷ ಸಣ್ಣ ಕೈಗಾರಿಕೆಗಳು ...ೋಗಗ್ರಸ್ತವಾಗಿವೆ. ಅತಿ ಹೆಚ್ಚು ಜನರಿಗೆ ಉದ್ಯೋಗ ...ದಗಿಸುವ ಸಣ್ಣ ಕೈಗಾರಿಕೆಗಳು ರೋಗಗ್ರಸ್ತವಾಗುವಾಗ ಬಹಳ ...ನರನ್ನು ಬೀದಿಗೆ ತಳ್ಳುತ್ತವೆ ಎಂಬುದು ನಿಜ.

ಇಂತಹ ವಾಸ್ತವದ ಬಗೆಗೆ ಒಂದಿನಿತೂ ಗಮನ ಕೊಡದ ...ಆರ್ಥಿಕ ಸಮೀಕ್ಷೆ ಎಂತಹ ಜನಪರ ಕ್ರಮಗಳಿಗೆ ...ುಂಬರುವ ಸಾಲಿನ ಬಜೆಟ್ಟಿನಲ್ಲಿ ಅವಕಾಶಮಾಡಿ ...ಟ್ಟೀತು?

ಎಲ್ಲ ಸಮಸ್ಯೆಗಳಿಗೆ ವಿದೇಶೀ ನೇರ ಹೂಡಿಕೆಗಳಿಗೆ ...ವಕಾಶ ಮಾಡಿಕೊಡುವುದೇ ಪರಿಹಾರ ಎಂಬಂತೆ ...ಬಿಸಿರುವ ಸಮೀಕ್ಷೆ ಇಲ್ಲಿರುವ ಅಪಾಯಗಳ ಬಗ್ಗೆ ನಮ್ಮ ...ಶಕ್ಕೆ ಅನುಕೂಲವಾಗುವಂತೆ ಬಳಸಿಕೊಳ್ಳುವ ಬಗ್ಗೆ ...ಾರವೆತ್ತುವುದೂ ಇಲ್ಲ.

ಓಗಿದೆ ಈ ಸಾಲಿನ ಆರ್ಥಿಕ ಸಮೀಕ್ಷೆ.

ಬಿಹಾರ - ಜಾರ್ಖಂಡ್ ಮುರಿದ ತೀರ್ಪು

ಬಿಹಾರದಲ್ಲಿ ಬಿಜೆಪಿ- ಜೆಡಿಯು ಕೂಟಕ್ಕೆ 92 ಸ್ಥಾನಗಳಿವೆ. ಆರ್‌ಜೆಡಿ - ಶಾಸಕರು- ಎಡಪಕ್ಷಗಳಿಗೂ 92 ಸ್ಥಾನಗಳಿವೆ. ಈ ಭಗ್ನ ತೀರ್ಪಿನಿಂದಾಗಿ ಈ ಎರಡೂ ರಾಜ್ಯಗಳ ರಾಜ್ಯಪಾಲರು ಯಾವ ಕೂಟ ಒಂದು ಸ್ಥಿರ ಸರಕಾರವನ್ನು ನೀಡಬಲ್ಲದು ಎಂಬ ವಿವೇಚನೆ ಮಾಡಬೇಕಾಗಿದೆ.

ಪತ್ರಿಕೆ ಮುದ್ರಣಕ್ಕೆ ಹೋಗುತ್ತಿರುವಂತೆ ಕೇಂದ್ರ ಕಲ್ಲಿದ್ದಲು ಮಂತ್ರಿ ಶಿಬು ಸೋರೆನ್ ಝಾರ್ಖಂಡ್‌ನ ಮುಖ್ಯಮಂತ್ರಿಯಾಗಿ ಪ್ರತಿಜ್ಞೆ ಸ್ವೀಕರಿಸಿದ್ದಾರೆ. ಇದು ಝಾರ್ಖಂಡ್ ರಾಜ್ಯದಲ್ಲಿ ಮೊದಲ ಚುನಾಯಿತ ವಿಧಾನಸಭೆಯ ಆಧಾರದಲ್ಲಿ ರಚನೆಗೊಂಡಿರುವ ಮೊದಲ ಮಂತ್ರಿಮಂಡಳ. ಹಿಂದಿನ ಮಂತ್ರಿಮಂಡಳ ಹಿಂದಿನ ಬಿಹಾರದ ವಿಧಾನಸಭೆ ಆರಿಸಿದವರಿಂದ ಕೂಡಿದ್ದ ವಿಧಾನಸಭೆಯನ್ನು ಆಧರಿಸಿತ್ತು. ಆ ಶಾಸಕರು ಚುನಾಯಿತರಾದದ್ದು ಬಿಹಾರ ವಿಧಾನಸಭೆಗೆ, ಝಾರ್ಖಂಡ್ ವಿಧಾನಸಭೆಗಲ್ಲ. ಹೊಸ ಝಾರ್ಖಂಡ್ ರಾಜ್ಯ ರಚನೆ ಮಾಡಿದಾಗಲೇ 'ಹೊಸ ಪ್ರದೇಶ, ಹೊಸ ಆದೇಶ' ಎಂಬ ಬೇಡಿಕೆಯನ್ನಿಟ್ಟು ಚುನಾವಣೆ ನಡೆಸಬೇಕೆಂದು ಆಗ್ರಹಿಸಿತ್ತು ಎಂಬುದನ್ನಿಲ್ಲಿ ನೆನಪಿಸಿಕೊಳ್ಳಬಹುದು. ಆದರೆ ಆಗ ಆಳುವ ವರ್ಗಗಳ ಪಕ್ಷಗಳು ಅದಕ್ಕೆ ಒಪ್ಪಿರಲಿಲ್ಲ.



ಶಿಬು ಸೋರೆನ್

ಬಿಹಾರದಲ್ಲಿ ಸನ್ನಿವೇಶ ಇನ್ನೂ ಅಸ್ಪಷ್ಟವಾಗಿಯೇ ಇದೆ. ಆಳುವ ಪಕ್ಷವಾಗಿದ್ದ ಆರ್‌ಜೆಡಿ ಈಗಲೂ ಅತಿ ದೊಡ್ಡ ಪಕ್ಷವಾಗಿ ಹೊರಹೊಮ್ಮಿದೆ. ಆದರ ಸ್ಥಾನಬಲ ಗಮನಾರ್ಹವಾಗಿ ಇಳಿದಿದೆ. ಕೇವಲ 75 ಶಾಸಕರು ಚುನಾಯಿತರಾಗಿರುವುದರಿಂದ ಸರ್ಕಾರಕ್ಕೆ ಬೇಕಾದ 122 ಶಾಸಕರ ಬಹುಮತ ಬಹುದೂರ ಇದೆ. ಬಿಜೆಪಿ- ಜೆಡಿಯು ಕೂಟಕ್ಕೆ 92 ಸ್ಥಾನಗಳಿವೆ. ಆರ್‌ಜೆಡಿ - ಶಾಸಕರು- ಎಡಪಕ್ಷಗಳಿಗೂ 92 ಸ್ಥಾನಗಳಿವೆ. ಈ ಭಗ್ನ ತೀರ್ಪಿನಿಂದಾಗಿ ಈ ಎರಡೂ ರಾಜ್ಯಗಳ ರಾಜ್ಯಪಾಲರು ಯಾವ ಕೂಟ ಒಂದು ಸ್ಥಿರ ಸರಕಾರವನ್ನು ನೀಡಬಲ್ಲರು ಎಂಬ ತರ್ಕ ತಮ್ಮ ವಿವೇಚನೆ ಮಾಡಬೇಕಾಗಿದೆ. ಬಿಹಾರದಲ್ಲಿ 29 ಶಾಸಕರನ್ನು ಹೊಂದಿರುವ ರಾಮ್ ವಿಲಾಸ್ ಪಾಸ್ವಾನ್ ಕೈಯಲ್ಲಿ ಬೀಗದ ಕೈ ಇದೆ.



ರಾಬ್ರಿದೇವಿ

ಬಹುಮತವನ್ನು ಪರಿಶೀಲಿಸುವ ಅಥವಾ ಸ್ಥಾಪಿಸುವ ರಂಗ ರಾಜಭವನಗಳಲ್ಲ ಎಂದು ಸಿಪಿಐ(ಎಂ) ಪುನರುಚ್ಚರಿಸ ಬಯಸುತ್ತದೆ. ಒಂದು ಸರ್ಕಾರದ ಬಹುಮತ ಮತ್ತು ಕಾನೂನು ಬದ್ಧತೆಯನ್ನು ಸದನದಲ್ಲಿ ಮಾತ್ರವೇ ಸ್ಥಾಪಿಸಲು ಸಾಧ್ಯ.

ಈ ಎರಡೂ ರಾಜ್ಯಗಳಲ್ಲಿ ಭಗ್ನ ತೀರ್ಪುಗಳಿಗೆ ತೀರ ಕಾರಣ ಒಂದು ಚುನಾವಣಾ ಮೈತ್ರಿ ಬೆಸೆಯುವಲ್ಲಿ ಜಾತ್ಯಾತೀತ ಪಕ್ಷಗಳ ವಿಫಲತೆ. ಇಂತಹ ಒಂದು ಮೈತ್ರಿಯಿದ್ದಿದ್ದರೆ, ಜಾತ್ಯಾತೀತ ಮತಗಳ ವಿಭಜನೆಯನ್ನು ಕನಿಷ್ಟ ಮಟ್ಟಕ್ಕಾದರೂ ಇಳಿಸುವ ಒಪ್ಪಂದವಾದರೂ ಸಾಧ್ಯವಾಗಿದ್ದರೆ ಕೋಮುವಾದಿಗಳು ಬಲ ಏನೇನು ಹೆಚ್ಚಾಗದಂತೆ ನೋಡಿಕೊಳ್ಳ ಬಹುದಿತ್ತು.

ಈ ಎರಡು ರಾಜ್ಯಗಳ ಫಲಿತಾಂಶಗಳನ್ನು ವಿವರವಾಗಿ ಪರಿಶೀಲಿಸಿದರೆ ಜನತೆ 2004ರ ಲೋಕಸಭಾ ಚುನಾವಣೆಗಳಲ್ಲಿ ನೀಡಿದಂತೆಯೇ ಮತದಾನ ನೀಡಿದ್ದಾರೆ ಎಂಬುದು ಕಾಣುತ್ತದೆ. ಆಗ ಜಾತ್ಯಾತೀತ ಶಕ್ತಿಗಳಲ್ಲಿ ಒಂದು ವಿಶಾಲ ತಿಳುವಳಿಕೆ ಏರ್ಪಟ್ಟಿತ್ತು. ಆದ್ದರಿಂದಾಗಿಯೇ ಬಿಜೆಪಿ ನೇತೃತ್ವದ ಕೋಮುವಾದಿ ಕೂಟ ಸಂಪೂರ್ಣ ಪರಾಭವವನ್ನೇ ಅನುಭವಿಸಿತು. ಅದೇ ತಿಳುವಳಿಕೆ ಮುಂದುವರೆದಿದ್ದರೆ ಈ ಚುನಾವಣೆಗಳ ಫಲಿತಾಂಶ ಸಂಪೂರ್ಣ ಭಿನ್ನವಾಗಿರುತ್ತಿತ್ತು. ಎಡಪಕ್ಷಗಳು ಜಾತ್ಯಾತೀತ ಸರ್ಕಾರಗಳ ರಚನೆಗೆ ಹೊರಗಿನಿಂದ ಬೆಂಬಲವನ್ನು ಏಕಹಂತದಿಂದ ಸಾರಿದ್ದವು.



ಅರ್ಜುನ್ ಮುಂಡಾ

ಆದರೂ 2004ರಲ್ಲಿ ಸಾಧ್ಯವಾದ ವ್ಯವಸ್ಥೆ ಈ ಬಾರಿ ಏಕೆ ಮುರಿಯಿತು? ಮೊದಲನೆಯದಾಗಿ, ಝಾರ್ಖಂಡ್‌ನಲ್ಲಿ ಕಾಂಗ್ರೆಸ್ ಮತ್ತು ಜೆಎಂಎಂ ಏಕಪಕ್ಷೀಯವಾಗಿ ತಮ್ಮ ಸೀಟು ಹಂಚಿಕೆ ಒಪ್ಪಂದವನ್ನು ಪ್ರಕಟಿಸಿದರು. ಈ ರೀತಿ ಕೇಂದ್ರದಲ್ಲಿನ ಯುಪಿಎ ಮೈತ್ರಿಕೂಟ ಆರ್‌ಜೆಡಿ, ಎನ್‌ಸಿಪಿಯನ್ನು ಈ ವ್ಯವಸ್ಥೆಯಿಂದ ಹೊರಗಿಟ್ಟಿದ್ದು ಬಿಹಾರದಲ್ಲಿ ಛಿದ್ರೀಕರಣಕ್ಕೆ ಹಾದಿಮಾಡಿಕೊಟ್ಟಿತು.

ಎರಡನೆಯದಾಗಿ, ಲೋಕಸಭಾ ಚುನಾವಣೆಗಳ ನಂತರ ಆರ್‌ಜೆಡಿ ಮತ್ತು ಎಲ್‌ಜೆಪಿ ಪರಸ್ಪರ ದೂರವಾಗಿ ಸಾರ್ವಜನಿಕವಾಗಿ ಆರೋಪ - ಪ್ರತ್ಯಾರೋಪ ನಡೆಸಲಾರಂಭಿಸಿದಾಗ ಬಿಹಾರದಲ್ಲಿ 2004ರ ಲೋಕಸಭಾ ಚುನಾವಣೆಗಳಲ್ಲಿ ಕಂಡ ವ್ಯವಸ್ಥೆ ಈ ಬಾರಿ ಕಾಣಲಾರದು ಎಂಬುದು ಸ್ಪಷ್ಟವಾಗಿತ್ತು. ಕಾಂಗ್ರೆಸ್ ಮತ್ತು ಇತರ ಪಕ್ಷಗಳು ಪರಸ್ಪರ ಬಲಾಬಲಗಳ ವಾಸ್ತವ ಅಂದಾಜು ಮಾಡದೇ ಹೋದದರಿಂದ ಸೀಟು ಹಂಚಿಕೆಯ ಕೆಲಸ ಕಷ್ಟಕರವಾಯಿತು. ನಿರೀಕ್ಷೆಯಂತೆ, ಇದು ಕೋಮುವಾದಿ ಕೂಟಕ್ಕೆ ಪ್ರಯೋಜನ ಪಡೆಯಲು ಅವಕಾಶ ಮಾಡಿಕೊಟ್ಟಿತು. ಈ ಪ್ರಕ್ರಿಯೆಯಲ್ಲಿ ಆರ್‌ಜೆಡಿ ಯೊಂದಿಗೆ ಸ್ವಲ್ಪ ಮಟ್ಟಿನ ಸೀಟು ಹೊಂದಾಣಿಕೆ ಮಾಡಿಕೊಂಡಿದ್ದ ಎಡಪಕ್ಷಗಳಿಗೂ ನಷ್ಟವಾಯಿತು. ಸಿಪಿಐ(ಎಂ) ಬಿಹಾರದಲ್ಲಿ 13 ಸ್ಥಾನಗಳಲ್ಲಿ ಸ್ಪರ್ಧಿಸಿತ್ತು. ಇವುಗಳಲ್ಲಿ ಆರರಲ್ಲಿ ಮಾತ್ರ ಆರ್‌ಜೆಡಿಯೊಂದಿಗೆ ಹೊಂದಾಣಿಕೆಯಿತ್ತು. ಸಿಪಿಐ(ಎಂ)ಗೆ ತನ್ನ ಎರಡು ಸ್ಥಾನಗಳಲ್ಲಿ ಒಂದನ್ನು ಉಳಿಸಿಕೊಳ್ಳುವ ಸಾಧ್ಯವಾಗಿದೆ.

ಅಲ್ಲದೆ, ಭಾರತೀಯ ಜನತೆ ಕೋಮುವಾದಿ ಕೂಟವನ್ನು ಅಧಿಕಾರದಿಂದ ತೆಗೆದುಹಾಕಲು ಜಾತ್ಯತೀತ ಶಕ್ತಿಗಳ ಒಂದು ಕೂಟಕ್ಕೆ, ಮತನೀಡಿದ್ದರು ಎಂಬುದನ್ನು ಅರಿತುಕೊಳ್ಳಬೇಕು. ಯುಪಿಎ ಸರ್ಕಾರದ ಸ್ಥಾಪನೆಯೊಂದಿಗೆ ನೇರ ವಾಸ್ತವತೆ ಕಾಂಗ್ರೆಸ್ ಪರವಾಗಿ ಬದಲಾಗಿದೆ ಎಂದು ವಾದಿಸುವವರು ಫಲಿತಾಂಶಗಳನ್ನು ಗೌರವದಿಂದ ಕಾಣಬೇಕು. ಜನತೆ ಮತ್ತೊಮ್ಮೆ ತಾವು ಜಾತ್ಯಾತೀತ ಶಕ್ತಿಗಳ ಒಂದು ಹಂತವನ್ನು ಆಂತರಿಕವಾಗಿಯೇ ಹತೋಟಿಗಳಿಂದ ಒಂದು ಮೈತ್ರಿಕೂಟವನ್ನು ಸಮಗ್ರ ಸರಕಾರವನ್ನು ಬಯಸುತ್ತೇವೆ ಎಂದು ದೃಢಪಡಿಸಿದಿದಾರೆ. ಒಂದೇ ಪಕ್ಷ ಹೇಳಿದ ಹಾಗೆ ಇತರರು ಕೇಳಬೇಕು ಎಂಬ ಭ್ರಮೆಯನ್ನು ಬಿಡಬೇಕು. ಕಾಂಗ್ರೆಸ್ ಪಕ್ಷ ಈ ಹಿಂದೆ 195 ಸ್ಥಾನವನ್ನಿಟ್ಟುಕೊಂಡು ಸರ್ಕಾರ ನಡೆಸಲು ನಿರಾಕರಿಸಿತ್ತು. ಆದರೆ ಈಗ 145 ಸದಸ್ಯರನ್ನಷ್ಟೇ ಇಟ್ಟುಕೊಂಡು ಒಂದು ಸಮ್ಮಿಶ್ರ ಸರಕಾರದ ನೇತೃತ್ವ ವಹಿಸಿದೆ. ನೆಲದ ವಾಸ್ತವತೆಗಳಲ್ಲಿ ಏನಾದರೂ ಬದಲಾವಣೆಯಾಗಿದ್ದರೆ ಇದೇ ಜನತೆ ಕೋಮುಶಕ್ತಿಗಳನ್ನು ದೂರವಿಡಲು ಜಾತ್ಯಾತೀತ ಶಕ್ತಿಗಳ ಒಂದು ಮೈತ್ರಿಕೂಟವನ್ನು ಬಯಸುತ್ತಾರೆ.

ಈ ಫಲಿತಾಂಶಗಳು ಕೋಮುವಾದಿ ವೇದಿಕೆಗೆ ಅನುಮೋದನೆ ನೀಡಿಲ್ಲ ಮಾತ್ರವೇ ಅಲ್ಲ, ಜಾತ್ಯಾತೀತ ಶಕ್ತಿಗಳ ಒಂದು ಕೂಟ ಬಹುಮತಕ್ಕೆ ಬರುವಂತೆ ಮಾಡಿವೆ - ಆದ್ದರಿಂದ ಈ ಎರಡೂ ರಾಜ್ಯಗಳಲ್ಲಿ ಜಾತ್ಯತೀತ ಸರಕಾರಗಳ ಸ್ಥಾಪನೆಗೆ ಒಂದು ಚುನಾವಣೋತ್ತರ ವ್ಯವಸ್ಥೆಯನ್ನು ರೂಪಿಸಬೇಕು. ಈ ಎರಡೂ ರಾಜ್ಯಗಳಲ್ಲಿ ಇಂತಹ ಒಂದು ಸಾಧ್ಯತೆ ಏರ್ಪಡುವಂತಾಗಲು ಜಾತ್ಯಾತೀತ ಶಕ್ತಿಗಳು ಜತೆಗೆ ಕೆಲಸ ಮಾಡುತ್ತವೆ ಎಂದು ಸಿಪಿಐ(ಎಂ) ನಿರೀಕ್ಷಿಸುತ್ತದೆ.

ದುಡಿವ ಮಹಿಳೆಯರ ಚಳುವಳಿ: ಹಲವು ಯಶಸ್ಸುಗಳು-ಸವಾಲುಗಳು

ಮತ್ತೆ ಮತ್ತೆ ಬರುತಲಿದೆ ಮಾರ್ಚ್ 8 ಅಂತರ್‍ರಾಷ್ಟ್ರೀಯ ಮಹಿಳಾ ದಿನ. ಮಹಿಳಾ ಹೋರಾಟಗಳ, ದುಡಿವ ವರ್ಗದ ಚಳುವಳಿಗಳ ಹಲವು ಮಹತ್ತರ ಬದಲಾವಣೆ ತಂದಿವೆಯಾದರೂ ಇನ್ನೂ ಬವಣೆ ಕೊನೆಯಾಗಿಲ್ಲ. ದುಡಿವ ವರ್ಗದ ಮಹಿಳೆಯರ ಚಳುವಳಿಯತ್ತ ಒಂದು ನೋಟ

ಮೈಸೂರಿನಲ್ಲಿ ವಾಸು ಅಗರಬತ್ತಿಯಲ್ಲಿ 80 ಜನ ಮಹಿಳೆಯರು ಸಂಘಟಿತರಾಗಿ ಕಾರ್ಮಿಕ ಕಾನೂನುಗಳನ್ನು ಹೋರಾಟ ಮಾಡಿ ಪಡೆದರು. ಮಾಲೀಕ ಬೇರೆ ದಾರಿಯಿಲ್ಲದೆ ಕನಿಷ್ಠ ಕೂಲಿ ಜಾರಿ ಮಾಡಿದರು. ಕೂಡಲೇ ರಾಜ್ಯದ ಅಗರಬತ್ತಿ ಮಾಲೀಕರು ಒಂದಾಗಿ ಒಂದು ಕಾರ್ಖಾನೆಯಲ್ಲಿ ಯೂನಿಯನ್ ಬಲಿಷ್ಠವಾಗಲು ಬಿಟ್ಟರೆ ಬೇರೆ ಕಾರ್ಖಾನೆಗಳಲ್ಲಿ ಮತ್ತು ಹೆಚ್ಚು ಗೃಹಾಧಾರಿತವಾಗಿರುವ ಈ ಕೈಗಾರಿಕೆಯಲ್ಲಿ ಕಾರ್ಮಿಕ ಕಾನೂನುಗಳನ್ನು ಜಾರಿ ಮಾಡಬೇಕಾಗುತ್ತದೆಂದೂ ಪೂರ್ವ ಯೋಜನೆ ರೂಪಿಸಿ 'ವಾಸು ಅಗರಬತ್ತಿ ಕಾರ್ಖಾನೆಯನ್ನು ನಷ್ಟವಾಗಿದೆಯೆಂದು ಮುಚ್ಚಿದರು. ಮಹಿಳಾ ಕಾರ್ಮಿಕರು ಕಾರ್ಖಾನೆ ತೆರೆದು, ಕೆಲಸ ಕೊಡಬೇಕೆಂದೂ ಒತ್ತಾಯಿಸಿ ತಮ್ಮನ್ನು ಮಹಿಳೆಯರೆಂದೂ ಲೆಕ್ಕಿಸದೆ 3 ತಿಂಗಳು ರಾತ್ರಿ-ಹಗಲು ಮೈಸೂರು ನಗರದ ಮಧ್ಯದಲ್ಲಿರುವ ವಾಸು ಅಗರಬತ್ತಿ ಕಾರ್ಖಾನೆ ಮುಂದೆ ರಸ್ತೆಯ ಬದಿಯಲ್ಲಿ ಗುಡಿಸಲನ್ನು ನಿರ್ಮಿಸಿ ಅದನ್ನೇ ಮನೆಯನ್ನಾಗಿಸಿಕೊಂಡು ಹೋರಾಡಿದರು. ಮಾಲೀಕರ ಬಿಗಿ ನಿಲುವಿನಿಂದಾಗಿ ಕಾರ್ಖಾನೆ ತೆರೆಯಲಿಲ್ಲ. ಮಹಿಳಾ ಕಾರ್ಮಿಕರಿಗೆ ಸ್ವಲ್ಪ ಪರಿಹಾರ ಕೊಟ್ಟು ಮನೆಗೆ ಕಳುಹಿಸಿದರು.

ಬೆಂಗಳೂರಿನಲ್ಲಿ ಕಾರ್ಖಾನೆ ಮಟ್ಟದ ಹೋರಾಟಗಳು ಪ್ರತಿನಿತ್ಯ ನಡೆಯುತ್ತಲೇ ಇರುತ್ತವೆ. ಇದರಲ್ಲಿ ದಾಖಲಿಸಬಹುದಾದ ಮೆಟಲ್ ಕ್ಲೋಸರ್ ಕಾರ್ಖಾನೆಯಲ್ಲಿ ಕನಿಷ್ಠ ಕೂಲಿಯಿಲ್ಲದೆ ಹಲವಾರು ವರ್ಷಗಳಿಂದ ದುಡಿಯುತ್ತಿದ್ದ ಕಾರ್ಮಿಕರು ಇಂದು ಒಂದಾಗಿ ಸಂಘಟಿತರಾದ ಕೂಢಲೇ ಮಾಲೀಕರು ಗುಂಡಾಗಳನ್ನು ಉಪಯೋಗಿಸಿ ಪುರುಷ ಕಾರ್ಮಿಕರಿಗಷ್ಟೇ ಅಲ್ಲದೆ ಮಹಿಳಾ ಕಾರ್ಮಿಕರ ಮೇಲೂ ಧಾಳಿ ನಡೆಸುತ್ತಿರುವುದು, ಆ ಕಾರ್ಖಾನೆಯಲ್ಲಿ ದುಡಿಯುವ ಕಾರ್ಮಿಕರು ಕೆಲಸ ಮಾಡುವ ಯಂತ್ರಗಳು ಸುರಕ್ಷಿತವಲ್ಲದ್ದರಿಂದ ತಮ್ಮ ಕೈಬೆರಳುಗಳನ್ನು ಬಲಿಕೊಟ್ಟು ಕೆಲಸ ನಿರ್ವಹಿಸಬೇಕಾಗಿದೆ. ಮಹಿಳಾ ಕಾರ್ಮಿಕರ ಮೇಲೆ ಹಲ್ಲೆ ನಡೆದರೂ, ಪೊಲೀಸರು ಎಫ್‌ಐಆರ್ ನೊಂದಣಿ ಮಾಡಬಾರದೆಂಬ ರಾಜಕಾರಣಿಗಳ ಒತ್ತಡ ಆದರೂ ಎದೆಗುಂದದ ಆ ಮಹಿಳಾ ಕಾರ್ಮಿಕರು ಹೋರಾಟ ನಿರತರಾಗಿದ್ದಾರೆ.

ಪರ್‌ಫೆಕ್ಟ್ ಆಪರೆಲ್ಸ್ ಗಾರ್ಮೆಂಟ್ಸ್ ಕಾರ್ಖಾನೆಯಲ್ಲಿ ಬಲಿಷ್ಠವಾಗಿರುವ ಸಂಘವನ್ನು ಮುರಿಯಬೇಕೆಂಬ ಒಂದೇ ಕಾರಣದಿಂದ ಆಡಳಿತವರ್ಗ ದಿನನಿತ್ಯ ಮಹಿಳಾ ಕಾರ್ಮಿಕರಿಗೆ ಕಿರುಕುಳ ನೀಡುವುದು. ಬಾನಮ್ಮ ಎಂಬ ಮಹಿಳೆಗೆ ಅವ್ಯವಸ್ಥೆಯಿಂದ ಕೂಡಿರುವ ಇಎಸ್‌ಐನಲ್ಲಿ 4-5 ಶಸ್ತ್ರಚಿಕಿತ್ಸೆಗಳನ್ನು ಮಾಡಿ ಆಕೆ "ನಿಂತು ಮಾಡುವ ಕೆಲಸ ಮತ್ತು ಭಾರವನ್ನು ಹೊರುವ ಕೆಲಸ ಮಾಡಲು ಆಗುವುದಿಲ್ಲ". ಆ ಕಾರ್ಖಾನೆಯ ಮೇಲ್ವಿಚಾರಕರು ಬೇಕೆಂದೇ ಆಕೆಗೆ ಆಗದ ಕೆಲಸ ಕೊಟ್ಟು ಮಾಡು ಇಲ್ಲವೆ ಕೆಲಸ ಬಿಟ್ಟು ಹೋಗಿ ಎಂಬ ದಿನನಿತ್ಯದ ಕಿರುಕುಳ.

ಸಹೋದ್ಯೋಗಿಗಳು ಪರಸ್ಪರ ಮಾತನಾಡಲು ಬಿಡದ ಆಡಳಿತವರ್ಗ, ಏಕವಚನದಲ್ಲಿ ಮಾತನಾಡುವುದು, ಶೌಚಾಲಯಕ್ಕೆ ಹೋಗುವ ಸಮಯವನ್ನು ದಾಖಲಿಸುವುದು. ಇದರ ವಿರುದ್ಧ ದಿನನಿತ್ಯದ ಹೋರಾಟ ಈ ಮಹಿಳೆಯರು ನಡೆಸುತ್ತಲೇ ಇದ್ದಾರೆ.

ಇಡೀ ದೇಶದಲ್ಲಿ ಪ್ರಖ್ಯಾತಿ ಪಡೆದ ಬಿಪಿಎಲ್, ಟಿವಿ, ವಾಷಿಂಗ್ ಮೆಷಿನ್‌ಗಳನ್ನು ತಯಾರಿಸುವ ಒಂದು ಕಂಪನಿ. ಈ ಕಂಪನಿಯಲ್ಲಿ ಸಾವಿರಾರು ಕಾರ್ಮಿಕರು ದುಡಿಯುತ್ತಾರೆ. ಇವರಲ್ಲಿ ಒಂದು ಸಾವಿರಕ್ಕಿಂತ ಹೆಚ್ಚು ಮಹಿಳಾ ಕಾರ್ಮಿಕರಿದ್ದಾರೆ. ಕಾರ್ಮಿಕ ಕಾನೂನುಗಳಿಗಾಗಿ ಸಂಘಟಿತರಾಗಿದ್ದಕ್ಕೆ ರಾಜ್ಯ ಸರ್ಕಾರ ಮತ್ತು ಆಡಳಿತವರ್ಗ ಒಂದಾಗಿ ಅಲ್ಲಿಯ ಸಂಘಟನೆಯನ್ನು ಮುರಿಯಲು ಮಾಡದ ತಂತ್ರಗಳಿಲ್ಲ. ಕಾರ್ಖಾನೆ ಮುಚ್ಚಿದಾಗ ತೆರೆಯಬೇಕೆಂದೂ ನಡೆದ ಹೋರಾಟದಲ್ಲಿ ಪೊಲೀಸ್ ದೌರ್ಜನ್ಯದಿಂದ, ಮಾಲಿಕರ ಗೂಂಡಾದಾಳಿಯಿಂದ ಕಾರ್ಮಿಕರು ಹೆಚ್ಚಾಗಿ ಮಹಿಳಾ ಕಾರ್ಮಿಕರು ತೀವ್ರವಾಗಿ ಗಾಯಗೊಂಡರು, ಹೋರಾಟ ಮುಂದುವರಿಸಿ 300 ಕ್ಕಿಂತಲೂ ಹೆಚ್ಚು ಮಹಿಳಾ ಕಾರ್ಮಿಕರು ಅದರಲ್ಲೂ 25 ವರ್ಷದೊಳಗಿನ ಯುವತಿಯರೂ ಸುಮಾರು 8 ದಿನಗಳ ಕಾಲ ಜೈಲಿಗೆ ಹೋದರು. ಇವರು ಮಧ್ಯಮ ವರ್ಗದ ಕುಟುಂಬಗಳಿಂದ ಬಂದವರು. ಕೊನೆಗೆ ರಾಜ್ಯಸರ್ಕಾರ ಜಾಮೀನು ಇಲ್ಲದೆ ಬಿಡುಗಡೆ ಮಾಡಿತು, ಧರಣಿ, ರ್‍ಯಾಲಿಗಳು, ಬಿಪಿಎಲ್ ಶೋರೂಂ ಮುಂದೆ, ವಿಧಾನಸೌದ, ಕಾರ್ಮಿಕ ಇಲಾಖೆ ಬಳಿ ನಡೆದ ಪ್ರತಿಭಟನೆಗಳು ಲೆಕ್ಕವಿಲ್ಲ.

ಆದರೆ ಆಡಳಿತವರ್ಗ ರೂಪಿಸಿದ ಸಂಚಿನಲ್ಲಿ ಆ ಯೂನಿಯನ್ ನಾಯಕರಾದ ಕಾಂ.ಆರ್.ಶ್ರೀನಿವಾಸ್, ಟಿ.ಕೆ.ಎಸ್.ಕುಟ್ಟಿ, ಧರಣೇಶ್, ಇನ್ನಿತರ 4 ಜನ ಸಂಗಾತಿಗಳನ್ನು 14 ವರ್ಷ ಜೈಲಿನಲ್ಲಿರುವ ಹಾಗೆ ಮೊಕದ್ದಮೆಗಳನ್ನು ಹಾಕಿ ಸಾಕ್ಷಿಗಳನ್ನು ಸೃಷ್ಟಿಸಿದೆ. 364 ಕ್ರಿಮಿನಲ್ ಕೇಸುಗಳು, 800 ಜನರು ಸಸ್ಪೆಂಡ್ ಮತ್ತು ಡಿಸ್‌ಮಿಸ್ ಆಗಿದ್ದಾರೆ. ಆದರೂ ಅಲ್ಲಿಯ ಕಾರ್ಮಿಕರು ಹೆದರದೇ ದಿನನಿತ್ಯವೂ ದಬ್ಬಾಳಿಕೆಯನ್ನು ಎದುರಿಸಿ ಹೋರಾಡುತ್ತಿದ್ದಾರೆ. ಅಲ್ಲಿಯ ಮಹಿಳಾ ಕಾರ್ಮಿಕರು ಕಡ್ಡಾಯವಾಗಿ ಹೆಚ್ಚುವರಿ ಕೆಲಸ (ಓವರ್ ಟೈಮ್), 2ನೇ ಪಾಳಿಯಲ್ಲಿ ದುಡಿಯಲೇಬೇಕು. ಅದು ರಾತ್ರಿ 10 ಅಥವಾ 11 ಗಂಟೆಯ ತನಕ ಇಲ್ಲದಿದ್ದರೆ ಕೆಲಸ ಇಲ್ಲ ಎಂಬ ಬೆದರಿಕೆ. ಆದರೆಅಲ್ಲಿಯ ಮಹಿಳಾ ಕಾರ್ಮಿಕರು ಹೆದರದೇ ಹೋರಾಡುತ್ತಲೇ ಇದ್ದಾರೆ. ಈ ಹೋರಾಟ ಕರ್ನಾಟಕ ರಾಜ್ಯದ ಕಾರ್ಮಿಕ ಚಳುವಳಿಯಲ್ಲಿ ದಾಖಲಾರ್ಹವಾದ ಹೋರಾಟ ಮತ್ತು ಕಾರ್ಮಿಕರನ್ನು ಸಂಘಟಿತರಾಗದಂತೆ ಮಾಲೀಕವರ್ಗ ಮತ್ತು ಸರ್ಕಾರ ಮಾಡಿದ ತಂತ್ರಗಳನ್ನು ವಿಫಲಗೊಳಿಸಿದ ಅಲ್ಲಿಯ ಕಾರ್ಮಿಕರ ಸಂಘಟಿತ ಮನೋಭಾವದ ಹೋರಾಟ ಚರಿತ್ರಾರ್ಹವಾದದ್ದು ಮತ್ತು ಇಂದಿಗೂ ದಿನನಿತ್ಯ ಮಾಲೀಕರ ಕುತಂತ್ರಗಳನ್ನೇ ಎದುರಿಸುತ್ತಲೇ ಇದ್ದಾರೆ.

ಜಾಗೃತಿಯ ಮುಂಬೆಳಕು

ಅಂತರ್‍ರಾಷ್ಟ್ರೀಯ ಮಹಿಳಾ ದಿನಾಚರಣೆಯ ಐತಿಹಾಸಿಕ ಹಿನ್ನೆಲೆ

ಮಾರ್ಚ್ -8 ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಮತ್ತೀಗ ಬಂದಿದೆ. 'ಜಗತ್ತಿನ ಶ್ರಮಿಕರೇ ಒಂದಾಗಿ' ಎಂದಂತೆ 'ಜಗತ್ತಿನ ಮಹಿಳೆಯರೇ ಒಂದಾಗಿ' ಎಂಬುದು ಈ ದಿನದ ಘೋಷಣೆ. ಶ್ರಮಿಕವರ್ಗಕ್ಕೆ ಮೇ ದಿನದಂತೆ, ಶ್ರಮಿಕ, ಶೋಷಿತ ಮಹಿಳೆಯರಿಗೆ ಮಾರ್ಚ್-8 ಇದೊಂದು ಸಂಭ್ರಮದ ದಿನ. ಹಾಗೆಯೇ ಸಂಘರ್ಷಕ್ಕಾಗಿ ಸಂಕಲ್ಪಿಸುವ ದಿನವೂ ಹೌದು. ಮಾನವ ಸಮಾಜದ ಇತಿಹಾಸದುದ್ದಕ್ಕೂ ಮಹಿಳೆಯರ ಅಗಾಧ ಸಾಧನೆ-ಮುನ್ನಡೆಗಳನ್ನು ಗುರುತಿಸಿ, ಅಚ್ಚಳಿಯದ ನೆನಪುಗಳನ್ನು ಮೆಲುಕುಹಾಕುವ ದಿನ.



ಶತಶತಮಾನಗಳುದ್ದಕ್ಕೂ ವಿಮೋಚನಾ ಹೋರಾಟದ ತ್ಯಾಗ ಬಲಿದಾನಗಳು ನೆನಪಿಸಿಕೊಂಡು, ಪ್ರಸಕ್ತ ಸವಾಲುಗಳೆದುರು ಸಮರಹೂಡುವ ಸಂಕಲ್ಪದ ದಿನ.

ಅಂತೆಯೇ ಜಗದ ತುಂಬಾ ನ್ಯಾಯಕ್ಕಾಗಿ ನಿಂತವರ ನಡುವಿನ ಗೆಳೆತನದ ಹೆಗಲ ಬಳ್ಳಿ ಬೆಸೆಯುವ -ಬೆಸೆದು ಬೆಳೆವ ದಿನ.

ಮಾರ್ಚ್ - 8 ಅಂತರಾಷ್ಟ್ರೀಯ ಮಹಿಳಾ ದಿನ ಎಂದು ಘೋಷಿತವಾದದ್ದೇ ರೋಮಾಂಚನಕಾರಿ ಇತಿಹಾಸ. 19ನೆಯ ಶತಮಾನದ ಆರಂಭ ಯುರೋಪ್ ಮತ್ತು ಸುತ್ತಲಿನಲ್ಲಿ ಅತ್ಯಂತ ಸಾಮಾಜಿಕ- ಆರ್ಥಿಕ ಬಿಕ್ಕಟ್ಟುಗಳನ್ನು, ಅನ್ಯಾಯ, ಅಸಮಾನತೆ, ಸುಲಿಗೆ ಶೋಷಣೆಗಳೆದುರು ಜನತೆಯ ಬಂಡಾಯಗಳ ಪ್ರಚಂಡ ಬಿರುಗಾಳಿಯೇಳುತ್ತಿದ್ದ ಕಾಲಘಟ್ಟ. ಕೈಗಾರಿಕಾ ಕ್ರಾಂತಿಯ ಫಲವಾಗಿ ವಿಸ್ತೃತಗೊಂಡ ದುಡಿವ ಅವಕಾಶಗಳು ಉತ್ಪಾದನಾ ವ್ಯವಸ್ಥೆ ವಿಸ್ತಾರ ಮಹಿಳೆಯರನ್ನು ಉದ್ದಿಮೆಗಳಲ್ಲಿ ದುಡಿಯುವಂತಾಗಿಸಿತು. ಅದರಲ್ಲಿ ಯಾರಿಗೂ ಕಡಿಮೆಯಿಲ್ಲದಂತೆ ದುಡಿದು ಸಂಪತ್ತು ಸೃಷ್ಟಿಸಿ ಹೆಗಲಕೊಟ್ಟು ಪುರುಷರಿಗೆ ಸಮನಾಗಿ ನಿಂತರು. ಆದರೆ ಮಾಲೀಕರು- ಪ್ರಭುತ್ವ ಇದನ್ನು ಮಾನ್ಯ ಮಾಡಲಿಲ್ಲ. ಪುರುಷರು- ಮಹಿಳೆಯರು ಬೇರೆಯೆಂದು ಲಿಂಗ ತಾರತಮ್ಯ ಮಾಡಿದರು. ಕೊಡುವ ಕೂಲಿಯಲ್ಲಿ ಪುರುಷರಿಗೆ ಹೆಚ್ಚು, ಮಹಿಳೆಯರು ಕಡಿಮೆಯಲ್ಲವೆ ಎಂದು ಅವರಿಗೆ ಕಡಿಮೆ ನೀಡಿಕೆ. ಕೆಲಸದ ಹಂಚಿಕೆಯಲ್ಲಿ ತಾರತಮ್ಯ. ರಾತ್ರಿ ವೇಳೆಯಲ್ಲೂ ದುಡಿಯಲೇಬೇಕಾದ ಒತ್ತಡ. ಶೌಚಾಲಯ-ವಿಶ್ರಾಂತಿ ಸ್ಥಳ, ನೀಡಿಕೆಯಲ್ಲಿಯೂ ವಿಪರೀತ ಸಮಸ್ಯೆ. ಹೀಗೆ ಕೆಲಸದ ಸ್ಥಳದಲ್ಲಿ ನೂರೆಂಟು ದಬ್ಬಾಳಿಕೆ. ಇದು ದುಡಿವ ರಂಗದಲ್ಲಾದರೆ ಸಾಮಾಜಿಕವಾಗಿ, ಆರ್ಥಿಕವಾಗಿ ಮಹಿಳೆಗೆ ಎರಡನೇ ದರ್ಜೆ ನಾಗರಿಕರು! ಅಮೇರಿಕಾ, ಯುರೋಪ್‌ನಾದ್ಯಂತ ಚುನಾವಣೆಯಲ್ಲಿ ಓಟು ಹಾಕುವ ಹಕ್ಕು ಇಲ್ಲವೇ ಇಲ್ಲ.

ಕೈಗಾರಿಕೆಗಳ ಬೆಳವಣಿಗೆಯೊಂದಿಗೆ ಹುಟ್ಟಿದ್ದು ಆಧುನಿಕ ಕಾರ್ಮಿಕವರ್ಗ. ವರ್ಗ ಅಸಮಾನತೆ ವೈರುದ್ಯದ ವ್ಯವಸ್ಥೆಯಲ್ಲಿ ಜಾಗೃತ ಶ್ರಮಿಕವರ್ಗ ತನ್ನ ಹಕ್ಕು, ಬದುಕಿನ ಉಳಿವಿಗಾಗಿ ಸಂಘರ್ಷ ಹೋರಾಟ ನಡೆಸುತ್ತಿತ್ತು. ಕಾರ್ಮಿಕ ಸಂಘಗಳು ಉದಯವಾಗಿ, ಹಲವಾರು ಧೀಮಂತ ಹೋರಾಟಗಳನ್ನು ನಡೆಸಿದ್ದವು. ಫ್ರೆಂಚ್ ಕ್ರಾಂತಿಯ ಪ್ರಭಾವ, ಕಾರ್ಮಿಕವರ್ಗಕ್ಕೆ ಮಾರ್ಕ್ಸ್, ಏಂಗೆಲ್ಸರ ಮಾರ್ಗದರ್ಶನ, ಪ್ಯಾರಿಸ್ ಕಮ್ಯೂನ್‌ನ ಉಜ್ವಲ ಹೋರಾಟದ ಉತ್ಸಾಹ, ಅದರ ಅಪಾರ ಅನುಭವ ದುಡಿವವರ್ಗಕ್ಕೆ ವಿಶೇಷವಾಗಿ ಮಹಿಳಾ ಕಾರ್ಮಿಕ ವರ್ಗಕ್ಕೆ ದೊರೆತು ಸ್ವಾತಂತ್ರ್ಯ, ಸಮಾನತೆಯ ಬಯಕೆ ಗರಿಗೆದರುವಂತಾಗಿತ್ತು. ಪ್ಯಾರಿಸ್ ಕಮ್ಯೂನ್‌ನಂತಹ ಮಹಾನ್ ಸಮರದಲ್ಲಿ ಮಹಿಳೆಯರು ತಮ್ಮ ಸಾಮರ್ಥ್ಯ ಏನೆಂದು ತೋರಿಸಿದ್ದರು.

ಕಮ್ಯೂನ್‌ನ ಹೋರಾಟ ದಮನದ ಭಾಗವಾಗಿದ್ದ 'ಯುದ್ಧ ಆಯೋಗ' ದ ಮುಂದೆಯೇ 1051 ಮಹಿಳಾ ಖೈದಿಗಳನ್ನು ವಿಚಾರಣೆಗೆ ತರಲಾಗಿತ್ತೆಂದರೆ ಈ ಸಂಖ್ಯೆ ಮತ್ತು ಹೋರಾಟದ ಶಕ್ತಿ ಅರ್ಥವಾದೀತು. ಇಂತಹ ಹಿನ್ನೆಲೆಯಲ್ಲಿಯೇ 1882 ರಲ್ಲಿ ಜರ್ಮನಿಯ ಕಮ್ಯುನಿಸ್ಟ್ ನಾಯಕಿ ಕ್ಲಾರಾ ಐಸ್ನರ್ ಜೆಟ್ಕಿನ್ ಪ್ಯಾರೀಸ್‌ಗೆ ಭೇಟಿ ನೀಡಿದ್ದು. ತನ್ನ ಸೈದ್ಧಾಂತಿಕ ಹರವನ್ನು ಅಲ್ಲಿ ಆಳಗೊಳಿಸಿಕೊಂಡಿದ್ದು.

ಹಾಗೆಯೇ 1889 ರಲ್ಲಿ ಪ್ಯಾರೀಸ್‌ನಲ್ಲಿ ಸ್ಥಾಪಿತವಾದ ಎರಡನೆ ಅಂತರಾಷ್ಟ್ರೀಯ ದಲ್ಲಿ ಪುರುಷ ಮತ್ತು ಮಹಿಳೆಯರಿಗೂ ಸಮಾನ ಹಕ್ಕು ಪ್ರಶ್ನೆಯನ್ನು ಎತ್ತಲಾಯಿತು. ಇದು ಅಂತರಾಷ್ಟ್ರೀಯ ವೇದಿಕೆಯಲ್ಲಿ ಪ್ರಥಮ ಧ್ವನಿ. ಅಂತೆಯೇ ಮಹಿಳೆಯರಿಗೆ ಮತದಾನದ ಹಕ್ಕನ್ನು ಒಳಗೊಂಡಂತೆ ಈ ಪ್ರಶ್ನೆಯ ಮೇಲಿನ ಪ್ರಚಾರಾಂದೋಲನದ ನೇತೃತ್ವವಹಿಸಿದರು ಕ್ಲಾರಾ. 1902, 1910 ರಲ್ಲಿ..... ಹೀಗೆ ಆರು ಸಮಾಜವಾದಿ ಮಹಾಧಿವೇಶನಗಳಲ್ಲಿ ಈ ನಿರ್ಣಯ ಅಂಗೀಕೃತವಾಯಿತು.

1908 ರ ಫೆಬ್ರವರಿ ಕೊನೆ ರವಿವಾರ, ಅಮೇರಿಕಾ ಸಂಯುಕ್ತ ಸಂಸ್ಥಾನದಲ್ಲಿ ಸಮಾಜವಾದಿ ಮಹಿಳೆಯರು ಮೊದಲ ಮಹಿಳಾ ದಿನವನ್ನು ಆಚರಿಸಲು ಮುಂದಾದರು. ಅಂದು ಮಹಿಳೆಯರ ಮತದಾನದ ಹಕ್ಕು, ರಾಜಕೀಯ -ಆರ್ಥಿಕ ಹಕ್ಕುಗಳಿಗಾಗಿ ಪ್ರತಿಭಟನಾ ಪ್ರದರ್ಶನ ನಡೆಯಿತು. ಮ್ಯಾನ್ ಹಟನ್ ನಗರದಲ್ಲಿ 2000ಕ್ಕೂ ಅಧಿಕ ಮಹಿಳೆಯರು ಭಾಗವಹಿಸಿದ್ದರು.

1908 ಮಾರ್ಚ್ 8ರಂದು ನ್ಯೂಯಾರ್ಕಿನಲ್ಲಿ ಹೊಲಿಗೆ (ಗಾರ್ಮೆಂಟ್ಸ್) ಕಾರ್ಖಾನೆಗಳ ಮಹಿಳಾ ಕಾರ್ಮಿಕರು 10 ಗಂಟೆ ಕೆಲಸ, ಲಿಂಗತಾರತಮ್ಯ ವಿರುದ್ಧ ಮತ್ತಿತರೆ ಯೂನಿಯನ್‌ನ ಬೇಡಿಕೆ, ದೇಶದ ಚುನಾವಣೆಯಲ್ಲಿ ಮತದಾನದ ಹಕ್ಕಿಗಾಗಿ ಪ್ರತಿಭಟನಾ ಪ್ರದರ್ಶನ ನಡೆಸಿದರು. ಆಳುವವರಿಂದ ತೀವ್ರ ದಮನ, ದಬ್ಬಾಳಿಕೆ ಎದುರಿಸಬೇಕಾಯಿತು.

ಈ ಮಹತ್ವದ ದಿನದ ನೆನಪಿನಲ್ಲಿ 1910 ರಲ್ಲಿ ಸೇರಿದ್ದ ಅಂತರಾಷ್ಟ್ರೀಯ ಸಮಾಜವಾದಿ ಮಹಿಳಾ ಮಹಾಧಿವೇಶನವು (ಕೋಪನ್ ಹೆಗನ್) ಆ ದಿನವನ್ನೇ ಅಂತರಾಷ್ಟ್ರೀಯ ಮಹಿಳಾ ದಿನವೆಂದು ನಿರ್ಧರಿಸಿತು. 17 ದೇಶಗಳ 100 ಮಹಿಳಾ ಪ್ರತಿನಿಧಿಗಳು ಇದನ್ನು ಒಕ್ಕೊರಲಿನಿಂದ ಅಂಗೀಕರಿಸಿದರು. ಈ ಸಮ್ಮೇಳನ ಪುರುಷರಿಗಿರುವಂತ ವಯಸ್ಕ ಮತದಾನದ ಹಕ್ಕು ಇರಬೇಕೆಂದೂ ಹಾಗೂ ಮತದಾನಕ್ಕೆ ಆಸ್ತಿಯ ಶರತ್ತು ಇರಕೂಡದೆಂದು, ಹೆರಿಗೆ ಸೌಲಭ್ಯಗಳು, ರಾತ್ರಿಪಾಳಿ ಕೆಲಸ ರದ್ದತಿ, ಮುಂತಾದ ಬೇಡಿಕೆಗಾಗಿಯೇ ಆಗ್ರಹಿಸಲಾಯಿತು. ಇದು ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಹಿನ್ನೆಲೆ.

ಎಸ್.ವೈ.ಜಿ

ನೆಲಮಂಗಲದ ಬಳಿಯಿರುವ ಕ್ಲೆಕ್‌ಮೋರ್ ಗಾರ್ಮೆಂಟ್ಸ್ ಕಾರ್ಖಾನೆಯಲ್ಲಿ ಒಂದೇ ರೀತಿಯ ಕೆಲಸಕ್ಕೆ ಅಸಮಾನ ವೇತನವಿದೆ. ಭಾರತ ದೇಶದ ಸಂವಿಧಾನದ ಪ್ರಕಾರ ಲಿಂಗಬೇಧದ ಆಧಾರದಲ್ಲಿ ಅಸಮಾನ ವೇತನ ಇರಬಾರದೆಂದಿದ್ದರೂ ಈಗಲೂ ಈ ಕಾರ್ಖಾನೆಯಲ್ಲಿ ಅಸಮಾನ ವೇತನವಿದೆ. ಪುರುಷ ಕಾರ್ಮಿಕರಿಗೆ 5000 ರೂ. ಮಹಿಳಾ ಕಾರ್ಮಿಕರಿಗೆ 1900 ರೂ. ಮಾತ್ರ.

ಕಲ್ಯಾಣ ಕಾರ್ಯಕ್ರಮಗಳಲ್ಲಿ ಅತ್ಯಂತ ಮುಖ್ಯವಾದ ಕೇಂದ್ರ ಸರ್ಕಾರದ ಯೋಜನೆಯಾದ ಸಮಗ್ರಶಿಶು ಅಭಿವೃದ್ಧಿ ಯೋಜನೆ. ಇದರಲ್ಲಿ 80,000 ಮಹಿಳೆಯರು ರಾಜ್ಯದಾದ್ಯಂತ ಗೌರವಧನದ ಆಧಾರದಲ್ಲಿ ದುಡಿಯುತ್ತಿದ್ದಾರೆ. ಇವರು ತಮ್ಮ ಗೌರವಧನವನ್ನು ಸರಿಯಾಗಿ ಪಡೆಯಲು ಹೋರಾಟ ನಡೆಸಬೇಕಾದ ದುಸ್ಥಿತಿ. ಹಲವಾರು ಹೋರಾಟಗಳ ನಂತರದಲ್ಲಿ ಕೇಂದ್ರ ಸರ್ಕಾರ 500 ರೂಗಳನ್ನು 2000 ನೇ ಇಸವಿಯಲ್ಲಿ ಹೆಚ್ಚಳ ಮಾಡಿತು. ಹೆಚ್ಚಳವಾದ ಗೌರವಧನವನ್ನು ಪಡೆಯಲು ನೌಕರರು ನಿರಂತರವಾಗಿ ತಾಲ್ಲೂಕು ಮಟ್ಟದಲ್ಲಿ ಕೇಂದ್ರ ಸಚಿವರ ಭೂತದಹನ, ರಾಜಭವನದ ಮುಂದೆ ಧರಣಿ, 2003 ರ ಮಾರ್ಚ್ ಅಂಗನವಾಡಿ ನೌಕರರ ಅನಿರ್ದಿಷ್ಟ ಧರಣಿ. ಈ ಧರಣಿಯಲ್ಲಿ ಸಾವಿರಾರು ಮಹಿಳೆಯರು ರಾತ್ರಿ-ಹಗಲು ಪಾಲ್ಗೊಂಡು ಕೇಂದ್ರ ಸರ್ಕಾರದ ನೀತಿಯನ್ನು ಖಂಡಿಸಿ ತಮಗೆ ಬರಬೇಕಾದ ಗೌರವಧನವನ್ನು ಪಡೆದರು.

ಕೊಪ್ಪಳ ತಾಲ್ಲೂಕಿನ ಅಂಗನವಾಡಿ ಕೇಂದ್ರದಲ್ಲಿ ಕೆಲಸ ಮಾಡುತ್ತಿದ್ದ ಕಾರ್ಯಕರ್ತೆಯ ಕೊಲೆ, ರಾಯ್‌ಭಾಗ್ ತಾಲ್ಲೂಕಿನ ಸವಸುದ್ದಿ ಕಾರ್ಯಕರ್ತೆಯ ಮೇಲೆ ಹಾಡು ಹಗಲೇ ನಡೆದ ಅತ್ಯಾಚಾರ, ಹೊಸಪೇಟೆಯ ಕೇಂದ್ರದಲ್ಲಿ ಕೆಲಸ ಮಾಡುತ್ತಿದ್ದ ಕಾರ್ಯಕರ್ತೆಯ ಮೇಲೆ ತನ್ನ ಮಗನಿಗೆ ಕೋಳಿಮೊಟ್ಟೆ ಸಿಕ್ಕಿಲ್ಲವೆಂದು ದೈಹಿಕ ಹಲ್ಲೆ ನಡೆದಿದ್ದು, ದೊಡ್ಡಬಳ್ಳಾಪುರದಲ್ಲಿ ಜಿಲ್ಲಾ ಪಂಚಾಯ್ತಿ ಸದಸ್ಯೆ ಕಾರ್ಯಕರ್ತೆಗೆ ಚಪ್ಪಲಿಯಿಂದ ಹೊಡೆದಾಗ, ... ಹೀಗೆ ಹಲವಾರು ಸಮಸ್ಯೆಗಳ ವಿರುದ್ಧ ರಾಜ್ಯದಾದ್ಯಂತ ಪ್ರತಿಭಟನೆ ನಡೆದಿದೆ.

ತಿಂಗಳಿಗೆ ಸರಿಯಾಗಿ ಗೌರವಧನ ಪಾವತಿಸದೆ 7-8 ತಿಂಗಳುಗಳಿಂದ ಬೆಂಗಳೂರಿನಲ್ಲಿ ಹಾಗೆಯೇ ದುಡಿಸುತ್ತಿದ್ದ ಸಿಡಿಪಿಓ ಅಧಿಕಾರಿಗಳ ವಿರುದ್ಧ ಹೋರಾಟ.

ಎಸ್.ಎಂ.ಕೃಷ್ಣ ನೇತೃತ್ವದ ಸರ್ಕಾರದಲ್ಲಿ ಅಧಿಕಾರ ವಿಕೇಂದ್ರೀಕರಣದ ಹೆಸರಲ್ಲಿ ಗ್ರಾಮ ಪಂಚಾಯ್ತಿಗಳಿಗೆ ಹೆಚ್ಚಿನ ಅಧಿಕಾರ ಕೊಡಬೇಕೆಂದು ಬೇಲೂರು ಘೋಷಣೆಯಲ್ಲಿ ಅಂಗನವಾಡಿ ಕೇಂದ್ರಗಳು, ಶಾಲಾ ಶಿಕ್ಷಕರು, ಪ್ರಾಥಮಿಕ ಆರೋಗ್ಯ ಸಹಾಯಕಿಯರು, ನ್ಯಾಯಬೆಲೆ ಅಂಗಡಿಗಳು, ಗ್ರಂಥಾಲಯಗಳು ಹೀಗೆ ಕೆಲವು ಇಲಾಖೆಗಳನ್ನು ಪಂಚಾಯ್ತಿಗಳಿಗೊಪ್ಪಿಸುವ ತೀರ್ಮಾನ ಮಾಡಿತು. ಪಂಚಾಯ್ತಿಗಳಿಗೆ ಹೆಚ್ಚಿನ ಅಧಿಕಾರ ಕೊಡುವುದಕ್ಕೆ ಸಿಐಟಿಯುವಿನ ಯಾವುದೇ ವಿರೋಧವಿಲ್ಲ. ಆದರೆ ಅಧಿಕಾರದ ವಿಕೇಂದ್ರೀಕರಣದ ಹೆಸರಲ್ಲಿ ಯಾವುದೇ ಕೆಲಸದ ಭದ್ರತೆಯಿಲ್ಲದಿರುವ ಅಂಗನವಾಡಿ ನೌಕರರು ಗೌರವಧನ ಪಡೆಯಲು ಪಂಚಾಯಿತಿಗಳಿಂದ ಹಾಜರಾತಿ ದೃಢೀಕರಣ ಪತ್ರ ಪಡೆದರೆ ಮಾತ್ರ ಗೌರವಧನ ಹಾಗೂ ರಜೆ ಅನುಮತಿಯನ್ನು ಪಡೆಯಬೇಕು. ಈ ನಿಬಂಧನೆಗಳನ್ನು ವಿರೋಧಿಸಿ ಇಡೀ ರಾಜ್ಯದಾದ್ಯಂತ ತಾಲೂಕು, ಜಿಲ್ಲಾಮಟ್ಟದ ಪ್ರತಿಭಟನೆಗಳು, ಸೆಪ್ಟೆಂಬರ್ 3 ರಿಂದ 14ರವರೆಗೆ ಅನಿರ್ದಿಷ್ಟ ರಾತ್ರಿ ಹಗಲಿನ ಧರಣಿ. ಈ ಧರಣಿಯನ್ನು ಮೊದಲ ದಿನ ಮಧ್ಯರಾತ್ರಿ ತೀವ್ರತರವಾದ ಮಳೆಯಿಂದಾಗಿ ಟೆಂಟ್ ಬಿದ್ದು ಹೋದರೂ 4-5 ಮಹಿಳೆಯರು 60-30 ಅಡಿ ಟೆಂಟ್‌ನನು ಎತ್ತಿ ಹಿಡಿದು ಜನರನ್ನು ರಕ್ಷಿಸಿದ್ದಲ್ಲದೇ ಅಲ್ಲೇ ಹತ್ತಿರದಲ್ಲಿದ್ದ ಪೊಲೀಸ್ ಠಾಣೆಗೆ ಹೋದಾಗ ಅವರು ಆಶ್ರಯ ಕೊಡದಿದ್ದಾಗ ಆ ಮಧ್ಯ ರಾತ್ರಿಯಲ್ಲಿಯೇ ಪೊಲೀಸ್ ಠಾಣೆಯ ಮುಂದೆ ನಿಂತು ಕ್ರಾಂತಿಗೀತೆಗಳ ಮುಖಾಂತರ ಮಾಡಿದ ಪ್ರತಿಭಟನೆಗೆ ಪೊಲೀಸ್‌ನವರು ವಾಪಾಸ್ಸು ಬಂದು ಕ್ಷಮೆ ಯಾಚಿಸಿದರು.

ಈ ಹೋರಾಟ ಮುಂದುವರಿದು ಸರ್ಕಾರದ ಕೆಲಸಕ್ಕೆ ಅಸಹಕಾರ ನೀಡಿ ಹಲವಾರು ದಿನಗಳ ಸಂಬಳವನ್ನು ಕಳೆದುಕೊಂಡು 3-4 ತಿಂಗಳು ಹಲವಾರು



ವಿಧದ ಹೋರಾಟಗಳನ್ನು ಮಾಡಿ ನಿಬಂಧನೆಗಳಿರುವ ರಾಜ್ಯ ಸುತ್ತೋಲೆಯನ್ನು ಬದಲಾವಣೆ ಮಾಡಿಸಲು ಸಾಧ್ಯವಾಗಿದೆ.

ರಾಜ್ಯ ಸರ್ಕಾರದ ಯೋಜನೆಗಳ ಜಾರಿಗಾಗಿ ಹುದ್ದೆಗಳನ್ನು ಸೃಷ್ಟಿಸಿ ಸೌಲಭ್ಯಗಳನ್ನು ಕೊಡುವುದರ ಬದಲಿಗೆ ಗೌರವಧನದ ಆಧಾರದಲ್ಲಿ ದುಡಿಸುವುದು ಸಾಮಾನ್ಯವಾಗುತ್ತಿದೆ. ಉದಾ: ಪಂಚಾಯ್ತಿ ನೌಕರರು, ಪ್ರೇರಕ- ಸಹಪ್ರೇರಕರು, ಅಂಗನವಾಡಿ ನೌಕರರು, ಸರ್ವಶಿಕ್ಷಣ ಅಭಿಯಾನದ ಕಾರ್ಯಕರ್ತರು.

ಸುಪ್ರಿಂ ಕೋರ್ಟ್‌ನ ಆದೇಶದ ಮೇಲೆ ಪ್ರಾಥಮಿಕ ಶಾಲೆಗಳಲ್ಲಿ ಮಕ್ಕಳ ಗೈರುಹಾಜರಾತಿಯನ್ನು ಕಡಿಮೆ ಮಾಡಿಸಲು ಮತ್ತು ಮಕ್ಕಳು ಕಲಿಕಾ ಶ್ರದ್ಧೆಯನ್ನು ಬೆಳೆಸಿಕೊಳ್ಳಲು ಆ ಮಕ್ಕಳ ಅಪೌಷ್ಠಿಕತೆಯೇ ಕಾರಣ ಎಂದು ಅರಿತು ರಾಜ್ಯ ಸರ್ಕಾರ ಅಕ್ಷರ ದಾಸೋಹ ಯೋಜನೆಯನ್ನು ಪ್ರಾರಂಭಿಸಿದೆ. ಈ ಯೋಜನೆಯಲ್ಲಿ 96 ಸಾವಿರಕ್ಕಿಂತ ಹೆಚ್ಚು ಮಹಿಳೆಯರು ಬೆಳಿಗ್ಗೆ 10 ಗಂಟೆಯಿಂದ ಸಂಜೆ 4 ಗಂಟೆಯವರೆಗೆ ಮಧ್ಯಾಹ್ನದ ಬಿಸಿಯೂಟವನ್ನು ಮಾಡಿ ಮಕ್ಕಳಿಗೆ ಬಡಿಸುತ್ತಾರೆ. ಇವರ ಸಂಬಳ 300 ರೂ.ಗಳಿಂದ 650 ರೂ.ಗಳು ಮಾತ್ರ. ಬೇರೆ ಯಾವ ಸೌಲಭ್ಯವಿಲ್ಲದಿದ್ದರೂ ಗ್ರಾಮ ಪಂಚಾಯ್ತಿ ಸದಸ್ಯರು, ಶಾಲಾ ಉಪಾಧ್ಯಾಯರು, ಶಾಲಾಭಿವೃದ್ಧಿ ಸಮಿತಿ ಸದಸ್ಯರುಗಳ ಮುಲಾಜಿನಲ್ಲಿಯೇ ಕೆಲಸ ಮಾಡಬೇಕು, ಇಲ್ಲದಿದ್ದರೆ ಇವರಿಗೆ ಕೆಲಸವಿಲ್ಲ. ಈ ಮಹಿಳೆಯರು ಇಂದು ಸಂಘಟಿತರಾಗಿ ಹೋರಾಡುತ್ತಿದ್ದಾರೆ.

ದುಡಿಯುವ ಮಹಿಳೆಯರು ತಮ್ಮ ಸಮಸ್ಯೆಗಳಿಗಾಗಿ ಮೌನವಾಗಿ ಕಣ್ಣೀರು ಹರಿಸುವ ಬದಲಿಗೆ ಕೆಂಬಾವುಟದ ಅಡಿಯಲ್ಲಿ ಸಂಘರ್ಷವನ್ನು ನಡೆಸಿ ಕಣ್ಣೀರು ಬರಿಸುವ ವ್ಯವಸ್ಥೆಯನ್ನು ಬದಲಾಯಿಸಬೇಕಿದೆ.

ಎಸ್.ವರಲಕ್ಷ್ಮಿ

ಸಿಪಿಐ(ಎಂ) 18ನೇ ಕರ್ನಾಟಕ ರಾಜ್ಯ ಸಮ್ಮೇಳನ

ನಿರ್ಣಯಗಳು

ಮಹಿಳೆಯರ ಮೇಲೆ ಹೆಚ್ಚುತ್ತಿರುವ ದೌರ್ಜನ್ಯ ಖಂಡಿಸಿ

ಜಗತ್ತಿನ ಪ್ರಥಮ ಶೋಷಿತೆಯಾದ ಮಹಿಳೆಯ ಮೇಲಿನ ದೌರ್ಜನ್ಯಗಳನ್ನು ತಡೆಗಟ್ಟುವಲ್ಲಿ ವಹಿಸಬೇಕಾದ ತಕ್ಷಣದ ಕ್ರಮಗಳೇನು?

ಮಹಿಳೆಯರು ಒಟ್ಟು ಜನಸಂಖ್ಯೆಯ ಅರ್ಧದಷ್ಟು ಎಂದು ಹೇಳಲು ಸಾಧ್ಯವಿಲ್ಲ. ಏಕೆಂದರೆ ವಿಶ್ವದ ಜನಸಂಖ್ಯೆಯಲ್ಲಿ ಸಾವಿರ ಪುರುಷರಿಗೆ 990 ಮಹಿಳೆಯರಿರುವರು. ಭಾರತದಲ್ಲಿ ಸಾವಿರ ಪುರುಷರಿಗೆ 927 ಮಹಿಳೆಯರಿದ್ದರೆ ಕರ್ನಾಟದಲ್ಲಿ ಸಾವಿರ ಪುರುಷರಿಗೆ 964 ಮಹಿಳೆಯರಿರುವರು. ಬೆಳಗಾಂ ಮತ್ತು ಮಂಡ್ಯ ಜಿಲ್ಲೆಗಳಲ್ಲಿ ಮಹಿಳೆಯರ ಸಂಖ್ಯೆಯಲ್ಲಿ ಗಾಬರಿ ಹುಟ್ಟಿಸುವಷ್ಟು ಕುಸಿತ ಕಂಡುಬರುತ್ತಿದೆ. ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿಯೂ 5 ವರುಷ ವಯಸ್ಸಿನವರೆಗಿನ ಹೆಣ್ಣು ಶಿಶುಗಳ ಸಂಖ್ಯೆ ಕಡಿಮೆಯಿದೆ. ಜಾಗತೀಕರಣದ ಪ್ರಕ್ರಿಯೆ ಆರಂಭವಾದಾಗಿನಿಂದ ಅಂದರೆ 1994ರಿಂದ ಈ ಕುಸಿತದ ಪ್ರಮಾಣದಲ್ಲಿ ಹೆಚ್ಚಳ ಕಾಣುತ್ತೇವೆ.

ಹೀಗೆ ಬೇಡವಾಗಿ ಜನಿಸುವ ಹೆಣ್ಣು, ಎರಡನೆಯ ದರ್ಜೆಯ ಪ್ರಜೆಯಾಗಿಯೇ ಬಾಳುವಂತಹ ಸ್ಥಿತಿಗೆ ತಳ್ಳಲ್ಪಟ್ಟು ನಾನಾ ನಮೂನೆಯ ಹಿಂಸೆ, ದೌರ್ಜನ್ಯ, ಅತ್ಯಾಚಾರಗಳಿಗೆ ಬಲಿಯಾಗುತ್ತಿದ್ದಾಳೆ. ಕೆಲಸ ಮಾಡುವ ಸ್ಥಳಗಳಲ್ಲಿ ಲೈಂಗಿಕ ಕಿರುಕುಳ ಅನುಭವಿಸುತ್ತಿದ್ದಾಳೆ. ಕುಟುಂಬದ ಒಳಗೆಯೂ ಮಾನಸಿಕ, ಶಾರೀರಿಕ ದೌರ್ಜನ್ಯಗಳನ್ನು ಎದುರಿಸುತ್ತಿದ್ದಾಳೆ. ಜಾಗತೀಕರಣ ಹುಟ್ಟು ಹಾಕಿದ ಕೊಳ್ಳುಬಾಕತನವು ವರದಕ್ಷಿಣೆ ಪದ್ಧತಿಯ ಅನಿಷ್ಟ ಬೇರುಗಳನ್ನು ಮತ್ತಷ್ಟು ಗಟ್ಟಿಗೊಳಿಸಿ, ಅಸಂಖ್ಯಾತ ಹೆಣ್ಣು ಮಕ್ಕಳ ಜೀವಕ್ಕೆ ಉರುಳಾಗಿದೆ. ಹುಟ್ಟಿದಾರಭ್ಯ ಆಯ್ಕೆಯ ಸ್ವಾತಂತ್ರ್ಯದಿಂದ ವಂಚಿತಳಾದ ಆಕೆಗೆ ಆಸ್ತಿಯ ಹಕ್ಕೆಂಬುದು ಕಾನೂನಿನೊಳಗೆ ಮಾತ್ರ ಉಳಿದಿದೆಯೇ ವಿನಹ ವಾಸ್ತವದಲ್ಲಿ ದಕ್ಕುತ್ತಿಲ್ಲ. ಎಗ್ಗಿಲ್ಲದೆ ನಡೆಯುತ್ತಿರುವ ಬಾಲ್ಯವಿವಾಹಗಳು ಭವಿಷ್ಯದಲ್ಲಿ ಹೆಣ್ಣಿನ ಬದುಕಿಗೇ ಸಂಕಟ ತಂದೊಡ್ಡಲಿವೆ.

ಜಾಗತೀಕರಣ ಹುಟ್ಟು ಹಾಕಿದ ಕೊಳ್ಳುಬಾಕತನವು ವರದಕ್ಷಿಣೆ ಪದ್ಧತಿಯ ಅನಿಷ್ಟ ಬೇರುಗಳನ್ನು ಮತ್ತಷ್ಟು ಗಟ್ಟಿಗೊಳಿಸಿ, ಅಸಂಖ್ಯಾತ ಹೆಣ್ಣು ಮಕ್ಕಳ ಜೀವಕ್ಕೆ ಉರುಳಾಗಿದೆ.

ಅಂಗನವಾಡಿ, ಬಿಸಿಯೂಟ, ಮತ್ತಿತರ ಕ್ಷೇತ್ರಗಳಲ್ಲಿ ದುಡಿಯುವ ಮಹಿಳೆಯರಲ್ಲದೆ, ಕೃಷಿಕೂಲಿಕಾರ ಮಹಿಳೆ, ಕಟ್ಟಡ ಕಾರ್ಮಿಕ ಮಹಿಳೆ, ಬೀಡಿ ಅಗರಬತ್ತಿ ಉದ್ಯಮಗಳಲ್ಲಿ ಕೆಲಸ ಮಾಡುವ ಮಹಿಳೆ, ಮನೆಗೆಲಸ ಮಾಡುವ ಮಹಿಳೆ ಹೀಗೆ ಅಸಂಖ್ಯಾತ ಸಂಘಟಿತ ಮತ್ತು ಅಸಂಘಟಿತ ಮಹಿಳೆಯರು ಕೂಲಿ, ವೇತನ ತಾರತಮ್ಯ ಅನುಭವಿಸುತ್ತಿದ್ದಾರೆ ಹಾಗೂ ಸಮಾನ ಗೌರವ ಮತ್ತು ಹಕ್ಕಿನಿಂದಲೂ ವಂಚಿತರಾಗುತ್ತಿದ್ದಾರೆ. ಮಾತ್ರವಲ್ಲ, ತೀವ್ರವಾದ ಮಾನಸಿಕ ಹಿಂಸೆ, ಲೈಂಗಿಕ ಕಿರುಕುಳಗಳಿಗೆ ಬಲಿಯಾಗುತ್ತಿದ್ದಾರೆ.

ಜಾಗತೀಕರಣವು ಮಹಿಳೆಯರನ್ನು ಅಕ್ಷರಶಃ ತನ್ನ ವ್ಯಾಪಾರದ ಸರಕಾಗಿಸುತ್ತಿದೆ. ಈ ಕಾರಣದಿಂದಾಗಿಯೇ ಮಾಧ್ಯಮಗಳಲ್ಲಿ ಅವಳನ್ನು ಜಾಹೀರಾತುಗಳಿಗೆ ವಸ್ತುವಾಗಿ ಕಾಣಿಸಲಾಗುತ್ತಿದೆ. ಈ ವೈಜ್ಞಾನಿಕ ಯುಗದಲ್ಲಿಯೂ ಪಾಳೇಗಾರಿ ನಂಬಿಕೆಗಳನ್ನು ಅವಳಲ್ಲೇ ಕಾಯ್ದಿಡಲು ಮೂಢನಂಬಿಕೆ, ಕಂದಾಚಾರದ ಚಿತ್ರಣಗಳಲ್ಲಿಯೂ ಅವಳನ್ನು ಬಿಂಬಿಸಲಾಗುತ್ತಿದೆ. ಬೂರ್ಜ್ವಾ ಮತ್ತು ಕೋಮುವಾದಿ ಪಕ್ಷಗಳು ತಮ್ಮ ಸ್ವಾರ್ಥ ರಾಜಕೀಯ ಮೇಲಾಟಕ್ಕಾಗಿ ಮಹಿಳೆಯರನ್ನು ಬಲಿ ಮಾಡುವ ಘಟನೆಗಳು ಪಂಚಾಯತ್ ಮಟ್ಟದಿಂದ ಮೇಲ್ ಹಂತದವರೆಗೂ ಘಟಿಸುತ್ತಿವೆ. ಆನೇಕಲ್‌ನ ಮಂಜುಳ ಪ್ರಕರಣ ನೆನಪಿಸಿಕೊಳ್ಳಬಹುದು.ಜೇವರ್ಗಿ ತಾಲೂಕಿನ ಕಡಕೋಳದ ಗ್ರಾಮ ಪಂಚಾಯತ್ ಅಧ್ಯಕ್ಷೆಯನ್ನು ಕಿರುಕುಳ ಕೊಟ್ಟು ಮಾನಸಿಕ ರೋಗಿಯಾಗಿಸಿದಂತಹ ಅನೇಕ ಪ್ರಕರಣಗಳು ರಾಜ್ಯದಲ್ಲಿ ಕಂಡುಬರುತ್ತಿವೆ. ಹೀಗೆ ಮಹಿಳೆಯರ ಮೇಲೆ ರಾಜಕೀಯ ಹಿಂಸೆಗಳು ಹೆಚ್ಚುತ್ತಿವೆ.

ಆದುದರಿಂದ ಸಿಪಿಐ(ಎಂ) ಪಕ್ಷದ 18ನೇ ಕರ್ನಾಟಕ ರಾಜ್ಯ ಸಮ್ಮೇಳನವು ಮಹಿಳೆಯರ ಮೇಲಿನ ದೌರ್ಜನ್ಯ, ಹಿಂಸೆ ತಡೆಗಟ್ಟಲು ಈ ಕೆಳಗಿನ ನಿರ್ಣಯಗಳನ್ನು ಜಾರಿ ಮಾಡಲು ಒತ್ತಾಯಿಸಿದೆ.

1. ಮಹಿಳೆಯರು ಕೆಲಸ ಮಾಡುವ ಸ್ಥಳದಲ್ಲಿ ಯಾವುದೇ ರೀತಿಯ ಕಿರುಕುಳ ತಪ್ಪಿಸಲು ಸುಪ್ರಿಂ ಕೋರ್ಟಿನ ತೀರ್ಪಿನಂತೆ ರಚಿಸಬೇಕೆಂಬ ಸಮಿತಿಯನ್ನು ಎಲ್ಲ ಕಡೆಯೂ ರಚಿಸಬೇಕು.

2. ಹೆಣ್ಣು ಭ್ರೂಣ ಹತ್ಯೆ ತಡೆಗಟ್ಟಲು ತರಲಾದ ಕಾಯಿದೆ (pre-conception ಮತ್ತು pre-natal Sex determination act) prohibition of sex selection act ಕೂಡಲೇ ಜಾರಿ ಮಾಡಬೇಕು.

3.ಆಮೂಲಾಗ್ರ ಬದಲಾವಣೆಯೊಂದಿಗೆ ಕೌಟುಂಬಿಕ ದೌರ್ಜನ್ಯ ತಡೆ ಕಾಯ್ದೆಯ" ಮಸೂದೆಯನ್ನು ಕೇಂದ್ರ ಸರಕಾರ ಪಾಸು ಮಾಡಿ ಜ್ಯಾರಿ ಮಾಡುವಂತಾಗಬೇಕು.4. ಮಹಿಳೆಗೆ ಸಂಬಂಧಪಟ್ಟ ಯಾವುದೇ ಮೊಕದ್ದಮೆಗಳನ್ನು ಕೋರ್ಟು ಆರು ತಿಂಗಳೊಳಗೆ ಇತ್ಯರ್ಥಗೊಳಿಸಬೇಕು.

5. ಮಹಿಳೆಯರ ಮೇಲೆ ನಡೆಯುವ ಎಲ್ಲ ರೀತಿಯ ದೌರ್ಜನ್ಯ, ದಬ್ಬಾಳಿಕೆ, ಅಸಮಾನತೆ, ಅತ್ಯಾಚಾರದ ವಿರುದ್ಧ ಸಿಪಿಐ(ಎಂ) ಪಕ್ಷವು ದೃಢವಾದ ಹೋರಾಟ ನಡೆಸಬೇಕೆಂದು ಕರೆ ನೀಡಿದೆ.

ಒಂದು ವಾರಗಳ ಕಾಲ ಪಾಕಿಸ್ತಾನಕ್ಕೆ ಭೇಟಿಗಾಗಿ ಎಡಪಕ್ಷಗಳ ನಿಯೋಗದೊಂದಿಗೆ ತೆರಳಿರುವ ಕಾಂ.ಸುರ್ಜಿತ್‌ರವರು ಹಲವು ನೆನಪುಗಳ ಮೆಲುಕು ಹಾಕುತ್ತಿದ್ದಾರೆ. ಸಾಮ್ರಾಜ್ಯಶಾಹಿ ವಿರುದ್ಧದ ಸಮರದಲ್ಲಿ ಭಾಗಿಯಾದ ಈ ಸೇನಾನಿಯ ನಡೆದಾಡಿದಲ್ಲೆಲ್ಲಾ ಐತಿಹಾಸಿಕ ನೆನಪುಗಳ ಬುಗ್ಗೆಯೇ... ಏನಿದೆ ನೋಡಿ!

ಪಾಕಿಸ್ತಾನದಲ್ಲಿ ಕಾಂ.ಸುರ್ಜಿತ್

ಹೋರಾಟದ ನೆನಪುಗಳ ಮೆಲುಕು



ಸ್ವಾತಂತ್ರ್ಯದ ನಂತರ ಮೊದಲ ಬಾರಿಗೆ ಭಾರತದ ಕಮ್ಯುನಿಸ್ಟ್ ಪ್ರತಿನಿಧಿ ಮಂಡಳವೊಂದು ಪಾಕಿಸ್ತಾನಕ್ಕೆ ಅಧಿಕೃತ ಭೇಟಿ ನೀಡಲಿದೆ. ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಕಾಂ| ಸುರ್ಜಿತ್ ಮತ್ತು ಸಿಪಿಐ ಪ್ರಧಾನ ಕಾರ್ಯದರ್ಶಿ ಕಾಂ| ಎ.ಬಿ.ಬರ್ದನ್ ಈ ಪ್ರತಿನಿಧಿ ಮಂಡಳದ ನಾಯಕತ್ವ ವಹಿಸಿದ್ದಾರೆ. ಪಾಕಿಸ್ತಾನದ ಎಡರಂಗದ ಆಹ್ವಾನದ ಮೇರೆಗೆ ಈ ಭೇಟಿ. ಪಾಕಿಸ್ತಾನದ ಎಡರಂಗದಲ್ಲಿ ಪಾಕಿಸ್ತಾನ ಕಮ್ಯುನಿಸ್ಟ್ ಪಾರ್ಟಿ, ಪಾಕಿಸ್ತಾನ ಕಮ್ಯುನಿಸ್ಟ್ ಮಜದೂರ್ ಕಿಸಾನ್ ಪಾರ್ಟಿ, ಪಾಕಿಸ್ತಾನ ಲೇಬರ್ ಪಾರ್ಟಿಗಳು ಇವೆ. ಲಾಹೋರ್‌ನಲ್ಲಿ ಫೆಬ್ರವರಿ 24ರಂದು ಭೇಟಿ ಆರಂಭವಾಗಿ ಮಾರ್ಚ್ 4 ರಂದು ಕರಾಚಿಯಲ್ಲಿ ಮುಗಿಯಲಿದೆ. 7 ದಿನಗಳ ಈ ಪಾಕಿಸ್ತಾನ ಭೇಟಿಯಲ್ಲಿ ಲಾಹೋರ್‌ನಲ್ಲಿ ಎರಡು ದಿನ, ಸಾಹಿವಾಲ್ - ಫೈಸಲಾಬಾದ್‌ನಲ್ಲಿ ಎರಡು ದಿನ, ಇಸ್ಲಾಮಾಬಾದ್‌ನಲ್ಲಿ ಎರಡು ದಿನ ಮತ್ತು ಒಂದು ದಿನ ಕರಾಚಿಯಲ್ಲಿ ಕಳೆಯಲಿದ್ದಾರೆ. ಎಡರಂಗ ಏರ್ಪಡಿಸಿದ ಹಲವು ಭೇಟಿ, ಸಾರ್ವಜನಿಕ ಸಭೆಗಳಲ್ಲದೆ, ಪ್ರತಿನಿಧಿ ಮಂಡಳಿಯು ಅಧ್ಯಕ್ಷ ಮುಷರಫ್ ಮತ್ತು ಪ್ರಧಾನ ಮಂತ್ರಿ ಶೌಕತ್ ಅಜೀಜ್‌ರನ್ನು ಭೇಟಿ ಮಾಡಲಿದೆ.

ಕಾಂ| ಸುರ್ಜಿತ್‌ರವರಿಗಂತೂ ಇದು ಸಾಮ್ರಾಜ್ಯಶಾಹಿ - ವಿರೋಧಿ ಹೋರಾಟದ ನೆನಪು ಮೆಲುಕು ಹಾಕಲಿರುವ ಅವಕಾಶವಾಗಲಿದೆ. ಅವಿಭಜಿತ ಭಾರತದಲ್ಲಿ ಪಂಜಾಬ್ ಗುಡ್‌ಗಾಂವ್ (ಈಗ ದೆಹಲಿ ಬಳಿಯಲ್ಲಿದ್ದು ಹರಿಯಾಣ ರಾಜ್ಯದಲ್ಲಿದೆ) ನಿಂದ ಲಾಹೋರ್‌ವರೆಗೆ ಹರಡಿತ್ತು. ಆಗ ಸುರ್ಜಿತ್‌ರವರು ಜಲಂಧರ್‌ನಿಂದ ಲಾಹೋರ್‌ಗೆ ಸೈಕಲ್ಲಿನಲ್ಲಿ ಹೋಗುತ್ತಿದ್ದರಂತೆ. ಲಾಹೋರ್‌ನಲ್ಲಿ ಹಲವು ಚಟುವಟಿಕೆಗಳಲ್ಲಿ ಭಾಗಹಿಸುವುದಲ್ಲದೆ, ದ್ವಾರಕಾದಾಸ್ ಲೈಬ್ರರಿಗೆ ಸಾಯಂ ಸಂದರ್ಶಕರಾಗಿದ್ದರು.


ಹದಿನಾಲ್ಕು ವರ್ಷದ ಬಾಲಕನಾಗಿರುವಾಗಲೇ ಕಾಂ| ಸುರ್ಜಿತ್ ಮೊದಲ ಬಾರಿಗೆ ಬಂಧಿತರಾಗಿದ್ದರು. ಭಗತ್‌ಸಿಂಗ್ ಹುತಾತ್ಮರಾದ ಮೊದಲ ವಾರ್ಷಿಕದಂದುಹೊಶಿಯಾರ್‌ಪುರ್‌ದ ಜಿಲ್ಲಾ ಕೋರ್ಟಿನ ಮೇಲೆ ತ್ರಿವರ್ಣ ಧ್ವಜ ಹಾರಿಸಿದ್ದು ಅವರ ಅಪರಾಧವಾಗಿತ್ತು. ಅವರನ್ನು ಮೊದಲಿಗೆ ಬಂಧಿಸಿ ದೆಹಲಿಯ ಬಾಲಕರ ಸುಧಾರಣಾ ಶಾಲೆಗೆ ಕಳಿಸಲಾಯಿತು. ಅಲ್ಲೇ ಸುರ್ಜಿತ್ ಸಹಪಾಠಿಗಳನ್ನು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಲು ಪ್ರೇರೇಪಿಸುತ್ತಿದ್ದರು. ಅವರನ್ನು ಲಾಹೋರ್ ಬಳಿ ಇರುವ ಬೋರ್‌ಸ್ಟೆಲ್ ಜೈಲಿಗೆ ಕಳುಹಿಸಲಾಯಿತು. ಬೋರ್‌ಸ್ಟೆಲ್ ಜೈಲಿನಲ್ಲೇ ಸುರ್ಜಿತ್‌ರವರಿಗೆ ಟಿಕಾರಾಮ ಸುಖಾನ್, ಇಂದರ್ ಸಿಂಗ್ ಗುಜರನ್‌ವಾಲಾ ಮತ್ತಿತರ ಭಗತ್‌ಸಿಂಗರ ಕ್ರಾಂತಿಕಾರಿ ಸಹಚರರ ಜತೆ ಸಂಪರ್ಕ ಸಿಕ್ಕಿತು. ಬೋರ್‌ಸ್ಟೆಲ್ ಜೈಲಿನಿಂದ 1934ರಲ್ಲಿ ಅವರನ್ನು ಬಿಡುಗಡೆ ಮಾಡಲಾಯಿತು. ಎರಡನೇ ಮಹಾಯುದ್ಧದ ನಂತರ ಕಮ್ಯುನಿಸ್ಟ್ ನಿಷಿದ್ಧವಾದಾಗ, ಕಾಂ| ಸುರ್ಜಿತ್ ವಿರುದ್ಧ ವಾರಂಟ್ ಇತ್ತು. ಅವರು ಭೂಗತರಾದರು. ಒಂದು ಸಭೆಗೆ ಹಾಜರಾಗಿ ಅವರು ಅಮೃತಸರದಿಂದ ಲಾಹೋರ್‌ಗೆ ರೈಲಿನಲ್ಲಿ ಹೊರಟರು, ಕಾಕತಾಳೀಯವೆಂಬಂತೆ ಕಾಂ| ಕರಂ ಸಿಂಗ್ ಮಾನ್ ಮತ್ತು ಕಾಂ| ಸುರ್ಜಿತ್ ಒಂದೇ ರೈಲಿನಲ್ಲಿ ಹೊರಟಿದ್ದರು. ಕಾಂ| ಮನ್ ಖ್ಯಾತ ಕ್ರಾಂತಿಕಾರಿಯಾಗಿದ್ದು, ಅಮೃತಸರದಿಂದ ಪೊಲೀಸರು ಬೆನ್ನಟ್ಟಿದ್ದರು. ಮನ್ ಭಾಗಪನ್‌ಪುರ ನಿಲ್ದಾಣದಲ್ಲಿ ಇಳಿದರು. ಕಾಂ. ಸುರ್ಜಿತ್ ಸಹ ಅದೇ ನಿಲ್ದಾಣದಲ್ಲಿ ಇಳಿದರು. ಇಳಿಯುತ್ತಲೇ ಕಾಂ. ಮನ್‌ರವರನ್ನು ಪೊಲೀಸರು ಬಂಧಿಸಿದರು. ಸುರ್ಜಿತ್‌ರವರ ಮೇಲೂ ಅವರಿಗೆ ಸಂಶಯ ಬಂದು, ಅವರನ್ನು ಬಂಧಿಸಿದರು. ಆದರೆ ಸುರ್ಜಿತ್ ಅವರನ್ನು ಗುರುತಿಸಲು ಸಾಧ್ಯವಾಗಲಿಲ್ಲ ಪೊಲೀಸರಿಗೆ, ಮೂರು ದಿನಗಳವರೆಗೆ. ಆಮೇಲೆ ಮನ್‌ರವರ ಬಳಿ ಇದ್ದ ಕಾಗದಪತ್ರಗಳಿಂದ ಎಂತಹ 'ದೊಡ್ಡಬೇಟೆ' ಸಿಕ್ಕಿದೆ ಎಂದು ಗೊತ್ತಾಗಿದ್ದು ಪೊಲೀಸರಿಗೆ.

ಕಾಂ. ಸುರ್ಜಿತ್ ಅವರನ್ನು ಲಾಹೋರ್ ಕೆಂಪು ಕೋಟೆಗೆ ಕಳಿಸಲಾಯಿತು. ಅಲ್ಲಿ ಅವರನ್ನು ಚಿತ್ರಹಿಂಸೆಗೆ ಗುರಿ ಮಾಡಲಾಯಿತು. ಅವರನ್ನು ಒಂದು ಕತ್ತಲ ಕೋಣೆಯಲ್ಲಿ ಒಂಟಿಯಾಗಿ ಹಲವು ದಿನಗಳ ಕಾಲ ಬಂಧಿಸಿಡಲಾಯಿತು. ಇನ್ನೊಂದು ಕತ್ತಲಕೋಣೆಯಲ್ಲಿ ಮೂರು ತಿಂಗಳು ಇಡಲಾಯಿತು. ಅವರಿಗೆ ಮೂಲಭೂತ ಅವಶ್ಯಕತೆಗಳನ್ನೂ ಕೊಡದೆ ಚಿತ್ರಹಿಂಸೆ ಕೊಡಲಾಯಿತು. ಸುರ್ಜಿತ್ ಕೂದಲ ತುಂಬ ಹಲ್ಲಿಗಳು ತುಂಬಿದ್ದವು. ಕಣ್ಣಿಗೂ ಬೇನೆ ಅಂಟಿತ್ತು. ಜೈಲಿಗೆ ಭೇಟಿ ನೀಡುತ್ತಿದ್ದ ಐರಿಶ್ ಡಾಕ್ಟರ್ ಒಬ್ಬ ಸುರ್ಜಿತ್ ಅವರನ್ನು ನೋಡದೆ, ಆತ ಚೆನ್ನಾಗಿದ್ದಾನೆ ಎಂದು ಸರ್ಟಿಫಿಕೇಟ್ ಕೊಡಲು ನಿರಾಕರಿಸಿದ. ಆತ ಪರೀಕ್ಷೆ ಮಾಡಿದ ಮೇಲೆ, ಸುರ್ಜಿತ್ ಅವರ ಮೇಲೆ ಚಿತ್ರಹಿಂಸೆ ನಿಂತಿತು. ಸುರ್ಜಿತರನ್ನು ತಕ್ಷಣ ಆಸ್ಪತ್ರೆಗೆ ಕಳಿಸಬೇಕೆಂದು ಡಾಕ್ಟರು ಆಜ್ಞೆ ಮಾಡಿದ. ಸುರ್ಜಿತ್ ಅವರಿಗೆ ಆಸ್ಪತ್ರೆಯಲ್ಲಿ ಶುಶ್ರೂಷೆ ನೀಡಿ, ಈಗಿನ ಪಾಕಿಸ್ತಾನದಲ್ಲಿರುವ ಪಂಜಾಬ್ ಪ್ರಾಂತ್ಯದ ಮೊಂಟಿಗೊಮಾರಿ ಜೈಲಿಗೆ ಸ್ಥಳಾಂತರಿಸಲಾಯಿತು. ಆಮೇಲೆ ಅವರನ್ನು ಇತರ ಕಮ್ಯುನಿಸ್ಟ್ ಕೈದಿಗಳು ಇದ್ದ ದೆವೋರಾ ಶಿಬಿರಕ್ಕೆ ಕಳಿಸಲಾಯಿತು. ಅಲ್ಲಿ ಬಿ.ಟಿ.ರಣದಿವೆ, ಎಸ್.ಎ.ಡಾಂಗೆ, ಸೋಲಿ ಬಾಲ್ಟಿವಾಲಾ, ಪಾಟ್ವರ್ ಮುಂತಾದ ಕಮ್ಯುನಿಸ್ಟರು ಬಂಧಿತರಾಗಿದ್ದರು.

ಪಾಕಿಸ್ತಾನಿ ಕಮ್ಯುನಿಸ್ಟ್ ಪಕ್ಷದ ರಚನೆ

ಭಾರತ ವಿಭಜನೆ ನಂತರ, ಭಾರತೀಯ ಕಮ್ಯುನಿಸ್ಟ್ ಪಕ್ಷ, ಪಾಕಿಸ್ತಾನದಲ್ಲಿ ಕಮ್ಯುನಿಸ್ಟ್ ಪಕ್ಷ ರಚಿಸಲು ನಿರ್ಧರಿಸಿತು. 1948 ರಲ್ಲಿ ಕಲ್ಕತ್ತ ಮಹಾಧಿವೇಶನದಲ್ಲಿ ಕಮ್ಯುನಿಸ್ಟ್ ಪಕ್ಷವನ್ನು ಸ್ಥಾಪಿಸಲಾಯಿತು. ಸಾಜ್ಜದ್ ಜಹೀರ್ ಅವರನ್ನು ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆ ಮಾಡಲಾಯಿತು. ಹಲವು ಹಿರಿಯ ಕಾರ್ಯಕರ್ತರನ್ನು ಪಾಕಿಸ್ತಾನಕ್ಕೆ ಕಮ್ಯುನಿಸ್ಟ್ ಪಕ್ಷ ಕಟ್ಟಲು ಕಳಿಸಲಾಯಿತು.

ಸಣ್ಣದಾಗಿದ್ದರೂ ಸುಸಂಘಟಿತವಾಗಿ ಹಲವು ಸಾಮೂಹಿಕ ಸಂಘಟನೆಗಳ ನಾಯಕತ್ವ ವಹಿಸಿತ್ತು. ಫೈಜ್ ಅಹ್ಮದ್ ಫೈಜ್ ಎಂಬ ಪ್ರಖ್ಯಾತ ಕವಿಯ ನಾಯಕತ್ವದಲ್ಲಿ ಪ್ರಗತಿಶೀಲ ಬರಹಗಾರರ ಸಂಘಟನೆ, ರೈಲ್ವೆ ಯೂನಿಯನ್, ವಿದ್ಯಾರ್ಥಿ ಫೆಡರೇಷನ್ - ಇವು ಸಾಕಷ್ಟು ಪ್ರಭಾವಶಾಲಿ ಸಂಘಟನೆಗಳಾಗಿದ್ದವು. ಮುಸ್ಲಿಂ ಲೀಗ್‌ನಲ್ಲೂ ಕಮ್ಯುನಿಸ್ಟರ ಜತೆ ಸಹಾನುಭೂತಿ ಇದ್ದ ಪ್ರಗತಿಪರ ನಾಯಕರು ಇದ್ದರು. ಜನ್ನಾ ಮಂತ್ರಿಮಂಡಲದ ಮಂತ್ರಿಯಾದ ಮಿಯಾಂ ಇಫ್ತಿಕ್ರುದ್ದೀನ್ ಇಂತಹವರು ಒಬ್ಬರಾಗಿದ್ದರು. ಅವರೆ ಪಾಕಿಸ್ತಾನ್ ಟೈಮ್ಸ್ ಎಂಬ ಪತ್ರಿಕೆ ಸ್ಥಾಪಿಸಿದವರು. ಆಮೇಲೆ ಮುಸ್ಲಿಂ ಲೀಗ್ ರಾಜಕೀಯದಿಂದ ಬೇಸತ್ತು, ಅಜಾದ್



ಪಾಕಿಸ್ತಾನ್ ಪಾರ್ಟಿ ರಚಿಸಿದರು. ಇನ್ನೂ ಬೆಳೆಯಲಿದ್ದ ಎಳೆಯ ಕಮ್ಯುನಿಸ್ಟ್ ಪಕ್ಷ ನಾಯಕತ್ವವನ್ನು 'ರಾವಲಪಿಂಡಿ ಪಿತೂರಿ' ಮೊಕದ್ದಮೆಯಲ್ಲಿ ಸಿಕ್ಕಿಸಿ ಬಂಧಿಸಲಾಯಿತು. ಪಾಕಿಸ್ತಾನಿ ಸರ್ಕಾರವನ್ನು ಕ್ಷಿಪ್ರಕ್ರಾಂತಿಯ ಮೂಲಕ ಉರುಳಿಸಲು ಪಿತೂರಿ ಹೂಡಿದ್ದಾರೆಂದು ಅವರ ಮೇಲೆ ಆಪಾದನೆ ಮಾಡಲಾಯಿತು. ಇದನ್ನು ಅವರಿಗೆ ಸಾಕ್ಷಿ-ಸಹಿತ ಪುರಾವೆ ಮಾಡಲು ಸಾಧ್ಯವಾಗದಿದ್ದರೂ ಪಕ್ಷವನ್ನು ನಿಷೇಧಿಸಲಾಯಿತು. ಪ್ರಧಾನ ಕಾರ್ಯದರ್ಶಿ ಸಾಜ್ಜದ್ ಜಹೀರ್, ಫೈಜ್ ಅಹ್ಮದ್ ಫೈಜ್ ಸೇರಿದಂತೆ 12 ನಾಯಕರನ್ನು ಬಂಧನದಲ್ಲಿಟ್ಟರು. ಉಳಿದ ನಾಯಕರು ಆಜಾದ್ ಪಾಕಿಸ್ತಾನ ಪಾರ್ಟಿಯ ಮೂಲಕ ಕೆಲಸ ಮಾಡಲಾರಂಭಿಸಿದರು. ಮುಂದೆ ಇತರ ಪ್ರಗತಿಪರರು, ಉದಾರವಾದಿಗಳು ಸೇರಿ ಅದು ನ್ಯಾಶನಲ್ ಅವಾಮಿ ಪಾರ್ಟಿಯಾಯಿತು. ಎಡಪಕ್ಷಗಳು ಮುಖ್ಯ ಶಕ್ತಿಯಾಗಿ ಹೊಮ್ಮಲು ಸತತ ದಮನದಿಂದ ಸಾಧ್ಯವಾಗದೆ ಹೋಯಿತು. ಆದರೆ ಜನ ಎಡ ಬದಲಿಗೆ ಹಾತೊರೆಯುವುದರಿಂದ ಎಡಶಕ್ತಿಗಳು ಇಂತಹ ದಮನದ ನಡುವೆಯೂ ಉಳಿಯುವುದು ಸಾಧ್ಯವಾಯಿತು.

ಪಾಕಿಸ್ತಾನ ಪೀಪಲ್ಸ್ ಪಾರ್ಟಿ

ಇಂತಹುದೇ ಇನ್ನೊಂದು ಬದಲಿಗೆ ಪ್ರಯತ್ನ -ಪಾಕಿಸ್ತಾನ ಪೀಪಲ್ಸ್ ಪಾರ್ಟಿ ರಚನೆಗೆ ಕಾರಣವಾಯಿತು. 1967 ರಲ್ಲಿ ಕಮ್ಯುನಿಸ್ಟ್ ಸಹಾನುಭೂತಿ ಇದ್ದ ರಶೀಂ ಎಂಬುವರು ಪಾಕಿಸ್ತಾನ ಪೀಪಲ್ಸ್ ಪಾರ್ಟಿ ರಚಿಸಿದರು. ಜನರಲ್ ಅಯೂಬ್ ಮಂತ್ರಿಮಂಡಲದಲ್ಲಿ ಮಂತ್ರಿಯಾಗಿದ್ದ ಭುಟ್ಟೋ ಅಯೂಬ್‌ಗೆ ಸವಾಲು ಹಾಕುವ ಪ್ರಯತ್ನದಲ್ಲಿ ಪಾಕಿಸ್ತಾನ ಪೀಪಲ್ಸ್ ಪಾರ್ಟಿ ಸೇರಿದರು. ಈ ಹೊಸ ಪಕ್ಷ ಮತ್ತು ಭುಟ್ಟೋ ಮಿಲಿಟರಿ ಸರ್ವಾಧಿಕಾರದ ವಿರುದ್ಧ ಜನರ ಪ್ರತಿಭಟನೆಯ ಸಂಕೇತವಾದರು. ಪಾಕಿಸ್ತಾನದಲ್ಲಿ ನಡೆದ ಮೊದಲ ಚುನಾವಣೆಯಲ್ಲಿ ಭುಟ್ಟೋ ನೇತೃತ್ವದ ಪಾಕಿಸ್ತಾನ ಪೀಪಲ್ಸ್ ಪಾರ್ಟಿ ಅಧಿಕಾರಕ್ಕೆ ಬಂತು 1977 ರಲ್ಲಿ ಜಿಯಾ-ಉಲ್-ಹಕ್ ಮಿಲಿಟರಿ ಕ್ಷಿಪ್ರಕ್ರಾಂತಿ ನಡೆಸಿ ಧಾರ್ಮಿಕ ಮೂಲಭೂತವಾದಿ - ಮಿಲಿಟರಿ ಸರ್ವಾಧಿಕಾರ ಜಾರಿಗೆ ತಂದ. ಪತ್ರಕರ್ತರು, ಎಡ-ಪ್ರಗತಿಪರ ನಾಯಕರು, ಕಾರ್ಯಕರ್ತರು, ಕ್ರಾಂತಿಕಾರಿಗಳನ್ನು ಬೀದಿಯಲ್ಲಿ ಹೊಡೆದು ಗಲ್ಲಿಗೇರಿಸಲಾಯಿತು. ಈ ಅವಧಿಯಲ್ಲೇ ಮೂಲಭೂತವಾದಿ ಶಕ್ತಿಗಳು ಬಲಗೊಂಡಿದ್ದು. ಇದೇ ಅವಧಿಯಲ್ಲಿ ಅಮೆರಿಕ ಅಫಘಾನಿಸ್ತಾನದಲ್ಲಿ ಮಧ್ಯಪ್ರವೇಶ ಮಾಡಿತು.

1979 ರಲ್ಲಿ ಭುಟ್ಟೋರನ್ನು ಗಲ್ಲಿಗೇರಿಸಲಾಯಿತು. ಪ್ರಜಾಪ್ರಭುತ್ವಕ್ಕೆ ಮರಳಲು ಪಾಕಿಸ್ತಾನ ಜಿಯಾ ಉಲ್ ಹಕ್ ಸಾವಿಗೆ ಕಾಯಬೇಕಾಯಿತು. 1988 ರಲ್ಲಿ ಆಮೇಲೆ ನಡೆದ ಚುನಾವಣೆಗಳ ನಂತರ ಬೆನಜಿರ್ ಭುಟ್ಟೋ ಪಿಪಿಪಿ ಸರ್ಕಾರ ರಚಿಸಿದರು. ಆದರೆ ಆಕೆಯ ಸರ್ಕಾರ ಭ್ರಷ್ಟಾಚಾರ ಆಪಾದನೆಯಲ್ಲಿ ಬಿದ್ದುಹೋಯಿತು. ಆಮೇಲೆ ಬಂದ ಮುಸ್ಲಿಂ ಲೀಗ್ ಸರ್ಕಾರ ಸಹ ಬಿದ್ದುಹೋಯಿತು.

ಮಿಲಿಟರಿ ಸರ್ವಾಧಿಕಾರ ನಾಗರಿಕ ಆಡಳಿತದ ನಡುವೆ ಪುನಃ ಘರ್ಷಣೆ ಆರಂಭವಾಗಿ, 1999 ರಲ್ಲಿ ನಡೆದ ಕ್ಷಿಪ್ರಕ್ರಾಂತಿಯಲ್ಲಿ ಜನರಲ್ ಮುಷರ್ರಫ್ ಅಧಿಕಾರಕ್ಕೆ ಬಂದರು.

ಪಾಕಿಸ್ತಾನದಲ್ಲಿ ಕಮ್ಯುನಿಸ್ಟ್ ಚಳುವಳಿ ವಿಭಜಿತವಾಗಿದೆ. ಮಾವೋವಾದಿಗಳ, ಟ್ರಾಟ್ಸ್ಕಿ ವಾದಿಗಳು ಹೀಗೆ ಹಲವು ಪಂಗಡಗಳಿವೆ. ಈಗ ಇರುವ ಕೆಲವು ಎಡಪಕ್ಷಗಳು ಭಾರತದಿಂದ ಕಮ್ಯುನಿಸ್ಟ್ ಪ್ರತಿನಿಧಿ ಮಂಡಲವೊಂದನ್ನು ಆಹ್ವಾನಿಸಿರುವುದೇ, ಈ ಶಕ್ತಿಗಳು ಪುನಃ ಒಗ್ಗೂಡಿ ಸಂಘಟಿತರಾಗುತ್ತಿವೆ. ಅವು ಬಲಗೊಳ್ಳಬಹುದು ಎಂಬ ಆಶಾದಾಯಕಸೂಚನೆ.

‘ಹೊಸ’ ಯುರೋಪಿನ ಮುಖವಾಡದ ಹಿಂದೆ

ಶರತ್ ಚಂದ್ರ

ಪೂರ್ವ ಯುರೋಪಿನ ಮಾಜಿ-ಸಮಾಜವಾದಿ ದೇಶಗಳಲ್ಲಿ ಏನಾಗುತ್ತಿದೆ? ಹದಿನೈದು ವರ್ಷಗಳ ‘ಬಂಡವಾಳಶಾಹಿ ಪುನಃಸ್ಥಾಪನೆ’ ನಂತರ ಅಲ್ಲಿ ಹಾಲು-ಜೇನು ಹರಿಯುತ್ತಿದೆಯೇ? ಇಲ್ಲ - ಬಹುಸಂಖ್ಯಾತರಿಗೆ ದಕ್ಕಿದ್ದು ನಿರುದ್ಯೋಗ ಮತ್ತು ಜೀವನಮಟ್ಟ ಕುಸಿತ ಅಷ್ಟೇ ಎನ್ನುತ್ತದೆ ಬ್ರಿಟಿಷ್ ಪ್ರಸಿದ್ಧ ಪತ್ರಿಕೆ ‘ಗಾರ್ಡಿಯನ್’ ನ ಒಂದು ಲೇಖನ. ಪೂರ್ವ ಯುರೋಪಿನ ವಿದ್ಯಮಾನಗಳ ಬಗ್ಗೆ ತಜ್ಞರೆಂದು ಹೆಸರಾಗಿರುವ ನೀಲ್ ಕ್ಲಾರ್ಕ್‌ರ ಲೇಖನ. 90 ರ ದಶಕದಲ್ಲಿ ಎಲ್ಲಾ ಪೂರ್ವಯುರೋಪಿನ ದೇಶಗಳಲ್ಲಿ ಒಟ್ಟು ಉತ್ಪನ್ನ ಶೇಕಡಾ 20 ರಿಂದ 40 ರಷ್ಟು ಕುಗ್ಗಿ, ಕೇವಲ ಈ ದಶಕದಲ್ಲಿ 1989 ರ ಮಟ್ಟಕ್ಕೆ ವಾಪಾಸು ಬಂದಿದೆಯಷ್ಟೇ ಎನ್ನುತ್ತಾರೆ ನೀಲ್ ಕ್ಲಾರ್ಕ್

ಬುಡಾಪೆಸ್ಟ್, ಪ್ರಾಗ್, ವಾರ್ಸಾ ಮತ್ತಿತರ ‘ಹೊಸ ಯುರೋಪಿನ’ ರಾಜಧಾನಿಗಳಿಗೆ ವಾರಾಂತ್ಯದ ಅಗ್ಗದ ಪ್ರವಾಸಕ್ಕೆ ಹೋದ ಪಾಶ್ಚಿಮಾತ್ಯರು ಹಳೆಯ ಸಾಂಪ್ರದಾಯಿಕ ಅನಿಸಿಕೆ ಜತೆ ವಾಪಾಸು ಬರಬಹುದು. ಪೂರ್ವ ಯುರೋಪಿನ ಮಾಜಿ-ಕಮ್ಯುನಿಸ್ಟ್ ದೇಶಗಳು ಜಗಜಗಿಸುತ್ತಿವೆ. ಯುರೋಪು ಅಮೆರಿಕಾ ಜತೆ ತಮ್ಮ ದೇಶಗಳ ನಿಕಟ ಸಂಬಂಧ ಹೊಂದಿರುವ ಕಾರಣ ಅಲ್ಲಿನ ಜನಗಳ ಬದುಕು ಸಮೃದ್ಧವಾಗಿದೆ. ಆದರೆ ಈ ಪ್ರವಾಸಿಗಳು ಥಳಥಳಿಸುವ ನಗರ ಕೇಂದ್ರ ಮತ್ತು ಮುಖ್ಯ ರಸ್ತೆಗಳನ್ನು ಬಿಟ್ಟು ಸ್ವಲ್ಪವೇ ಆಚೆ-ಈಚೆಗೆ ಹೋದರೆ ಸಿಗುವ ಚಿತ್ರವೇ ಬೇರೆ. ‘ಆರ್ಥಿಕ ಸುಧಾರಣೆ’ಗಳ ಉತ್ಸಾಹಿಗಳು ಹೇಳಲಾಗದ ಚಿತ್ರ.

ಅಂಕೆ-ಸಂಖ್ಯೆಗಳೇ ಹೆಚ್ಚಿನ ಕಥೆ ಹೇಳಿಬಿಡುತ್ತವೆ. 1989 ನಂತರದ ಒಂದು ದಶಕದಲ್ಲಿ ಮಾಜಿ ಕಮ್ಯುನಿಸ್ಟ್ ದೇಶಗಳ ಒಟ್ಟು ಉತ್ಪಾದನೆ ಶೇಕಡಾ 20 ರಿಂದ 40 ರಷ್ಟು ಕುಸಿಯಿತು. ಇಂತಹ ಕುಸಿತ ಇಡೀ ಜಗತ್ತಿನಲ್ಲೇ ಕಂಡುಬಂದಿದ್ದು 30ರ ದಶಕದ ‘ಮಹಾನ್ ಕುಸಿತ’ದ ಸಂದರ್ಭದಲ್ಲಿ ಮಾತ್ರ ಎನ್ನುತ್ತಾರೆ ಬುಡಾಪೆಸ್ಟ್‌ನ ಆರ್ಥಿಕ ತಜ್ಞ ಲೀಜಲ್ ಎಂಡೋರ್.

20ನೇ ಶತಮಾನದ ಕೊನೆ ಹೊತ್ತಿಗೆ ಈ ದೇಶಗಳಲ್ಲಿ ಪೋಲೆಂಡ್ ಮಾತ್ರ 1989 ರ ಒಟ್ಟು ಉತ್ಪಾದನೆ ಮಟ್ಟಕ್ಕೆ ಮರಳಿ ಬರುವುದು ಸಾಧ್ಯವಾಯಿತು. ಈ ಪ್ರದೇಶದಲ್ಲೇ ‘ಅತ್ಯಂತ ಅಭಿವೃದ್ಧ’ ಆರ್ಥಿಕ ಎನ್ನಿಸಿಕೊಂಡಿದ್ದ ಮತ್ತು ವಿದೇಶಿ ಹೂಡಿಕೆಗೆ ತೆರೆದುಕೊಂಡಿದ್ದ ಹಂಗೇರಿ ಸಹ 1989 ಒಟ್ಟು ಉತ್ಪಾದನೆ ಮಟ್ಟಕ್ಕೆ ಬರಲು 2002 ರ ವರೆಗೆ ಕಾಯಬೇಕಾಯಿತು.

ಈ ದೇಶಗಳ ಸಮಾಜದ ಒಂದು ಅಲ್ಪಸಂಖ್ಯಾತ ಗುಂಪು ಪ್ರಯೋಜನ ಪಡೆದಿದೆ. ಆದರೆ ಬಹುಸಂಖ್ಯಾತ ಜನರು, ತಮ್ಮ ಜೀವನಮಟ್ಟ ಅಗಾಧವಾಗಿ ಕುಸಿದದ್ದು ಕಂಡಿದ್ದಾರೆ. ಹಂಗೇರಿಯಲ್ಲಿ ಆರು ವರ್ಷಗಳಲ್ಲೇ ಸರಾಸರಿ ನಿಜ ವೇತನ (ಶೇಕಡಾ 24 ರಷ್ಟು ಕುಸಿಯಿತು. 1997 ರಲ್ಲಿ ಮಾತ್ರ ಸರಾಸರಿ ನಿಜ ವೇತನ 1989 ರ ಮಟ್ಟಕ್ಕೆ ಮರಳಿತು.

ಅಸಮಾನತೆಯೂ ಅಗಾಧವಾಗಿ ಏರಿದೆ. ಈ ಅವಧಿಯಲ್ಲಿ ತಮ್ಮ ಸಮಾನತೆಯ ಬಗ್ಗೆ ಹೆಮ್ಮೆ ಪಡುತ್ತಿದ್ದ ಈ ದೇಶಗಳಲ್ಲಿನ ಸಮಾತನೆ ಬ್ರಿಟನ್‌ಗಿಂತ ಹೆಚ್ಚಾಗಿದೆ. ಯುವಕರಲ್ಲಿ ನಿರುದ್ಯೋಗ ತೀರಾ ಹೆಚ್ಚಾಗಿದೆ. ಪೋಲೆಂಡ್‌ನಲ್ಲಿ 25 ವರ್ಷಕ್ಕಿಂತ ಕೆಳಗಿನ ವಯಸ್ಸಿನ ಶೇಕಡಾ 39 ಯುವಕರು ನಿರುದ್ಯೋಗಿಗಳಾಗಿದ್ದಾರೆ. ಇದು ಯುರೋಪಿನಲ್ಲೇ ಅತ್ಯಂತ ಹೆಚ್ಚಿನ ನಿರುದ್ಯೋಗದ ಪ್ರಮಾಣ. ಸ್ಲೋವಾಕಿಯಲ್ಲಿ ಇದು ಶೇಕಡಾ 27.

ಸುಧಾರಣೆ ಪರವಾಗಿರುವವರು ಈ ಎಲ್ಲಾ ಸಮಸ್ಯೆಗಳು 40 ವರ್ಷಗಳ ಕಮ್ಯುನಿಸಂನ ಪರಿಣಾಮ ಎಂದು ಬಲವಾಗಿ ನಂಬಿದ್ದಾರೆ. ಆದರೆ ‘ಸುಧಾರಣಾ ಪ್ರಕ್ರಿಯೆ’ ಯೇ ಈ ದುರ್ಗತಿಗೆ ಕಾರಣವಲ್ಲವೇ ? ಈ ದೇಶಗಳ ಆಳುವವರು ಹೇಳುವಂತೆ ಸುಧಾರಣೆ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಎಂದು ಬಹುಸಂಖ್ಯಾತರು ಒಪ್ಪುವುದಿಲ್ಲ, ಬದಲಾಗಿ ಐಎಂಎಫ್-ಯುರೋಪಿಯನ್ ಒಕ್ಕೂಟ ವಿಧಿಸಿದ ಆರ್ಥಿಕ ನೀತಿಗಳೇ ಈ ದುರ್ಗತಿಗೆ ಕಾರಣ ಎನ್ನಲಾರಂಭಿಸಿದ್ದಾರೆ.

15 ವರ್ಷಗಳ ಕಾಲ ‘ಮಿತವ್ಯಯ’ ಅನುಸರಿಸಿದ ಚೆಕ್ ಜನರಿಗೆ ಸಿಕ್ಕಿದ ಯುರೋ-ಧನ ಸಹಾಯ 29 ‘ಯುರೋ’ಗಳಷ್ಟು. ಗ್ರೀಸ್ ಯುರೋಪಿಯನ್ ಒಕ್ಕೂಟಕ್ಕೆ 1981 ರಲ್ಲಿ ಸೇರಿದಾಗ, ಅವರಿಗೆ ತಲಾ 437 ‘ಯುರೋ’ಗಳಷ್ಟು ಧನ ಸಹಾಯ ಸಿಕ್ಕಿದ್ದು, ಹಂಗೇರಿಯನ್ನರಿಗೆ ಸಿಕ್ಕಿದ್ದು 49 ಮತ್ತು ಪೋಲೆಂಡರಿಗೆ ಸಿಕ್ಕಿದ್ದು 67 ಯುರೋಗಳು.

‘ಯುರೋ’ ಸಾಮಾನ್ಯ ನಾಣ್ಯ ವ್ಯವಸ್ಥೆಗೆ 2010 ರ ಹೊತ್ತಿಗೆ ಸೇರ ಬಯಸುವ ದೇಶಗಳಿಗೆ ಈ ವೆಚ್ಚ ಇನ್ನೂ ಹೆಚ್ಚಲಿದೆ. ಯುರೋ ಒಕ್ಕೂಟದ ಸದಸ್ಯ ದೇಶಗಳಲ್ಲಿ ಶೇಕಡಾ 3 ಕ್ಕಿಂತ ಹೆಚ್ಚು ಬಜೆಟ್ ಖೋತಾ ಇರುವ ಹಂಗಿಲ್ಲ. ಈ ನಿಯಮ ಪಾಲನೆ ಎಂದರೆ ಸಾಮಾಜಿಕ ವೆಚ್ಚಗಳಲ್ಲಿ ಖೋತಾ. ಈಚಿನ ವರ್ಷಗಳಲ್ಲಿ ಈ ದೇಶಗಳ ಜನತೆ ಸತತವಾಗಿ ಸಾಮಾಜಿಕ ವೆಚ್ಚಗಳಲ್ಲಿ ಖೋತಾನೇ ಕಂಡಿರುವುದು. ಆರೋಗ್ಯ, ಶಿಕ್ಷಣ, ಮತ್ತಿತರ ಸಾಮಾಜಿಕ ಕಲ್ಯಾಣ ವೆಚ್ಚ ಕಡಿಮೆಯಾಗುತ್ತಿದೆ ಸತತವಾಗಿ. ಯುರೋ-ಒಕ್ಕೂಟದ ನಿಯಮಗಳು ಒಂದು ವಿಧದ ವೆಚ್ಚವನ್ನು ಮಾತ್ರ ಏರಿಸಲು ಅನುಮತಿ ಕೊಡುತ್ತವೆ.

ಪೂರ್ವ ಯುರೋಪಿನ ಸುಧಾರಣಾ - ಪರ ವಾದಿಗಳು ಸೇರಬಯಸುತ್ತಿದ್ದ ಇನ್ನೊಂದು ಕೂಟ ನಾಟೋದ ನಿಯಮಗಳ ಪ್ರಕಾರ ದೇಶದ ಉತ್ಪಾದನೆಯ ಕನಿಷ್ಟ ಶೇಕಡ 2 ರಕ್ಷಣಾ ಖಾತೆಯಲ್ಲಿ ಖರ್ಚು ಮಾಡಬೇಕು. ಒಟ್ಟಾರೆ ಬೇರೆ ಬಾಬ್ತುಗಳಿಗೆ ದುಡ್ಡು ಇರಲಿ, ಇಲ್ಲದಿರಲಿ, ರಕ್ಷಣಾ ಖಾತೆಯ ಮೇಲೆ ಕನಿಷ್ಟ ಅಷ್ಟು ಖರ್ಚು ಮಾಡಲೇಬೇಕು. ಒಂದು ಕಡೆ ಹಂಗೇರಿಯ ಸರ್ಕಾರ ಸಾರ್ವಜನಿಕ ಆರೋಗ್ಯ ಸೇವೆಯನ್ನು ‘ಆರ್ಥಿಕ ಪುನಃಸಂಘಟನೆ’ಗೆ (ಅಂದರೆ ಖಾಸಗೀಕರಣ, ಕಡಿತ) ಗುರಿ ಪಡಿಸದೆ ವಿಧಿಯಿಲ್ಲ ಎನ್ನುತ್ತದೆ. ಅದೇ ಸಮಯದಲ್ಲಿ ಹಂಗೇರಿಯ ರಕ್ಷಣಾ ಖಾತೆ 77 ಲಕ್ಷ ಪೌಂಡು ವೆಚ್ಚದ ಮಿಲಿಟರಿ ಕ್ಷಿಪಣಿಗಳನ್ನು ಸರಬರಾಜು ಮಾಡಲು ಅಮೆರಿಕನ್ ರಕ್ಷಣಾ ಉಪಕರಣಗಳ ಕಂಪನಿ ರ್‍ಯಾಥಿಯನ್‌ಗೆ ಆರ್ಡರು ಕೊಟ್ಟಿದೆ. ಇದಲ್ಲದೆ ಯುರೋ-ಒಕ್ಕೂಟ ಮತ್ತು ನಾಟೋ ಸದಸ್ಯತ್ವದ ನಿಯಮಗಳಿಗೆ ಹೊಂದಾಣಿಕೆ ಗೊಳಿಸಲು, ಸೈನ್ಯದ ಸಿಬ್ಬಂದಿ ತರಬೇತಿಗೆ 3.45 ಕೋಟಿ ಪೌಂಡು ವೆಚ್ಚ ಮಾಡಲಿದೆ.

ಶೇಕಡಾ 17 ರಷ್ಟು ಜನ ಬಡತನದ ರೇಖೆಯ ಕೆಳಗೆ ಬದುಕುತ್ತಿರುವ ಪೋಲೆಂಡ್‌ನಲ್ಲಿ, ಸರ್ಕಾರ ಇತ್ತೀಚೆಗೆ 350 ಕೋಟಿ ಡಾಲರುಗಳ ಫೈಟರ್-ವಿಮಾನಗಳು ಮತ್ತು 25 ಕೋಟಿ ಡಾಲರು ಕಾರ್ಮಿಕ-ವಿರೋಧಿ ಕ್ಷಿಪಣಿಯನ್ನು ಬಂಧಿಸಿದೆ.

ಇಡೀ ಪ್ರದೇಶದಲ್ಲಿ ಯುರೋ-ಅಮೆರಿಕಗಳ ಜತೆ ಸೇರಿಕೊಳ್ಳುವುದನ್ನು ವಿರೋಧಿಸುವ ಪಕ್ಷಗಳು ಮತ್ತು ಗುಂಪುಗಳನ್ನು, ಪಶ್ಚಿಮ ಯುರೋಪಿಯನ್ ಒಡೆತನದ ಮಾಧ್ಯಮಗಳು ‘ಉಗ್ರಗಾಮಿಗಳು’ ಎಂದು ಗುರುತಿಸುತ್ತವೆ. ಆದರೆ ನಿಜವಾಗಿಯೂ ತಮ್ಮ ಆರ್ಥಿಕದ ನಿರ್ವಹಣೆಯನ್ನು ವಿದೇಶಿ ಬಂಡವಾಳ ಮತ್ತು ಚುನಾಯಿತವಲ್ಲದ ಪಾಶ್ಚಿಮಾತ್ಯ ಸಂಸ್ಥೆಗಳಿಗೆ ಬಿಟ್ಟುಕೊಟ್ಟಿದ್ದರಿಂದ ಆಳುವವರು ನಿಜವಾಗಿಯೂ ‘ಉಗ್ರಗಾಮಿಗಳು’.

ಪರಿಸ್ಥಿತಿ ಈ ರೀತಿ ಆಗಬೇಕಿತ್ತೆ? ಮುವತ್ತು ವರ್ಷಗಳ ಹಿಂದೆ ಯುರೋಪಿನಲ್ಲಿ ಪ್ರಗತಿಪರರು ಶೀತಲ‘ಸಮರ ಕಡಿಮೆಯಾಗುತ್ತಿದ್ದಂತೆ ಕನಸು ಕಾಣಲಾರಂಭಿಸಿದ್ದರು. ಪಶ್ಚಿಮ ಯುರೋಪಿನ ‘ಸಾಮಾಜಿಕ ಪ್ರಭುತ್ವ’ಗಳು ಹೆಚ್ಚು ‘ಸಮಾಜವಾದಿ’ಯಾಗುವುವು. ಪೂರ್ವಯುರೋಪಿನ ಸಮಾಜವಾದಿ ದೇಶಗಳಲ್ಲಿ ಅಧಿಕಾರಶಾಹಿ ಕಡಿಮೆಯಾಗುವುದು. ಈ ಎರಡು ಸಮಾಜ ಮಾದರಿಗಳಲ್ಲಿರುವ ಒಳ್ಳೆಯ ಅಂಶಗಳನ್ನು ಹೊಂದಿದ ಮೂರನೇ ವ್ಯವಸ್ಥೆ ಯುರೋಪಿನಲ್ಲೆಲ್ಲಾ ಬರುತ್ತದೆ. ಅರ್ಧ ಕ್ರಿಸ್ಕೀಸ್‌ನ ಆಸ್ಟ್ರೀಯಾ ಮತ್ತು ಅರ್ಧ ಕಾದರ್‌ನ ಹಂಗೇರಿ ಅವರ ಕನಸಾಗಿತ್ತು.

ಜಾಗತಿಕ ಬಂಡವಾಳ ಮತ್ತು ಅದರ ರಾಜಕೀಯ ಪ್ರತಿನಿಧಿಗಳು ಈ ಕನಸು ನನಸಾಗದಂತೆ ನೋಡಿಕೊಂಡರು. ಮಿಶ್ರ ಆರ್ಥಿಕ ವ್ಯವಸ್ಥೆ, ಕಲ್ಯಾಣ ರಾಜ್ಯ ಮತ್ತು ಸಂಪತ್ತಿನ ಒಡೆತನದಲ್ಲಿ ಕನಿಷ್ಟ ಅಸಮಾನತೆ ಇದ್ದ 1970 ರ ದಶಕದ ಆಸ್ಟ್ರೀಯ ಆಗುವ ಬದಲು, ಇಡೀ ಯುರೋಪು 1980 ರ ದಶಕದ ಲ್ಯಾಟಿನ್ ಅಮೆರಿಕಾ ಆಗಿದೆ.

ತಕ್ಷಣದ ಭವಿಷ್ಯದಲ್ಲಿ ಎಷ್ಟೇ ಕತ್ತಲು ಕವಿದಿರಲಿ, ಎಲ್ಲಾ ಬಾಗಿಲುಗಳು ಮುಚ್ಚಿಲ್ಲ. ಕೆಲವೇ ವರ್ಷಗಳ ಹಿಂದೆ ಉದಾರವಾದಿ ರಾಷ್ಟ್ರವಾದ ಫಿಡೆಸರ್ಝ್ ಪಾರ್ಟಿ ಮತ್ತು ಮಾರ್ಕ್ಸ್‌ವಾದಿ ವರ್ಕರ್ಸ್ ಪಾರ್ಟಿಗಳ ನಡುವೆ ಹಂಗೇರಿಯಲ್ಲಿ ಸಂಯುಕ್ತರಂಗ ಬಗ್ಗೆ ಯೋಚಿಸಲೂ ಸಾಧ್ಯವಿರಲಿಲ್ಲ. ಸರ್ಕಾರದ ಆರೋಗ್ಯ ಸೇವೆ ಖಾಸಗೀಕರಿಸುವ ಪ್ರಸ್ತಾವಗಳ ವಿರುದ್ಧ ತೀವ್ರ ಪ್ರಚಾರಾಂದೋಲನ ಕೈಗೊಳ್ಳಲು ಈ ಎರಡು ಪಕ್ಷಗಳು ಕೈಜೋಡಿಸಿವೆ. ಫಿಡೆಸರ್ಝ್ ನಾಯಕ ವಿಕ್ಟರ್ ಒರ್ಬನ್ ಕಮ್ಯುನಿಸ್ಟ್ ಆಡಳಿತದಲ್ಲಿ ಹಲವರಿಗೆ ಜೀವನಮಟ್ಟ ಬಹಳ ಉತ್ತಮವಿತ್ತು ಎಂದಿದ್ದಾರೆ.

ಇದು ಆರಂಭ ಮಾತ್ರ. ನವ-ಉದಾರವಾದದ ದಬ್ಬಾಳಿಕೆಯ ವಿರೋಧಿಸುವ ಎಲ್ಲಾ ಗುಂಪುಗಳು ಕೈಜೋಡಿಸಿ ಜನಪ್ರಿಯ ರಂಗಗಳನ್ನು ಕಟ್ಟಿದರೆ ‘ಹೊಸ ಯುರೋಪು’ ಮತ್ತೆ ಹುಟ್ಟಬಹುದು. ಇಂತಹ ‘ಹೊಸ ಯುರೋಪು’ ವಾರಾಂತ್ಯದ ಪ್ರವಾಸಕ್ಕೆ ಬರುವವರಿಗೆ ಮಾತ್ರವಲ್ಲ, ಅಲ್ಲಿನ ಜನತೆಗೂ ಆಕರ್ಷಕ ಜಾಗವಾದೀತು.

ನೇಪಾಳದಲ್ಲಿ ಪ್ರಜಾಪ್ರಭುತ್ವ ಪುನಃ ಸ್ಥಾಪಿಸಲು ಸಮಾವೇಶ ಕರೆ

ದೆಹಲಿಯಲ್ಲಿ ಪೆಬ್ರವರಿ 24 ರಂದು ರಾಜಕೀಯ ಪಕ್ಷಗಳು ಮತ್ತು ಗುಂಪುಗಳ ದೊಡ್ಡಸಮಾವೇಶ ನೇಪಾಳದಲ್ಲಿ ರಾಜ ಜ್ಞಾನೇಂದ್ರ ತುರ್ತುಪರಿಸ್ಥಿತಿ ಘೋಷಿಸಿದ್ದನ್ನು ತೀವ್ರವಾಗಿ ಖಂಡಿಸಿತು. ನೇಪಾಳದಲ್ಲಿ ಪ್ರಜಾಪ್ರಭುತ್ವ ಹತ್ತಿಕ್ಕಿದನ್ನು ಹಳಿದ ಸಮಾವೇಶ ಅಲ್ಲಿನ ಪ್ರಜಾಪ್ರಭುತ್ವ ಶಕ್ತಿಗಳಿಗೆ ಸೌಹಾರ್ದ ಬೆಂಬಲ ವ್ಯಕ್ತಪಡಿಸಿತು.




ಸಮಾವೇಶದಲ್ಲಿ ಸಿಪಿಐ(ಎಂ), ಸಿಪಿಐ, ಫಾರ್ವರ್ಡ್ ಬ್ಲಾಕ್, ಆರೆಸ್ಪಿ, ಸಿಪಿಐ(ಎಂಎಲ್), ಎನ್‌ಸಿಪಿ, ಆರ್‌ಜೆಡಿ, ಜೆಡಿ-ಎಸ್ ಮತ್ತು ಸಮಾಜವಾದಿ ಪಾರ್ಟಿಗಳು ಭಾಗವಹಿಸಿದ್ದವು. ಸಿಪಿಐ(ಎಂ) ಹರ್‌ಕಿಶನ್ ಸಿಂಗ್ ಸುರ್ಜಿತ್, ಸೀತಾರಾಂ ಯೆಚೂರಿ, ಇಬ್ಬರು ಮಾಜಿ ಪ್ರಧಾನಿಗಳಾದ ವಿ.ಪಿ.ಸಿಂಗ್, ಚಂದ್ರಶೇಖರ್ ಸಮಾವೇಶದಲ್ಲಿ ಭಾಗವಹಿಸಿದ್ದ ಪ್ರಮುಖರು. ಬರ್ದನ್ ಸಿಪಿಐನ್ನು, ಡಿ.ಪಿ. ತ್ರಿಪಾಠಿ ಎನ್‌ಸಿಪಿ ಯನ್ನು ಪ್ರತಿನಿಧಿದ್ದರು.

ತುರ್ತು ಪರಿಸ್ಥಿತಿಯನ್ನು ಹಿಂತೆಗೆಯಬೇಕು, ಬಂಧಿತರಾದ ಎಲ್ಲಾ ನಾಯಕರು, ಕಾರ್ಯಕರ್ತರನ್ನು ತಕ್ಷಣ ಬಿಡುಗಡೆ ಮಾಡ ಬೇಕು, ನೇಪಾಳದಲ್ಲಿ ವಾಕ್ ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವ ಪುನಃ ಸ್ಥಾಪಿಸಬೇಕು. ಈಗಿನ ಸರ್ವಾಧಿಕಾರಿ ಆಡಳಿತಕ್ಕೆ ರಾಜಕೀಯ ಮಾನ್ಯತೆ ಕೊಡುವ ಯಾವುದೇ ಕ್ರಮ ಕೈಗೊಳ್ಳಬಾರದು’ ಎಂದು ಭಾರತ ಸರ್ಕಾರವನ್ನು ಸಮಾವೇಶ ಒತ್ತಾಯಿಸಿತು.

ಪತ್ರಕರ್ತರ ಸಂಘಟನೆಗಳ ಪ್ರತಿಭಟನೆ

ಭಾರತ, ದಕ್ಷಿಣ ಏಶ್ಯಾ ಮತ್ತು ಅಂತರ್ರಾಷ್ಟ್ರೀಯ ಪತ್ರಕರ್ತರ ಹಲವು ಸಂಘಟನೆಗಳು ನೇಪಾಳದಲ್ಲಿ ರಾಜನ ತುರ್ತುಪರಿಸ್ಥಿತಿಯಡಿಯಲ್ಲಿ ಮಾಧ್ಯಮಗಳ ಮೇಲೆ ಹೇರಿರುವ ಪ್ರತಿಬಂಧಗಳಿಗೆ ಪ್ರತಿಭಟಿಸುತ್ತಿದ್ದಾರೆ. ಆ ಅವಧಿಯಲ್ಲಿ ಬೆಂಗಳೂರಿನಲ್ಲಿ ಅಂತರ್ರಾಷ್ಟ್ರೀಯ ಪತ್ರಕರ್ತರ ಫೆಡರೇಷನ್‌ನ ಕಾರ್ಯಾಗಾರ ನಡೆಯುತ್ತಿದ್ದು, ಅದು ನೇಪಾಳ ಸರ್ಕಾರದ ಈ ಕ್ರಮಗಳನ್ನು ಖಂಡಿಸುವ ನಿರ್ಣಯ ಕೈಗೊಂಡಿತು. ಇದರಲ್ಲಿ ಅಖಿಲ ಭಾರತ ಪತ್ರಿಕಾ ಉದ್ಯೋಗಿಗಳ ಫೆಡರೇಷನ್ ಮತ್ತು ಪತ್ರಕರ್ತರ ನ್ಯಾಷನಲ್ ಯೂನಿಯನ್ ಸಹ ಸೇರಿದ್ದವು. ದೆಹಲಿ ಪತ್ರಕರ್ತರ ಯೂನಿಯನ್ ದೆಹಲಿಯಲ್ಲಿ ಒಂದು ಪ್ರತಿಭಟನಾ ರ್‍ಯಾಲಿ ಸಂಘಟಿಸಿತು. ನೇಪಾಳಿ ಪತ್ರಕರ್ತರ ಫೆಡರೇಷನ್ ತುರ್ತುಪರಿಸ್ಥಿತಿಯ ನಡುವೆಯೂ ವಾಕ್ ಸ್ವಾತಂತ್ರ್ಯವೂ, ಪತ್ರಿಕಾ ಸ್ವಾತಂತ್ರ್ಯ ಮತ್ತು ನಾಗರಿಕರ ಇತರಹಕ್ಕುಗಳನ್ನು ಕಿತ್ತುಕೊಂಡಿರುವ ಬಗ್ಗೆ ತೀವ್ರ ಪ್ರತಿಭಟನೆ ಸಲ್ಲಿಸಿದೆ. ಪತ್ರಿಕಾ ಕಚೇರಿಗಳಲ್ಲಿ ಸೈನ್ಯದ ಅಧಿಕಾರಿಗಳು ಬಂದು ಕೂಡುವುದು, ಸಂಪರ್ಕ ಸಾಧನಗಳನ್ನು ಕಡಿತು ಹಾಕಿರುವುದುರ ಬಗ್ಗೆ ತೀವ್ರ ಪ್ರತಿಭಟನೆ ವ್ಯಕ್ತಪಡಿಸಿದೆ.

‘ಗಡಿ ಮೀರಿದ ವರದಿಗಾರರು’ ಎಂಬ ಅಂತರ್ರಾಷ್ಟ್ರೀಯ ವರದಿಗಾರರ ಸಂಘಟನೆ ಸೆನ್ಸಾರ್ ಆದ, ಪ್ರಕಟಿಸಲು ಆಗದ ನೇಪಾಳಿ ಮತ್ತು ನೇಪಾಳದಲ್ಲಿನ ಅಂತರ್ರಾಷ್ಟ್ರೀಯ ವರದಿಗಾರರ ವರದಿಗಳನ್ನು ಇಂಟರ್‌ನೆಟ್‌ನಲ್ಲಿ ಪ್ರಕಟಿಸಲು ಏರ್ಪಾಡು ಮಾಡಿದೆ.



ವ್ಯವಸ್ಥೆಯನ್ನು ಬೆತ್ತಲೆಗೊಳಿಸಿದ 'ಕುರಿ'

ಖ್ಯಾತ ರಂಗಕರ್ಮಿ ಡಾ. ಎಂ.ಎಸ್.ಸತ್ಯುರವರ ರಾಜಕೀಯ ವಿಡಂಬನಾತ್ಮಕ ನಾಟಕ 'ಕುರಿ', ಹಲವಾರು ವಿವಾದದ ನಡುವೆಯೂ 25.02.05ರಂದು ರವೀಂದ್ರ ಕಲಾಕ್ಷೇತ್ರದಲ್ಲಿ 'ಸಮುದಾಯ' ತಂಡದವರಿಂದ ಪ್ರದರ್ಶಿಸಲ್ಪಟ್ಟಿತು.

ಬಹುಜನರ ಬದುಕು ಬಂಗಾರವಾಗುವ ಆಶಯದಿಂದ ರೂಪಿಸಲಾದ ಪ್ರಜಾಪ್ರಭುತ್ವ ವ್ಯವಸ್ಥೆಯ ಅನುಷ್ಠಾನ ಮತ್ತು ನಿರ್ವಹಣೆ ಶೋಷಕ ವರ್ಗದೊಂದಿಗೆ ನಿಂತ ಖಾದಿ, ಖಾವಿ ಮತ್ತು ಖಾಕಿದಾರಿಗಳ ಕೈಯಲ್ಲಿ ಸಿಕ್ಕು ತನ್ನ ನಿಜವಾದ ಅರ್ಥವನ್ನೇ ದುರ್ಬಲಗೊಳಿಸುತ್ತಿದೆ. ಶೋಷಕರು ತಮ್ಮ ಕುಟಿಲ ತಂತ್ರೋಪಾಯಗಳಿಂದ ಜನತೆಯನ್ನು ಮೋಸಗೊಳಿಸಿ, ದುಡಿಯುವ ವರ್ಗದಲ್ಲಿ ಮೂಢನಂಬಿಕೆಗಳನ್ನೇ ಬೆಳೆಸಿ ತಮ್ಮ ಶೋಷಣೆಗೆ ಬಂಡವಾಳವನ್ನಾಗಿ ಬಳಸಿಕೊಳ್ಳುತ್ತಾ, ಆಸೆ-ಆಮಿಷಗಳನ್ನೊಡ್ಡಿ ಓಟು ಪಡೆದು, ದಂಡಾಧಿಕಾರಿ ಮತ್ತು ಕಾನೂನುಗಳನ್ನು ದುರುಪಯೋಗ ಪಡಿಸಿಕೊಂಡು ಜನಸಮುದಾಯವನ್ನು ನಿರಂತರವಾಗಿ ಶೋಷಣೆಗೊಳಪಡಿಸುವ ಮೂಲಕ ಸಕಲ ಸಂಪತ್ತು ಸವಲತ್ತುಗಳನ್ನು ಆಳುವ ವರ್ಗವೇ ಅನುಭವಿಸುತ್ತಾ ಬಂದಿರುವ ಪ್ರಸ್ತುತ ಅಸಮಾನತೆಯ ಸಾಮಾಜಿಕ ಅವ್ಯವಸ್ಥೆಯನ್ನು 'ಕುರಿ' ನಾಟಕ ಪ್ರೇಕ್ಷಕರ ಮುಂದೆ ಬೆತ್ತಲೆಗೊಳಿಸುವುದರಲ್ಲಿ ಯಶಸ್ವಿಯಾಗಿದೆ.

ಉಂಡಾಡಿಕೊಂಡಿದ್ದ ಕುರಿಯೊಂದನ್ನು ದಫೇದಾರನ ಸಹಕಾರದಿಂದ ಕದ್ದು ತಂದ ಮೂವರು ಕಳ್ಳರು ಬದುಕಲು ದಾರಿಯೊಂದನ್ನ ಹುಡುಕಿಕೊಂಡರು. ಅದಕ್ಕೆ 'ಗಾಂಧೀಜಿ ಕುರಿ' ಅಂತ ಹೆಸರಿಟ್ಟು ಪೂಜೆಮಾಡಿದರೆ ಸಕಲ ತಾಪತ್ರಯಗಳು ಕಳೆಯುತ್ತವೆಂದು ಮುಗ್ಧ ಜನರನ್ನು ನಂಬಿಸಿ, ಕುರಿ ಹೆಸರಲ್ಲಿ ಕುರಿ ಸೇವಾ ಕೇಂದ್ರ, ಕುರಿ ಸಂಸ್ಥಾನ, ಕುರಿ ಐ.ಟಿ. ಪಾರ್ಕ್, ಕೊನೆಗೆ ಕುರಿ ಪಾರ್ಟಿಯನ್ನೂ ಹುಟ್ಟುಹಾಕಿ ಚುನಾವಣೆಗೆ ನಿಂತು ಜನರ ಮೌಢ್ಯತೆಗಳನ್ನೇ ಓಟುಗಳಾಗಿ ಪರಿವರ್ತಿಸಿ ಆರಿಸಿ ಬಂದ ಜನ ನಾಯಕರಾಗಿ



ಅಧಿಕೃತ ಶೋಷಣೆಯ ಪುಣ್ಯಕಾರ್ಯಕ್ಕಿಳಿಯುತ್ತಾರೆ. ಕೊನೆಗೆ ಆದರ್ಶವಾದಿ ಯುವಕನಿಂದ ಸತ್ಯ ಗೊತ್ತಾಗಿ ಖಾಕಿ, ಖಾದಿ, ಖಾವಿಧಾರಿಗಳ ವಿರುದ್ಧ ತಿರುಗಿ ಬೀಳುವುದರೊಂದಿಗೆ ನಾಟಕ ಮುಕ್ತಾಯವಾಗುತ್ತದೆ.

ಗಾಂಧಿಜಿಯ ಹೆಸರಲ್ಲಿ ಸಕಲ ಸವಲತ್ತು ಪಡೆದ ಆಳುವ ವರ್ಗಗಳ ಕಪಟ, ಕುತಂತ್ರ, ಹುನ್ನಾರಗಳನ್ನು ಹಾಗೂ ಸ್ವಾತಂತ್ರ್ಯ ನಂತರ ಈ ದೇಶದ ಬಹುಸಂಖ್ಯಾತ ಜನತೆ ಪ್ರಜಾಪ್ರಭುತ್ವದ ಹೆಸರಲ್ಲಿ ಧರ್ಮದ ಹೆಸರಲ್ಲಿ ಶೋಷಣೆಗೆ ಒಳಗಾಗುತ್ತಿರುವ ಪರಿಯನ್ನು ನಾಟಕೀಯ ದೃಶ್ಯಗಳ ಮೂಲಕ ಸಮರ್ಥವಾಗಿ ತೋರಿಸುವಲ್ಲಿ, ಪ್ರಸ್ತುತ ಬಂಡವಾಳಶಾಹಿ ವ್ಯವಸ್ಥೆಯನ್ನು ನಿರ್ದಾಕ್ಷಿಣ್ಯವಾಗಿ ಲೇವಡಿ ಮಾಡುವಲ್ಲಿ ಮತ್ತು ಆಳುವ ವರ್ಗದ ಹಿತಾಸಕ್ತಿಗಳನ್ನು ಪ್ರೇಕ್ಷಕರೆದುರು ಬೆತ್ತಲುಗೊಳಿಸುವಲ್ಲಿ ಹಿರಿಯ ರಂಗ ನಿರ್ದೇಶಕ ಎಂ.ಎಸ್.ಸತ್ಯುರವರು ಯಶಸ್ವಿಯಾಗಿದ್ದಾರೆ.

ಇದುಭವಿಷ್ಯದ ಉಳಿಗಾಲವಲ್ಲ- ಬಲಾಢ್ಯರ ಅಧಿಪತ್ಯ

ಇಂದು ಜಗತ್ತಿನಲ್ಲಿ ಸಾಮ್ರಾಜ್ಯಶಾಹಿ ಶಕ್ತಿಗಳು ಹಾಗೂ ಬಹುರಾಷ್ಟ್ರೀಯ ಕಂಪನಿಗಳು, ಪ್ರಖ್ಯಾತ ಜೀವವಿಕಾಸ ವಿಜ್ಞಾನಿ ಚಾರ್ಲ್ಸ್ ಡಾರ್ವಿನ್‌ನಜೀವ ವಿಕಾಸ ತತ್ವವಾದ "ಬಲಿಷ್ಠರಿಗೆ ಉಳಿಗಾಲ" ಎಂಬುದನ್ನು ಬದಲಿಸಿ ಬಲಿಷ್ಠರಿಗೆ ಉಳಿಗಾಲವಿಲ್ಲ! ಬದಲಾಗಿ ಬಲಾಢ್ಯರಿಗೆ ಮಾತ್ರ ಉಳಿಗಾಲ" (survival of fatest not fittest) ಎಂಬ ನೀತಿಯನ್ನು ಹೇರಲು ಹೊರಟಿವೆ ಎಂದು ಖ್ಯಾತ ಖಗೋಳಶಾಸ್ತ್ರ ವಿಜ್ಞಾನಿ ಡಾ.ಎಸ್.ಚಟರ್ಜಿ ಆರೋಪಿಸಿದರು.

ವಿವಿಧ ಸಾಮೂಹಿಕ ಸಂಘಟನೆಗಳೊಡಗೂಡಿ ಬೆಂಗಳೂರಿನಲ್ಲಿ 'ಪೇಟೆಂಟ್ ಕಾಯ್ದೆ'ಗೆ ಜನವಿರೋಧಿ ತಿದ್ದುಪಡಿಗಳನ್ನು ವಿರೋಧಿಸಿ" ಹಮ್ಮಿಕೊಳ್ಳಲಾಗಿದ್ದ 'ರಾಜ್ಯ ಸಮಾವೇಶ'ವನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಸಾಮ್ರಾಜ್ಯಶಾಹಿಗಳು ಹಾಗೂ ಬಹುರಾಷ್ಟ್ರೀಯ ಕಂಪನಿಗಳು ರೂಪಿಸುತ್ತಿರುವ ಇಂತಹ ಷಡ್ಯಂತ್ರಕ್ಕೆ ತೃತೀಯ ಜಗತ್ತಿನ ದೇಶಗಳ ಜನರು, ಕೃಷಿ, ಔಷಧಿ ಹಾಗೂ ಸೇವಾ ಕ್ಷೇತ್ರಗಳು ಮಾತ್ರ ಬಲಿಯಾಗಿದ್ದಲ್ಲ ಬದಲಾಗಿ ಪ್ರಖ್ಯಾತ ವಿಜ್ಞಾನಿಗಳ ಬೌದ್ಧಿಕತೆಯನ್ನು ಮಾರಿಕೊಂಡುಬಿಟ್ಟಿದ್ದಾರೆ. ಅದರ ಪರಿಣಾಮವಾಗಿ, ತೃತೀಯ ಜಗತ್ತಿನಲ್ಲಿ ಬಹುರಾಷ್ಟ್ರೀಯ ಕಂಪನಿಗಳ ಪರವಾಗಿ ಓಡಾಡುತ್ತಾ ಜಗತ್ತಿನ ವಿವಿಧ ದೇಶಗಳು ತಮ್ಮ-ತಮ್ಮ ದೇಶಗಳ ಪೇಟೆಂಟ್ ಕಾನೂನಿಗೆ ತಿದ್ದುಪಡಿಗಳನ್ನು ತರಲು ಒತ್ತಡಗಳು ಹೇರುತ್ತಿದ್ದಾರೆ. ಇಂತಹ ವಿಜ್ಞಾನಿಗಳ ಬಳಕೆಯಿಂದ ಅವರು ಪೇಟೆಂಟ್ ಕಾನೂನು ತಿದ್ದುಪಡಿಯಿಂದ ಸಾಕಷ್ಟು ಲಾಭಗಳಿವೆ ಎಂದು ನಂಬಿಸಲು ಅವರು ಪ್ರಯತ್ನಿಸುತ್ತಿರುತ್ತಾರೆ. ಅದರಲ್ಲಿ ಮುಖ್ಯವಾಗಿ ಈ ರೀತಿಯ ಪೇಟೆಂಟ್ ಕಾನೂನುಗಳಿಗೆ ತಿದ್ದುಪಡಿ ಮಾಡುವುದರಿಂದ ಹೆಚ್ಚು ಹೆಚ್ಚು ವಸ್ತುಗಳನ್ನು ಉತ್ಪಾದಿಸಲು ಅವಕಾಶವಾಗುತ್ತದೆ ಮತ್ತು ಆಯಾ ದೇಶದ ಮಾನವ ಸಂಪನ್ಮೂಲ ತನ್ನ ಈ ಉತ್ಪಾದನೆಲ್ಲಿ ತೊಡಗಿಸುವುದರಿಂದ ಅಲ್ಲಿಯ ಮಾರುಕಟ್ಟೆ ವಿಸ್ತೀರ್ಣಗೊಳ್ಳುತ್ತದೆ ಎಂಬ ಮಿಥ್ಯಾಗಳನ್ನು ಅವರು ಹರಿಯಬಿಡುತ್ತಾರೆ. ಈ ಬಗ್ಗೆ ಎಚ್ಚರಿಕೆ ಅಗತ್ಯವೆಂದರು.

ಅದಲ್ಲದೆ ಈ ಪೇಟೆಂಟ್ ತಿದ್ದುಪಡಿಗಳು ವಿಜ್ಞಾನ ಮತ್ತು ಸಂಶೋಧನೆಗೆ ಬೆಳವಣಿಗೆಗೆ



ಯಾವುದೇ ಸಹಾಯವನ್ನು ಮಾಡುವುದಿಲ್ಲ ಮಾತ್ರವಲ್ಲ ಯಾವ್ಯಾವ ದೇಶಗಳು ಈ ರೀತಿಯ ತಿದ್ದುಪಡಿಗಳನ್ನು ಅಳವಡಿಸಿಕೊಳ್ಳುತ್ತವೋ ಅಂತಹ ದೇಶಗಳಲ್ಲಿ ವಿಜ್ಞಾನ ಮತ್ತು ಸಂಶೋಧನೆ ಬೆಳವಣಿಗೆ ತೀವ್ರ ಕುಸಿತ ಕಂಡಿವೆ.

ಬಹುರಾಷ್ಟ್ರೀಯ ಕಂಪನಿಗಳ ಈ ಲಾಭಕೋರತನವನ್ನು ಈಗ ಜಗತ್ತಿನೆಲ್ಲೆಡೆ ತೀವ್ರ ವಿರೋಧ ವ್ಯಕ್ತವಾಗುತ್ತಿದೆ. ... ಕರಡನ್ನು ಬರೆದಂತಹ ಜಸ್ಟೀಸ್ ಭಗವತಿಯವರೇ ಈ ಪೇಟೆಂಟ್ ಕಾಯ್ದೆಗೆ ತಿದ್ದುಪಡಿ ತರಲು ಹೊರಟಿರುವ ಸರ್ಕಾರದ ಕ್ರಮಗಳನ್ನು ವಿರೋಧಿಸಿರುವುದು ಗಮನಾರ್ಹ ಸಂಗತಿ. ಈ ಪೇಟೆಂಟ್... ತಿದ್ದುಪಡಿ ಜೈವಿಕ ತಂತ್ರ ಜ್ಞಾನವನ್ನು ಒಳಪಡಿಸುತ್ತದೆ. ಜಗತ್ತಿನಲ್ಲಿ ಜೈವಿಕ ತಂತ್ರಜ್ಞಾನದಲ್ಲಿ ಮಹಾನ್ ಮುನ್ನಡೆ ಸಾಧಿಸಿರುವ ದೇಶಗಳಲ್ಲಿ ಆರೋಗ್ಯ ಅವಕಾಶಗಳು ಗರಿಷ್ಠ ಮಟ್ಟದಲ್ಲಿವೆ. ಭಾರತದಂತಹ ದೇಶಗಳು ಈ ತಿದ್ದುಪಡಿಗೆ ತಲೆ ಬಾಗಲಿವೆ. ಆರೋಗ್ಯ ಕ್ಷೇತ್ರದಲ್ಲಿ ಬಾರೀ ತೊಂದರೆಗಳನ್ನು ಅನುಭವಿಸಬೇಕಾಗುತ್ತದೆ. ಕೃಷಿ ಕ್ಷೇತ್ರದಲ್ಲಿ ತೀವ್ರ ಬದಲಾವಣೆಗಳು ಉಂಟಾಗುತ್ತದೆ. ಇಂತಹ ಜನವಿರೋಧಿ ತಿದ್ದುಪಡಿಗಳನ್ನು ತಡೆಯಲು ಸಾಧ್ಯವಿರುವುದು ಜನರ ಸಾಮೂಹಿಕ ಹೋರಾಟಗಳಿಂದ ಮಾತ್ರ ಸಾಧ್ಯ ಎಂದರು.

ಸಮಾವೇಶದಲ್ಲಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರು ಹಾಗೂ ಶಾಸಕರಾದ ಕಾಂ.ಜಿ.ವಿ.ಶ್ರೀರಾಮರೆಡ್ಡಿ ಪೇಟೆಂಟ್ ಕಾನೂನು ತಿದ್ದುಪಡಿ ಹಿಂದಿರುವ 'ಸಾಮ್ರಾಜ್ಯಶಾಹಿಗಳ ರಾಜಕೀಯ ಪಿತೂರಿ" ಕುರಿತು ಭಾರತದ ಆರೋಗ್ಯ ಕ್ಷೇತ್ರದ ಮೇಲೆ ಉಂಟಾಗುವ ಪರಿಣಾಮ ಕುರಿತು ಡಾ.ಪ್ರಕಾಶ್.ಸಿ.ರಾವ್ ಕಾನೂನು ಕ್ಷೇತ್ರದಲ್ಲಿನ ಪರಿಣಾಮಗಳು ಕುರಿತು ಕೆ.ಆರ್.ವೆಂಕಟೇಶಗೌಡ, ಕೃಷಿ ಕ್ಷೇತ್ರದ ಮೇಲೆ ಆದ ಪರಿಣಾಮ ಕುರಿತು ಕರ್ನಾಟಕ ಪ್ರಾಂತ ರೈತ ಸಂಘದ ಅಧ್ಯಕ್ಷರಾದ ಮಾರುತಿ ಮಾನ್ಪಡೆ ವಿಚಾರಗಳನ್ನು ಮಂಡಿಸಿದರು.

ಡಾ.ನಿತ್ಯಾನಂದಸ್ವಾಮಿ, ಕಾಂ.ಗೌರಮ್ಮ ಕಾಂ.ವೆಂಕಟೇಶಗೌಡ, ಕಾಂ.ವಿ.ಜೆ.ಕೆ.ನಾಯರ್ ಅವರನ್ನು ಒಳಗೊಂಡ ಅಧ್ಯಕ್ಷೀಯ ಮಂಡಳಿ ಸಮಾವೇಶವನ್ನು ನಡೆಸಿಕೊಟ್ಟಿತು. ಅಧ್ಯಕ್ಷೀಯ ಮಂಡಳಿ ಪರವಾಗಿ ಕಾಂ.ನಿತ್ಯಾನಂದಸ್ವಾಮಿ ಮಾತನಾಡಿದರು.

ಪ್ರಸ್ತಾವಿಕವಾಗಿ ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಕಾಂ.ವಿ.ಜೆ.ಕೆ.ನಾಯರ್ ಮಾತನಾಡಿ ಇಂತಹ ತಿದ್ದುಪಡಿಗಳ ಹಿಂದೆ 'ವಿದೇಶಿ ಶಕ್ತಿಗಳ' ಕೈವಾಡ ಇದೆ ಎಂಬುದು ಅತ್ಯಂತ ಸ್ಪಷ್ಟ ಆದರೆ ಅಂತಹ ಶಕ್ತಿಗಳ ಜೊತೆ ಕೈ ಜೋಡಿಸುತ್ತಿರುವ ನಮ್ಮ ದೇಶದ ಆಳುವ ವರ್ಗ ಹಾಗೂ ಸರ್ಕಾರಗಳ ವಿರುದ್ಧ ತೀವ್ರ ರೀತಿಯ ಜನರ ಸಾಮೂಹಿಕ ಹೋರಾಟಗಳು ನಡೆಯಬೇಕಾದ ಡಬ್ಲ್ಯುಟಿಒ ಪಿತೂರಿಯಿಂದ ಬಂದಿರುವ ಈ ವಿಷಯಗಳಿಗೆ ವಿರುದ್ಧವಾಗಿ ಪರ್ಯಾಯವನ್ನು ರೂಪಿಸಬೇಕಿದೆ. ಪರ್ಯಾಯಗಳಿಲ್ಲದೆ ಸಾಮ್ರಾಜ್ಯಶಾಹಿ ಪ್ರೇರಿತ ಈ ಪ್ರಶ್ನೆಗಳಿಗೆ ಪರಿಹಾರ ಹುಡುಕಲು ಸಾಧ್ಯವಿಲ್ಲ ಎಂದು ಕಾಂ.ವಿ.ಜೆ.ಕೆ.ನಾಯರ್ ಹೇಳಿದರು.

ಕೆ.ಪಿ.ಆರ್.ಎಸ್ ಪ್ರ.ಕಾರ್ಯದರ್ಶಿ, ಜಿ.ಸಿ.ಬಯ್ಯಾರೆಡ್ಡಿ, ಎಐಎಡಬ್ಲ್ಯುಯು ರಾಜ್ಯ ಪ್ರಧಾನ ಕಾರ್ಯದರ್ಶಿ ಚಂದ್ರಪ್ಪ ಹೊಸ್ಕೇರಾ ವೇದಿಕೆಯಲ್ಲಿದ್ದರು.

ಸಿಐಟಿಯು ರಾಜ್ಯ ಕಾರ್ಯದರ್ಶಿ ಎಸ್.ಪ್ರಸನ್ನಕುಮಾರ್ ವೇದಿಕೆಯಲ್ಲಿದ್ದು ಕಾರ್ಯಕ್ರಮ ನಿರ್ವಹಿಸಿದರು. ಡಿವೈಎಫ್ಐ ರಾಜ್ಯ ಕಾರ್ಯದರ್ಶಿ ಕೆ.ಮಹಾಂತೇಶ್ ಸ್ವಾಗತಿಸಿದರೆ ಎಸ್.ಎಫ್ಐ ರಾಜ್ಯ ಅಧ್ಯಕ್ಷರಾದ ಬಿ.ರಾಜಶೇಖರಮೂರ್ತಿ ವಂದನಾರ್ಪಣೆ ನೆರವೇರಿಸಿದರು.

ಕಮ್ಯುನಿಸ್ಟರು

ಅಂತರಂಗದ ಭಾವನೆಗಳ
ಬಹಿರಂಗಪಡಿಸುವಲ್ಲಿ
ತಗ್ಗು-ದಿನ್ನೆಗಳ ಇಳಿದೇರಿದವರು
ಮುಳ್ಳು ಹಾದಿಯ ಪ್ರಯಾಸದಲ್ಲೂ ಹರ್ಷಿಸಿದವರು
ಗುಂಡಿಗೆಯ ಗರಡಿ ಮನೆಯಲ್ಲಿ
ಸ್ವ-ವಿಮರ್ಶೆಗೊಳಪಡಿಸುತ್ತ
ಹುಚ್ಚು ಭ್ರಮೆಯ ಸರಿಸಿದವರು
ವಾಸ್ತವಕ್ಕೆ ತಕ್ಕಂತೆ ತಮ್ಮೊಲವ ಬದಲಿಸಿಕೊಂಡವರು
ವೈಯಕ್ತಿಕ ಹಿತಾಸಕ್ತಿಯ ದೂರ ತಳ್ಳುತ್ತ
ನೊಂದ ಜನರ ಬದುಕ
ಬವಣೆಯಲ್ಲಿ ಬೆರೆತವರು
ಸ್ಫೂರ್ತಿಯ ಭರವಸೆಯ ದೀವಿಗೆಯಾದವರು
ಆರ್ತನಾದವ ಎತ್ತಿ ಹಿಡಿದು
ಶೋಷಿತ ಜನರಲ್ಲೊಂದಾಗುತ್ತ
ಸಾಮ್ರಾಜ್ಯ ಶಾಹಿ-ಭೂಮಾಲಿಕ- ಬಂಡವಾಳಿಗರೆದುರು
ಧ್ವನಿ ಮೊಳಗಿಸಿದವರು
ಹೋರಾಟದಿ ಅನ್ಯಾಯದ ಸೊಲ್ಲನ್ನಡಗಿಸಿದವರು
ಕಣ್ ರೆಪ್ಪೆಗಳಲ್ಲಿ
ಕ್ರಾಂತಿಯ ಕಾಂತಿ ಚಿಮ್ಮಿಸುತ್ತ
ಕೊನೆ ಧ್ವನಿಯನ್ನಿದಕ್ಕೆ ಮೀಸಲಿಟ್ಟವರು
ತ್ಯಾಗಗಳ ಹೊಸ ಇತಿಹಾಸ ಸೃಷ್ಟಿಸ ಹೊರಟವರು
ವಿಶ್ವಮಾನವ ತತ್ವ ಬೆಳಗುವವರು
ಮುಂದಿನ ಪೀಳಿಗೆಗೆ ಮಾದರಿಯಾದವರು
ಇವರು ಕಮ್ಯುನಿಸ್ಟರು - ಮಾರ್ಕ್ಸ್-ಲೆನಿನರ
ಕಮ್ಯೂನಿಸಂ ತತ್ವ ಒಪ್ಪಿದವರು - ಅಪ್ಪಿದವರು

- ಎನ್.ವಿ.ವಿಜಯಲಕ್ಷ್ಮಿ, ಬಳ್ಳಾರಿ

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462.
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.

Printed & Published by Communist Party of India(Marxist), Karnataka State Committee. Editor : S.Y.GURUSHANTH